ಸದನವು ಮಧ್ಯಾಹ್ನ 3.10 ಕ್ಕೆ ಸಮಾವೇಶಗೊಂಡಿತ್ತು.

ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ರವರು ಪೀಠವನ್ನು ಅಲಂಕರಿಸಿದ್ದರು.

2. ನಿಲುವಳಿ ಸೂಚನೆ :

ವಿದ್ಯುತ್ ದರವನ್ನು ಹೆಚ್ಚಿಸಿರುವ ಬಗ್ಗೆ (ಮುಂದುವರಿದ ಚರ್ಚೆ)

+ ಶ್ರೀ ಬಿ. ಎಸ್. ಯಡಿಯೂರಪ್ಪ : (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ ಪ್ರತಿಪಕ್ಷದ ಈ ಭಾಗದಲ್ಲಿ ಕುಳಿತಿರತಕ್ಕ ನಾವೆಲ್ಲ ಒಟ್ಟಾಗಿ ಸೇರಿ ಇವತ್ತು ಈ ವಿದ್ಯುತ್ ದರವನ್ನು ಮತ್ತೆ 300 ಕೋಟಿ ರೂಪಾಯಿ ಜಾಸ್ತಿ ಮಾಡಿರುವಂಥ ನೋಟಿಫಿಕೇಷನ್ ಅನ್ನು ಸಂಪೂರ್ಣವಾಗಿ ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುವುದಕ್ಕೋಸ್ಕರ ಈ ನಿಲುವಳಿ ಸೂಚನೆಯನ್ನು ನಾವು ತಮ್ಮ ಮುಂದಿಟ್ಟಿದ್ದೇವೆ. ಬಹುಶಃ ಆ ಭಾಗದಲ್ಲಿ ಮತ್ತು ಈ ಭಾಗದಲ್ಲಿ ಕುಳಿತಿರತಕ್ಕ ಎಲ್ಲಾ ಶಾಸಕರನ್ನು ನಾನು ಮೊನ್ನೆ ಪ್ರತಿಯೊಂದು ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಭೇಟಿಯಾಗಿದ್ದೇನೆ. ಈ ವಿದ್ಯುತ್ ದರವನ್ನು ಶೇಕಡ 35 ರಿಂದ 60-70-80 ಪರ್ಸೆಂಟ್ ಜಾಸ್ತಿ ಮಾಡಿ 700 ಕೋಟಿ ರೂಪಾಯಿ ಹೆಚ್ಚಿಗೆ ತೆರಿಗೆ ಹಾಕಿ ಗ್ರಾಹಕರ ಕೀಲನ್ನು ಮುರಿದಂಥ ಸರ್ಕಾರ ಈ ಇಲಾಖೆ ಮತ್ತೊಮ್ಮೆ 300 ಕೋಟಿ ರೂಪಾಯಿ ತೆರಿಗೆಯನ್ನು ಎಲ್ಲಾ ವರ್ಗದ ಗ್ರಾಹಕರ ಮೇಲೆ ಏರಿಸುವಂಥ ಆದೇಶವನ್ನು ಹೊರಡಿಸಿದೆ.

ಕಳೆದ ಒಂದೂವರೆ ಎರಡು ತಿಂಗಳಿನಿಂದ ರಾಜ್ಯದ ಉದ್ದಗಲಕ್ಕೆ 45 ದಿವಸ, ಪ್ರತಿಯೊಂದು ಜಿಲ್ಲೆಯಲ್ಲೂ 2 ದಿವಸ ಪ್ರವಾಸ ಮಾಡುವಂತಹ ಪ್ರಯತ್ನವನ್ನು ಮತ್ತು ಅಲ್ಲಿರುವಂತಹ ಹಿರಿಯರ ಜೊತೆ ಸಮಾಲೋಚನೆ ಮಾಡುವಂತಹ ಪ್ರಯತ್ನವನ್ನು ನಾನು ಮತ್ತು ನಮ್ಮ ಪಕ್ಷದ ಮುಖಂಡರು ಮಾಡಿ ಬಂದಿದ್ದೇವೆ. ಬಹುಶಃ ಆ ಕಡೆ ಈ ಕಡೆ ಕುಳಿತಿರುವಂತಹ ಶಾಸಕರ ಪ್ರಶ್ನೆ ಇದಲ್ಲ. ಕಳೆದ ಒಂದು ವರ್ಷದಿಂದೀಚೆಗೆ ಮೂರು ಬಾರಿ ವಿದ್ಯುತ್ ದರವನ್ನು ಜಾಸ್ತಿ ಮಾಡಿದರು.ಸದನ ಸಮಿತಿ ಮಾಡಿ ನಾವು ಒಂದು ವರದಿಯನ್ನು ಕೊಟ್ಟ ಮೇಲೆ ಅದಕ್ಕೆ ಗೌರವ ಕೊಡದೆ, ಒಂದುರೀತಿಯ ಲೆಜ್ಜೆಗೆಟ್ಟ ರೀತಿಯಲ್ಲಿ ಮತ್ತೊಮ್ಮೆ 2ನೇ ಬಾರಿಗೆ ವಿದ್ಯುತ್ ದರವನ್ನು ಜಾಸ್ತಿ ಮಾಡುವಂತಹ ಪ್ರಯತ್ನವನ್ನು ಈ ಸರ್ಕಾರ ಮಾಡಿದೆ. ಈಗ ಮೂರನೇ ಬಾರಿ ದರ ಏರಿಸಲು ಯೋಚಿಸುತ್ತಿದೆ. ಕುಡಿಯುವ ನೀರಿನ ದರವನ್ನು ಜಾಸ್ತಿಮಾಡಿದಿರಿ, ಸಾರಿಗೆ ದರವನ್ನು ಜಾಸ್ತಿ ಮಾಡಿದಿರಿ, ಮನೆಗಳಲ್ಲಿ ವಾಸ ಮಾಡುವಂತಹ ಮನೆಯ ಆ ಜನರ ಟ್ಯಾಕ್ಸ್‌ನ್ನು ಜಾಸ್ತಿ ಮಾಡಿದಿರಿ, ಒಂದು ಅಂದಾಜಿನ ಪ್ರಕರಾ, ಒಂದು ಮಧ್ಯಮವರ್ಗದ ಕುಟುಂಬಕ್ಕೆ

ಕಳೆದ ಒಂದು ವರ್ಷದಲ್ಲಿ ಇವರು ಹಾಕಿರುವಂತಹ ತೆರಿಗೆ ಬಾಬಿನಿಂದ ಸುಮಾರು ಐನೂರು ಆರುನೂರಕ್ಕೂ ಹೆಚ್ಚು ತೆರಿಗೆಯನ್ನು ಕೊಡುವಂತಹ ದುಸ್ಥಿತಿ, ಒಂದಿದೆ ಎಂದು ನಾನು ಹೇಳುತ್ತಿದ್ದೇನೆ. ನಾನು ಈ ಸರ್ಕಾರವನ್ನು ಕೇಳುತ್ತೇನೆ, ನಿಮಗೆ ಈ ರಾಜ್ಯದ ಜನತೆ ಮಾಲೀಕರು ಎನ್ನುವುದು ಮರೆತುಹೋಗಿದೆಯೇ? ಅಧಿಕಾರಿಗಳ ತಾಳಕ್ಕೆತಕ್ಕಂತೆ ಕುಣಿದು, ಆ ಇಲಾಖೆಗಳನ್ನು ಸರಿಪಡಿಸುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನೂ ಸಹ ಮಾಡಿದೆ, ಈ ರೀತಿಯಾಗಿ ಜನರನ್ನು ದುಸ್ಥಿತಿಗೆತಂದು ಅವರ ಜೋಬಿನಲ್ಲಿರುವ ದುಡ್ಡನ್ನು ದೋಚುವಂತಹ ಕೆಲಸ ಮಾಡುವುದಕ್ಕೆ ಹೊರಟಿದ್ದೀರಲ್ಲಾ ಅದಕ್ಕಾಗಿ ಜನ ನಿಮಗೆ ಅಧಿಕಾರವನ್ನು ಕೊಟ್ಟರೆ? ತಾವು ಚುನಾವಣಾ ಸಮಯದಲ್ಲಿ ಬಹಳ ಹಿಂದೆಯೇ ಹೇಳಿದ್ದೀರಿ, ನಾವು ನಿಯಮಬದ್ಧರು, ಕಾಲಬದ್ಧರು ಎಂದು. ಯಾವುದಕ್ಕೆ ನಿಯಮ ಬದ್ಧರು? ಹೆಚ್ಚಿನ ತೆರಿಗೆಯನ್ನು ಹಾಕುವುದಕ್ಕೆ ತಾವು ನಿಯಮಬದ್ಧರು, ಆ ತೆರಿಗೆಯನ್ನು ವಸೂಲು ಮಾಡುವುದಕ್ಕೆ ತಾವು ಕಾಲಬದ್ಧರು. ಜನಹಿತಕ್ಕೋಸ್ಕರವಾಗಿ ಅಲ್ಲ. ಈ ಜನರು ನೆಮ್ಮದಿಯಿಂದ, ಸ್ವಾಭಿಮಾನದಿಂದ ಬಾಳಿ ಬದುಕಬೇಕೆನ್ನುವುದನ್ನು ನೋಡಬೇಕೆನ್ನುವ ಹಂಬಲ. ಪ್ರಾಮಾಣಿಕತೆ ಕಳಕಳಿ, ಆ ಪೊಲಿಟಿಕಲ್ ವಿಲ್ ಬಹುಶಃ ಸಂಪೂರ್ಣವಾಗಿ ನಿಮಗೆ ಮರೆತುಹೋಗಿದೆ. ಹಾಗೀಗಿ ಇವತ್ತು ಮನಬಂದಂತೆ ಈ ರೀತಿ ತೆರಿಗೆಯನ್ನು ಜಾಸ್ತಿ ಮಾಡುವ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ನಾವು ಈ ಕೆ.ಇ.ಬಿ. ಇಲಾಖೆಗೆ ಲುಕ್ಸಾನಾಗಬೇಕು, ಅದರ ಬಾಗಿಲು ಹಾಕಬೇಕೆನ್ನುವ ಉದ್ದೇಶ ನಮಗೆ ಈ ಕಡೆ ಕುಳಿತಿರುವವರಲ್ಲಿ ಇಲ್ಲ ನಿಜವಾಗಲೂ, ಯಾವುದೇ ಸರ್ಕಾರವಾದರೂ ಸಕಾಲದಲ್ಲಿ ಅನಿವಾರ್ಯ ಬಂದಾಗ ತೆರಿಗೆಯನ್ನು ಹಾಕಲೇಬೇಕಾಗುತ್ತದೆ, ಜನರಿಗೆ ಸವಲತ್ತುಗಳನ್ನು ಒದಗಿಸಿಕೊಡಬೇಕಾಗುತ್ತದೆ. ತೆರಿಗೆ ವಸೂಲು ಮಾಡದೆಯೇ ಯಾವುದೇ ಇಲಾಖೆಯನ್ನು ನಡೆಸುವುದಕ್ಕಾಗುವುದಿಲ್ಲ. ಸರ್ಕಾರ ನಡೆಯುವುದಕ್ಕಾಗುವುದಿಲ್ಲ ಎಂಬುವ ಅರಿವೂ ಸಹ ನಮಗಿದೆ. ನಾನು ನಿಮ್ಮನ್ನು ಕೇಳುತ್ತೇನೆ. ಆ ಕಡೆ ಕುಳಿತಿರುವಂತಹ ಹಿರಿಯ ಸಚಿವರನ್ನು, ಸ್ವಾತಂತ್ರ್ಯ ಬಂದ ಮೇಲೆ ಯಾವುದಾದರೊಂದು ರೀತಿಯಲ್ಲಿ ಒಂದು ಇಲಾಖೆಯಲ್ಲಿ ಒಂದು ವರ್ಷದಲ್ಲೇ ಒಂದು ಸಾವಿರ ಕೋಟಿ ರೂಪಾಯಿ ಹೆಚ್ಚು ತೆರಿಗೆಯನ್ನು ಹಾಕಿದಂತಹ ಉದಾಹರಣೆಯನ್ನು ದಯಮಾಡಿ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಪರಿಶೀಲಿಸಿ. ಎಲ್ಲಾ ಗ್ರಾಹಕರಿಂದ 1,500 ಕೋಟಿ ರೂಪಾಯಿ ಆದಾಯ ಬರುತ್ತಿದ್ದಂತಹ ಈ ಕೆಇಬಿ ಇಲಾಖೆ ಮೊನ್ನೆ ಜುಲೈನಲ್ಲಿ ಸುಮಾರು 700-800 ಕ್ಕೂ ಹೆಚ್ಚು ತೆರಿಗೆಯನ್ನು ರಹಾಕಿದೆ. ಮತ್ತೆ, 300 ಕ್ಕೂ ಹೆಚ್ಚು ತೆರಿಗೆಯನ್ನು ಹಾಕುವಂತಹ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿದೆ. ನಾನು ಇವರಿಗೆ ಕೇಳುವುದಕ್ಕೆ ಇಚ್ಚಿಪಡುತ್ತೇನೆ, ವಿಚಿತ್ರವೆಂದರೆ, ಈ ಇಲಾಖೆಗೆ ಪ್ರತಿದಿನ ಎಷ್ಟು

ವಿದ್ಯುತ್‌ಸರಬರಾಜಾಗುತ್ತಿದೆ? ಇದರಲ್ಲಿ ಎಷ್ಟು ವಿದ್ಯುತ್‌ನ್ನು ಮಂಡಳಿ ಯಾವ ಯಾವ ಕ್ಷೇತ್ರಕ್ಕೆ ನೀಡುತ್ತಿದೆ? ಈ ಬಗ್ಗೆಏನಾದರೂ ಲೆಕ್ಕ ಇದೆಯೇ? ನಾನು ಸ್ಪಷ್ಟವಾಗಿ ಹೇಳುತ್ತೇನೆ, ಖಂಡಿತ ನಿಮ್ಮ ಹತ್ತಿರ ಇಲ್ಲ. ಏಕೆ? ಶೇಕಡಾ 42 ಭಾಗ ಮಾತ್ರ ವಿದ್ಯುತ್ ಉಪಯೋಗಿಸುವಂತಹ ಗ್ರಾಹಕರಿಗೆ ಮೀಟರೀಕರಣ ಮಾಡಿದ್ದೀರಿ. ಉಳಿದಂತಹ ಶೇಕಡಾ 58 ಭಾಗ ವಿದ್ಯುತ್ ಉಪಯೋಗ ಮಾಡುವಂತಹವರಿಗೆ ಮೀಟರೇ ಇಲ್ಲ. ಲೆಕ್ಕ ಬುಕ್ ನಿಮಗೆ ಹೇಗೆ ಸಿಗುತ್ತದೆ? ಯಾವುದಾದರೊಂದು ಕುಟುಂಬ, ಈ ರೀತಿ ಲೆಕ್ಕ ಬುಕ್ ಇಲ್ಲದೇ ನಡೆಯುವುದಕ್ಕಾಗುತ್ತದೆಯೇ? ಉದ್ಧಾರವಾಗುವುದಕ್ಕೆ ಸಾದ್ಯವೇ? ಒಂದು ಇಲಾಖೆಯನ್ನು ಈ ರೀತಿ ನಡೆಸಿಕೊಂಡು ಹೊರಟಿದ್ದೀರಲ್ಲಾ ಇದೊಂದು ರೀತಿ ದರ್ಬಾರಲ್ಲವೇ? ಈ ಭಾರವನ್ನು ಜನರ ಮೇಲೆ ಇಡುವುದಕ್ಕೆ ಹೊರಟಿದ್ದೀರಲ್ಲಾ ಇದು ಸರಿಯೇ? ನಾನು ಪ್ರಾರಂಭದಲ್ಲಿ ಬಹಳ ಸ್ಪಷ್ಟವಾಗಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಈಗಾಗಲೇ ನಮ್ಮ ಶಾಸಕರಿಗೆ ಹೇಳಿದ್ದೇವೆ, ಅಧ್ಯಕ್ಷರಿಗೆ ವಿನಂತಿ ಮಾಡಿದ್ದೇವೆ. ಈ ಸರ್ಕಾರವೇನಾದರೂ ಮೊಂಡುತನದಿಂದ ನಿಮಗೆ ಬಹುಮತವಿದೆ, ನಾವು ಹೀಗೇ ಮಾಡುವವರು, ಯಡಿಯೂರಪ್ಪನವರೇ ನೀವು ಏನು ಮಾಡುತ್ತೀರಿ ಮಾಡಿ ಎನ್ನುವುದಾದರೆ, ನಾವೂ ತೀರ್ಮಾನ ಮಾಡಿದ್ದೇವೆ, ಇವತ್ತು ರಾತ್ರಿಯಿಡೀ ಧರಣಿ ಆಗುತ್ತದೆ. ಅಧ್ಯಕ್ಷರಲ್ಲಿ ನಾನು ವಿನಂತಿ ಮಾಡುತ್ತೇನೆ, ಪ್ರಾರಂಭದಲ್ಲೇ ಏಕೆ ಹೇಳುತ್ತಿದ್ದೇನೆಂದರೆ ಸಮಯ ಸಿಗಲೆಂಬ ದೃಷ್ಟಿಯಿಂದ, ನಮಗೆ ಊಟ ಬೇಡ, ಕುಡಿಯುವ ನೀರಿನ ವ್ಯವಸ್ಥೆ, ಇಲ್ಲಿ ನಮಗೆ ರಕ್ಷಣೆಯ ವ್ಯವಸ್ಥೆಯನ್ನು ಮಾಡಿ ಸಾಕು. ಆ ನಿರ್ಧಾರ ಮಾಡಿಕೊಂಡು ನಾವು ನಿಮ್ಮ ಮುಂದೆ ಬಂದು ನಿಂತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) : 3-20ಕ್ಕೆ ಭಾಷಣ ಶುರು ಮಾಡಿ, 5 ನಿಮಿಷವಾಗಲಿಲ್ಲ ಆಗಲೇ ಧರಣಿ ಅಂದರೆ ಹೇಗೆ? ಮಾತನಾಡಿ ಏನೇನು ವಿಷಯಗಳಿವೆ ಎಲ್ಲಾ ವಾದ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಿಮ್ಮದು ಒಂದು ರೀತಿಯ ಮೊಂಡುತನ. ಏಕೆಂದರೆ, ಅಧ್ಯಕ್ಷರೆ ನಾನು ತುಂಬ ನೊಂದು ಹೇಳುತ್ತಿದ್ದೇನೆ. ಬಹುಶಃ ಈ ಸದನದಲ್ಲಿ ಮೊದಲು ಬಾರಿಗೆ ಹಿರಿಯರಾದಂತಹ ಮಾನ್ಯ ಶ್ರೀ ಪಿ. ಜಿ. ಆರ್. ಸಿಂಧ್ಯ ಮತ್ತು ಶ್ರೀ ಎಂ. ಪಿ.ಪ್ರಕಾಶ್‌ರವರೇ, ನೀವು ಸದನ ಸಮಿತಿ ಮಾಡಬೇಕೆಂದುನಾನು ಒತ್ತಾಯ ಮಾಡಿದ್ದು. ಬಹುಶಃ ಇತಿಹಾಸದಲ್ಲಿ ಮೊದಲ ಬಾರಿಗೆ ಆ ಕಡೆ. ಈ ಕಡೆ ಪಕ್ಷದವರು ಎನ್ನುವ ಭೇಧಭಾವವಿಲ್ಲದೆ ಈ ಕೆ.ಇ.ಬಿ ಇಲಾಖೆಯ

ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಹೆಚ್ಚಿನ ವಿದ್ಯುತ್ ತೆರಿಗೆಯನ್ನು ಹಾಕುವುದಕ್ಕೆ ಒಮ್ಮತ್ರದಿಂದ ಅಭಿಪ್ರಾಯವನ್ನು ನಾವು ಕೊಟ್ಟೆವು, ಒಂದು ವರದಿಯನ್ನು ಕೊಟ್ಟೆವು ಸದನದಲ್ಲಿ ಇಟ್ಟೆವು. ನೀವು ಒಪ್ಪಿಕೊಂಡಿರಿ. ನಾವಿನ್ನೂ ಮನೆಗೆ ಹೋಗುವುದರೊಳಗೆ ಮತ್ತೆ ಅದನ್ನು ಮಾರ್ಪಾಟು ಮಾಡಿ ಹೆಚ್ಚು ತೆರಿಗೆಹಾಕಿದಿರಿ. ಅಂದರೆ, ಸದನ ಸಮಿತಿ ರಚನೆಮಾಡಿ ನಾವು ಕೊಟ್ಟಂತಹ ವರದಿಯ ಬಗ್ಗೆಯೂ ನಿಮಗೆ ಗೌರವವಿಲ್ಲ. ಒಂದು ರೀತಿಯ ಸರ್ವಾಧಿಕಾರಿಗಳಂತೆ ನಿಮ್ಮದೇ ಆದ ರೀತಿಯಲ್ಲಿ ಈ ತೆರಿಗೆಯನ್ನು ಏರಿಸುವಂತಹ ಒಂದು ಪ್ರಯತ್ನವನ್ನು ತಾವು ಇವತ್ತು ಮಾಡುತ್ತಿದ್ದೀರಿ. ಇಲ್ಲಿ ಮುಖ್ಯಮಂತ್ರಿಗಳು ಇಲ್ಲ, ಅವರು ಬಂದ ಮೇಲೆ ಬೇಕಾದರೆ, ನಿಮಗೆ ನಿಜವಾಗಿಯೂ ಇಲಾಖೆಯನ್ನು ಸುಧಾರಣೆ ಮಾಡಿ, ಜನರಿಗೆಕೆ ನೆರವು ಕೊಡಬೇಕೆಂಬ ಕಳಕಳಿ ಇದ್ದರೆ, ಒಬ್ಬ ಕಳಕಳಿಇರುವಂತಹ, ಪ್ರಾಮಾಣಿಕ ಕ್ಯಾಬಿನೆಟ್ ಸಚಿವರನ್ನು ಈ ಇಲಾಖೆಯನ್ನು ನೋಡಿಕೊಳ್ಳುವುದಕ್ಕೆ ನೇಮಿಸಿ. ಏಕೆಂದರೆ, ಮುಖ್ಯಮಂತ್ರಿಗಳೇ ಈ ಇಲಾಖೆಯನ್ನು ನೋಡಿಕೊಳ್ಳುತ್ತಿರುವುದರಿಂದ ಅನೇಕ ಕಾರ್ಯಭಾರದಿಂದ ಈ ಇಲಾಖೆಯಲ್ಲಿ ಏನಾಗುತ್ತಿದೆ. ಎಲ್ಲಿಏನು ಕೊಳೆಯುತ್ತಿದೆ, ಎಲ್ಲಿ ಏನು ಸೋರಿಹೋಗುತ್ತಿದೆ? ಎಂಬುದರ ಅರಿವು ಅವರಿಗೆ ಬರುತ್ತಿಲ್ಲ. ಹಾಗಾಗಿ, ನಿಮಗೇನಾದರೂ ಕಳಕಳಿ ಇದ್ದರೆ, ಆ ರೀತಿಯ ಒಂದು ಜವಾಬ್ದಾರಿಯಿಂದ ಅದನ್ನು ನೋಡಿಕೊಳ್ಳುವುದಕ್ಕೆ ಈಗಲೇ ತಿರ್ಮಾನ ತೆಗೆದುಕೊಳ್ಳಿ. ರಾಜ್ಯದ ಜನರ ಹಿತದೃಷ್ಟಿಯಿಂದ, ಕೆಇಬಿ ಉಳಿಯಬೇಕು, ಜನ ಉಳಿಯಬೇಕೆನ್ನುವ ಕಳಕಳಿ ಇದ್ದರೆಕೂಡಲೇ ಕ್ರಮ ಕೈಗೊಳ್ಳಿ. ರಾಜ್ಯದಲ್ಲಿ ಸುಮಾರು 10 ಲಕ್ಷ ಯೂನಿಟ್ ವಿದ್ಯುತ್‌ನ ಕೊರತೆ ಇದೆ. ಅಂದರೆ, ಒಟ್ಟು ಬೇಡಿಕೆಯಲ್ಲಿ ಶೇಕಡಾ 26 ರಷ್ಟು ಕೊರತೆಇದೆ. ಇದುವರೆಗೆ ಪ್ರಾಮಾಣಿಕವಾಗಿ ಆ ವಿದ್ಯುತ್ ಉತ್ಪಾದನೆ ಕಡೆ ಏನಾದರೂ ಕಿಂಚಿತ್ ಪ್ರಯತ್ನವನ್ನು ಮಾಡಿದ್ದೀರಾ? ಬರುತ್ತೇನೆ ವಿವರಕ್ಕೆ, ನೀವು ಉತ್ತರವನ್ನು ಕೊಡುವಿರಂತೆ. ನೀವು ಏಕೆ ಜಾಸ್ತಿ ಮಾಡಿದ್ದೀರಿ ಇದನ್ನು ಕಡಿಮೆ ಮಾಡಿ ಎಂದು ಹೇಳಿ ಕುಳಿತುಕೊಳ್ಳುವುದಕ್ಕೆ ನಾವು ಇಲ್ಲಿ ಬಂದಿಲ್ಲ. ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆಯವರು ವಿವರವಾಗಿ ಅನೇಕ ವಿಷಯಗಳನ್ನು ತಮ್ಮ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಆದರೆ, ನಿಮ್ಮಿಂದ ಪ್ರಾಮಾಣಿಕ ಪ್ರಯತ್ನ ಎಲ್ಲಿ ಆಗಿದೆ? ಹಾಗಾದರೆ, ಕೆಇಬಿ ನಡೆಯುವುದಾದರೂ ಹೇಗೆ? ಸರ್ಕಾರ ನಡೆಯುವುದಾದರೂ ಹೇಗೆ? ಒಳ್ಳೆಯ ಸಲಹೆಯನ್ನು ನಾನು ಕೊಡುತ್ತೇನೆ, ನೀವು ಒಪ್ಪಿಕೊಳ್ಳಿ ಈ 300 ಕೋಟಿಹೆಚ್ಚು ತೆರಿಗೆ ಹಾಕುವಂತಹ ತೆರಿಗೆಯನ್ನು ಹಾಕದೆಯೇ, ಇನ್ನೂ ಕನಿಷ್ಠ ಈಗಿರುವಂತಹ ವ್ಯವಸ್ಥೆಯಲ್ಲಿ ನಮ್ಮ ಕೆಇಬಿ ಕನಿಷ್ಠ 500 ಕೋಟಿಗೂ ಹೆಚ್ಚು ತೆರಿಗೆ ಬರುವಂತಹ ವ್ಯವಸ್ಥೆಯನ್ನು ನಾನು ಮಾಡಿಕೊಡುತ್ತೇನೆ. ನನ್ನ ಸಲಹೆಗೆ ಒಪ್ಪಿಕೊಳ್ಳುವುದಾದರೆ. ನನ್ನ ಅಪೇಕ್ಷೆ ಏನೆಂದರೆ, ಕಳೆದ

3 ವರ್ಷಗಳಿಂದ ಈ ಕೇಬಲ್, ಎಲೆಕ್ಟ್ರಿಕ್ ಪೋಲ್ಸ್, ಅಂಗಲ್ಸ್, ಟ್ರಾನ್ಸ್‌ಫಾರ್ಮರ್ಸ್, ಅದಕ್ಕೆ ಇದಕ್ಕೆ ಬೇಕಾದಂತಹ ವಸ್ತುಗಳನ್ನು ತಾವು ಖರೀದಿ ಮಾಡಿದ್ದೀರಿ, ಎಷ್ಟು ಖರೀದಿ ಮಾಡಿದ್ದೀರಿ ಎಷ್ಟು ಉಪಯೋಗಿಸಿದ್ದೀರಿ? ಎಷ್ಟು ತಿರಸತವಾಗಿದೆ? ಈ ಬಗ್ಗೆ ಏನಾದರೂ ಅನ್ಯುಯಲ್ ಅಡಿಟ್ ಅಕೌಂಟ್‌ಆಗಿದೆಯೇ? ಅದನ್ನು ಸದನದ ಮುಂದೆ ಇಡುತ್ತೀರೋ ಪರಿಶೀಲನೆ ಮಾಡೋಣ. ಈ ಮೆಟೀರಿಯಲ್‌ಗಳನ್ನು ಪರ್ಚೇಸ್ ಮಾಡುವುದಕ್ಕೆನೀವು ಟೆಂಡರ್ ಕರೆಯುತ್ತಿದ್ದೀರೋ? ಈ ಮೆಟೀರಿಯಲ್‌ಗಳಿಗೆ ಪ್ರೈಸ್ ಫಿಕ್ಸ್‌ಮಾಡುವುದಕ್ಕೇನಾದರೂ ನಿಯಮಾವಳಿಗಳನ್ನು ಅಳವಡಿಸಿಕೊಂಡಿದ್ದೀರಾ? ಕೇಂದ್ರ ಸರ್ಕಾರದ ಒಂದು ಗೈಡ್‌ಲೈನ್ಸ್ ಇದೆ. ಅದರ ಪ್ರಕಾರ, ಆಕ್ಚುಯಲ್, ಆ ಮೆಟಿರಿಯಲ್‌ಕಾಸ್ಟ್ ಏನಿದೆ ಆ ಪ್ರಾಡಕ್ಟ್ ಮೇಲೆ 10 ಪರ್ಸೆಂಟ್ ಮಾರ್ಜಿನ್ ಕೊಡಬೇಕೆಂದು ಇದೆ. ನಾನು ನಿಮಗೆ ಹೇಳುತ್ತೇನೆ, ಕನಿಷ್ಠ 40-50 ಪರ್ಸೆಂಟ್ ಮಾರ್ಜಿನ್ ಕೊಟ್ಟು, ಲೂಟಿಮಾಡಿರುವಂತಹ ನೂರಾರು ಉದಾಹರಣೆಗಳನ್ನು ನಾನು ಕೊಡುತ್ತೇನೆ, ದಾಖಲೆಗಳೊಂದಿಗೆ ಸಾಬೀತು ಮಾಡುತ್ತೇನೆ. ಕೆಇಬಿಗೆ ಅಕ್ಸಿಲರೀಸ್‌ಗಳೇನು ಬೇಕಾಗಿದೆ ಇದರ ಬಗ್ಗೆ ನಿಮಗೆ ಬೇಕಾದಂತಹ ಅಧಿಕಾರಿಗಳು, ಪುಢಾರಿಗಳು ಅವರೇ ಸೇರಿಕೊಂಡು ಒಂದು ರೇಟ್ ಫಿಕ್ಸ್‌ಮಾಡಿಕೊಂಡು ಲೂಟಿ ಮಾಡುತ್ತಿದ್ದಾರೆ. ನಿಮಗೆಲ್ಲರಿಗೂ ಗೊತ್ತಿರುವಂತಹ ಸಂಗತಿ ಅದು. ಟ್ರಾನ್ಸ್‌ಮಿಷನ್ ಲಾಸ್ ಏನಾದರೂ ಕಡಿಮೆಯಿದೆಯೇ, ಏಕೆ ಕಡಿಮೆಯಾಗಿದೆ ? ಅದಕ್ಕೆ ನಿಮ್ಮ ತಾಂತ್ರಿಕ ವಿಧಾನಗಳನ್ನೇನಾದರೂ ಅನುಸರಿಸಿದ್ದೀರಾ? ಏನಾದರೂ ಸದನಕ್ಕೆ ಹೇಳಬಹುದಾ?

ಅಧ್ಯಕ್ಷರು : ಪರ್ಚೇಸಸ್ ಬಗ್ಗೆ ತಮ್ಮಲ್ಲಿ ಹೆಚ್ಚಿನ ಮಾಹಿತಿಯೇನಾದರೂ ಇದೆಯೇ?

ಶ್ರೀ ಬಿ. ಎಸ್. ಯಡಿಯೂರಪ್ಪ : ಏನೂ ಇಲ್ಲ. ಅದಕ್ಕೆನಾನು ಕೇಳುತ್ತಿರುವಂಥದ್ದು. ಕಳೆದ 5-6 ವರ್ಷಗಳಿಂದ ಇವರು ಪರ್ಚೇಸ್ ಮಾಡಿದಂತಹ ಮೆಟೀರಿಯಲ್‌ಗಳನ್ನು ನಗುವುದಲ್ಲ. ನಾನು ಆ ವಿಷಯಕ್ಕೆ ಬರುತ್ತೇನೆ, ನೀವು ನಗುತ್ತೀರಿ, ಜನ ಓದಿದರೆ ಏನು ಮಾಡುತ್ತಾರೆಂದು ನೋಡುವಿರಂತೆ. ನಾನು ನಿಮಗೆ ಹೇಳುತ್ತೇನೆ, ಕಳೆದ 5-6 ವರ್ಷಗಳಿಂದ ನೀವು ಏನೇನು ಮೆಟೀರಿಯಲ್‌ಗಳನ್ನು ಪರ್ಚೇಸ್ ಮಾಡಿದ್ದೀರಿ, ಎಷ್ಟು ಕೋಟಿರೂಪಾಯಿಗಳ ಅನುಪಯುಕ್ತ ವಸ್ತುಗಳು ಅಲ್ಲಿ ಕೊಳೆತುಬಿದ್ದಿವೆ. ಕ್ವಾಲಿಟಿ ಇಲ್ಲದಿರುವ ಆ ವಸ್ತುಗಳನ್ನು ನೀವು ಎಷ್ಟು ಖರೀದಿ ಮಾಡಿದ್ದೀರಿ ಎಂಬ ಬಗ್ಗೆ ಎಲ್ಲ ವಿವರಗಳನ್ನು ನಿಮಗೆ ಬೇಕೆಂದರೆ, ಸಭಾಧ್ಯಕ್ಷರಲ್ಲಿ ವಿನಂತಿಮಾಡುತ್ತೇನೆ, ಅಲ್ಲಿ ಕುಳಿತಿರುವಂತಹ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ನಾನು ವಿನತಿ ಮಾಡುತ್ತೇನೆ, ನೀವು ಸದನದ

ಸಮಿತಿ ಮಾಡಿ. ಎಕ್ಸ್‌ಪರ್ಟ್ಸ್‌ನ್ನು ನಮಗೆ ಸಹಾಯ ಮಾಡುವುದಕ್ಕೆ ಕೊಡಿ. ಕಳೆದ 4-5 ವರ್ಷಗಳಿಂದ ಈ ಮೆಟೀರಿಯಲ್‌ಗಳನ್ನು ಪರ್ಚೇಸ್ ಮಾಡುವಂತಹ ಕಾಲದಲ್ಲಿ ಯಾವ ರೀತಿ ನೂರಾರು ಕೋಟಿ ಲೂಟಿ ಮಾಡುವಂತಹ ಹಗಲು ದರೋಡೆ ನಿಮ್ಮ ಇಲಾಖೆ ಮಾಡಿದೆ ಎಂಬುದನ್ನು ನಾನು ಸಾಬೀತು ಮಾಡುತ್ತೇನೆ. ನಿಮಗೇನೂ ಇದು ಗೊತ್ತಿಲ್ಲ ಎಂದು ಏನಲ್ಲ. ಏನೋ ಇತ್ತೀಚೆಗೇನಾದರೂ ಸ್ವಲ್ಪ ಸರಿಪಡಿಸುವಂಥ ಪ್ರಯತ್ನವನ್ನು ಯಾರೋ ಒಬ್ಬರಿಬ್ಬರು ಪ್ರಾಮಾಣಿಕ ಅಧಿಕಾರಿಗಳು ಮಾಡಿರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಕಳೆದ ನಾಲ್ಕೈದು ವರ್ಷಗಳ ಕರ್ಮ ಕಥೆಯನ್ನು ನಾವು ನೋಡಿದರೆ ಯಾವ ರೀತಿ ನಿಮ್ಮ ತಪ್ಪಿನಿಂದ ಈ ಸರ್ಕಾರ ಈ ಇಲಾಖೆ ಜನರನ್ನು ಸುಲಿಗೆಮಾಡುತ್ತಿದೆ ಎನ್ನುವುದನ್ನು ನಾನು ಸಾಬೀತು ಮಾಡುವುದಕ್ಕೆ ಸಿದ್ಧ ಇದ್ದೇನೆ. ನಿಜವಾಗಿ ನಿಮಗೆ ಈ ಇಲಾಖೆ ಸುಧಾರಣೆಯಾಗಬೇಕು ಎಂದು ಇದ್ದಾರೆ, ಯಾವಯಾವುದಕ್ಕೊ ನಾವುಖರ್ಚು ಮಾಡುತ್ತೇವೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿಕೊಂಡು ನೀವು ವಿದೇಶ ಪ್ರವಾಸ ಮಾಡಿಕೊಂಡು ಬಂದಿರಿ. ಏನು ಮಾಡಿದ್ದೀರಿ ಏನಿಲ್ಲ ಎಂಬುದನ್ನು ಆಮೇಲೆ ನಾವು ಚರ್ಚೆ ಮಾಡೋಣ. ಬೇಕಾದರೆನಾನು ಇನ್ನೂ ಒಂದು ಒತ್ತಾಯ ಮಾಡುತ್ತೇನೆ. ವಿದೇಶಿ ಪ್ರವಾಸದ ಬಗ್ಗೆ ಜನ ಹಗುರವಾಗಿ ಮಾತನಾಡುತ್ತಾರೆ. ನಾನು ಹಗುರವಾಗಿ ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ, ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ, ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ, ಸನ್ಮಾನ್ಯ ಪಟೇಲರು ಈಗ ಪವರ್‌ಪ್ರಾಜೆಕ್ಟ್‌ಗಳನ್ನು ತರುವುದಕ್ಕೋಸ್ಕರ ಹೊರಗಡೆ ಹೋದರಲ್ಲಾ ಎಷ್ಟು ತಂದಿದ್ದೀರಿ? ಎಷ್ಟು ಉತ್ಪನ್ನ ಆಗಿದೆ? ಏನಾಗಿದೆ? ಎಷ್ಟು ಖರ್ಚಾಗಿದೆ? ಆ ವಿವರ ಕೊಡುತ್ತೀರೇನು? ಕೊಡಿ ಸ್ವಾಮಿ. ಇದುವರೆಗೆ ಹೊರದೇಶದ ಜೊತೆ 17 ಎಂ.ಒ.ಯು ಗೆ. ಸಹಿ ಆದರೆ ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪನ್ನ ಆಗಲಿಲ್ಲ. ದೊಡ್ಡ ದೊಡ್ಡ ಆಶ್ವಾಸನೆಗಳನ್ನು ರಾಜ್ಯದ ಜನರಿಗೆ ಕೊಟ್ಟುಕೊಂಡು ಬಂದಿರಿ. ಇವತ್ತು ಇಡೀ ದೇಶದಲ್ಲಿ ಅತ್ಯಂತ ಕಡಿಮೆ ಬೆಲೆಗೆ ಕೆ.ಪಿ.ಸಿ. ನಿಂದ ನಾವು ವಿದ್ಯುತ್ತನ್ನು ಪಡೆಯುತ್ತೇವೆ ಎಂದು ಹೇಳುತ್ತೀರಿ ಸ್ವಾಮಿ, ಈ ಇಲಾಖೆಯ ಯೋಗ್ಯತೆಗೆ ಇಷ್ಟೊಂದು ದುಬಾರಿ ವಿದ್ಯುತ್ ದರವನ್ನು ವಸೂಲು ಮಾಡಿದ ಮೇಲೂಸಹ ಆಯಾಯಾ ತಿಂಗಳು ಎಷ್ಟು ವಿದ್ಯುತ್‌ನ್ನು ನಾವು ಪಡೆಯುತ್ತೇವೆ ಅದಕ್ಕೆ ಹಣವನ್ನು ಪಾವತಿ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಸಹ ಇಲಾಖೆ ಮಾಡುತ್ತಿಲ್ಲ. ಟ್ರಾನ್ಸ್‌ಮಿಷನ್ ಲಾಸ್ ಕಡಿಮೆಯಾಗಲಿಲ್ಲ. ಕಳ್ಳತನ ಮಾಡಿರುವವರ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳಲಿಲ್ಲ. ಒಂದು ಸಾವಿರ ಕೋಟಿ ಹತ್ತಿರ ಹತ್ತಿರ ವಿದ್ಯುತ್ ಬಾಕಿ ಇದೆ. ಕೋರ್ಟ್ ಮುಂದೆ ತಾವು

ಅಂಡರ್‌ಟೇಕಿಂಗ್ ತೆಗೆದುಕೊಂಡು ಬಂದಿರಿ. ಅದಕ್ಕೆ ಏನೇನೋ ಉತ್ತರಗಳನ್ನು ಕೊಡುವಂಥ ಪ್ರಯತ್ನ ಮಾಡಿದ್ದೀರಿ. ವಸೂಲು ಮಾಡುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನ ಇಲ್ಲ. ಈ ರೀತಿ ಒಂದು ರೀತಿ ಹಗಲುದರೋಡೆ ಈ ಇಲಾಖೆಯಲ್ಲಿ ನಡೆಯುತ್ತಿದೆ. ವಿದ್ಯುತ್ ಅಭಾವ. ವಿದ್ಯುತ್ ಇಲ್ಲದೇ ಜನರನ್ನು ಸುಲಿಗೆ ಮಾಡುವಂಥ ಪ್ರಯತ್ನ ಮಾಡಿದ್ದೀರಿ. ತಾವು ಮಣ್ಣಿನ ಮಕ್ಕಳ ಸರ್ಕಾರ ರೈತರ ಉದ್ಧಾರದ ಸರ್ಕಾರ ಎಂದು ಹೇಳಿ ಈಗ ರೈತರ ಮೇಲೆ ಕಾರ್ಮಿಕರ ಮೇಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಣ್ಣಿನ ಮಕ್ಕಳೋ ಎಣ್ಣೆ ಮಕ್ಕಳೋ?

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಮಣ್ಣಿನ ಮಕ್ಕಳು ಎಂದು ಹೇಳಿದೆ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಎಲ್ಲರೂ ಹೆಣ್ಣಿನ ಮಕ್ಕಳೇ ಇನ್ನು ಬೇರೆಯ ಮಕ್ಕಳಾಗಿರುತ್ತಾರಾ?

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರ ಎಣ್ಣೆ ಎಂದರು.

ಶ್ರೀ ಎಂ. ಪಿ. ಪ್ರಕಾಶ್ : ಹಾಗಾ? ಸರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ರಾಜ್ಯದ ಜನತೆ ಮನಸ್ಸಿನಲ್ಲೂ ಸಹ ನಾವು ಇಲ್ಲಿ ಕೇವಲ ರೈತರ ಪರವಾಗಿ ಮಾತನಾಡುತ್ತಿದ್ದೇವೆ ಎನ್ನುವ ಭಾವನೆ.

ಅಧ್ಯಕ್ಷರು : ಖರ್ಗೆಯವರಿಗೆ ಗೊತ್ತಿಲ್ಲ. ನಮ್ಮ ಕಡೆಗೆ ಎಣ್ಣೆ ಅಂದರೆ ಬೇರೆ ತಿಳಿದು ಕೊಳ್ಳುತ್ತಾರೆ. ಎಣ್ಣೆ ಮಕ್ಕಳು ಅಂದರೆ ನಮ್ಮ ಕಡೆ ಬೇರೆಯಾಗುತ್ತದೆ.

ಮಾನ್ಯ ಸದಸ್ಯರು : ಅವರು ಹೇಳಿದ್ದು ಅದೇ ಅರ್ಥದಲ್ಲೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಣ್ಣೆ ಅನೇಕ ರೀತಿಯಿಂದ ಉಪಯೋಗ ಮಾಡುತ್ತಾರೆ. ಮಸಾಜ್‌ಗೆ ಉಪಯೋಗ ಮಾಡುತ್ತಾರೆ. ಎಣ್ಣೆ ನಿಮ್ಮ ಕಡೆ ಬೇರೆ ಏನಾದರೂ ಎಕ್ಸೈಜ್‌ನಲ್ಲಿ ಉಪಯೋಗ ಮಾಡುತ್ತಾರೆ. ಅದಕ್ಕೆ ಯಾವ ಅರ್ಥದಲ್ಲಿ ಎನ್ನುವುದನ್ನು ಅವರು ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಒಂದೇ ಒಂದು ಹೇಳಬಹುದು. ಪಟೇಲರ ಫಾರ್ಮುಲಾ ಕರೆಂಟ್ ಇಲ್ಲದೇ ಶಾಕ್ ಕೊಡುವುದು. ವಿದ್ಯುತ್ ಸರಬರಾಜು ಮಾಡದೆ ಶಾಕ್‌ಕೊಡುವಂಥ ಸರ್ಕಾರ. ಸ್ವಾಮಿ ಬಹುಶಃ ಸೀರಿಯಸ್ಸಾಗಿ ಯೋಚನೆ ಮಾಡಿ. ಈ ರಾಜ್ಯದ ಜನತೆ, ಅವನು ರೈತ ಇರಬಹುದು, ಕಾರ್ಮಿಕ ಇರಬಹುದು, ಸಣ್ಣ ಪುಟ್ಟ

ಕೈಗಾರಿಕೆಗಳನ್ನು ನಡೆಸುವವನಿರಬಹುದು ಮೂರು ಬಾರಿವಿದ್ಯುತ್‌ದರವನ್ನು ಜಾಸ್ತಿ ಮಾಡಿದ್ದರಿಂದ ಈ ಅನಿಷ್ಠ ಸರ್ಕಾರ ಯಾವಾಗ ಅಧಿಕಾರ ಬಿಟ್ಟು ತೊಲಗುತ್ತದೋ ಎಂದು ಜನತೆ ಶಾಪ ಹಾಕುತ್ತಿದ್ದಾರೆ ತಾವು ನೋಡಿದ್ದೀರಾ? ಮಾನ್ಯ ಬೈರೇಗೌಡರು ಬಂದರು. ಅವರಿಗೆ ಜ್ಞಾಪಕ ಬರುತ್ತದೆ. ಕೋಲಾರ ಜಿಲ್ಲೆಯಲ್ಲಿ ಏನಾಯಿತು ಸ್ವಾಮೀ? 100 ರೂಪಾಯಿ ಒಂದು ಹೆಚ್.ಪಿ.ಗೆ. ಕರೆಂಟ್ ಬೆಲೆ ನೀವು ಬಂದ ಮೇಲೆ ಜಾಸ್ತಿ ಮಾಡಿದರಲ್ಲ, ಇಲ್ಲಿ ಕುಳಿತಾಗ ಬೇಡ ಎಂದವರು ಅಲ್ಲಿಗೆ ಹೋದ ಮೇಲೆ....

ಶ್ರೀ ಆರ್. ಶ್ರೀನಿವಾಸ್ : ಅಧ್ಯಕ್ಷರೇ, ಕೋಲಾರದ ಬಗ್ಗೆ ಹೇಳಿದ್ದಕ್ಕೆ

ಶ್ರೀ ಬಿ. ಎಸ್. ಯಡಿಯೂರಪ್ಪ : 300 ರೂಪಾಯಿ ಪರ್ ಹೆಚ್.ಪಿ.ಗೆ ನೀವು ತೆರಿಗೆ ಹಾಕಿದಮೇಲೂ ಬೆಳೆದರಲ್ಲಾ ಟೊಮ್ಯಾಟೋ ಟೊಮ್ಯಾಟೋ ಬೆಳದು ತಂದು ಈ ದರಿದ್ರ ಸರ್ಕಾರ ಎಲ್ಲಪಾ ಬಂತು ಎಂದು.....

ಶ್ರೀ ಆರ್. ಶ್ರೀನಿವಾಸ್ : ಸಾರ್, ಒಂದು ನಿಮಿಷ ಈಲ್ಡ್ ಆಗುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಮಾತನಾಡುವಾಗ ಮಾತನಾಡಿ ಸಾರ್. ಈಗ ಏಕೆ ಮಾತನಾಡುತ್ತೀರಿ?

ಅಧ್ಯಕ್ಷರು : ಶ್ರೀನಿವಾಸ್ ಅವರೇ ತಾವು ಆಮೇಲೆ ಮಾತನಾಡಿ

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ದರಿದ್ರ ಸರ್ಕಾರ ಏಕೆ ಬೇಕು ಎಂದು ಹೇಳಿ 50 ಪೈಸೆಗೆ ಒಂದು ಕೆ.ಜಿ. ಟೊಮ್ಯಾಟೊ ಕೇಳುವವರಿಲ್ಲ ಎಂದು ಹೇಳಿ ನಿಮ್ಮ ಮಂತ್ರಿಗಳ ಮನೆಯ ಮುಂದೆ ಸುರಿದರಲ್ಲಾ ಚರಂಡಿಗೆ ಬಂದು ಸುರಿದರಲ್ಲಾ ನಿಮಗೆ ಅಯ್ಯೋ ಅನ್ನಿಸಲಿಲ್ಲವಾ? ಏಕೆ? ರೈತರ ಮಕ್ಕಳಲ್ಲವಾ ನೀವು? ನಿಮ್ಮನ್ನು ಉದ್ಧಾರ ಮಾಡುತ್ತೇವೆ ಎಂದು ಓಟು ತೆಗೆದುಕೊಂಡು ಬರಲಿಲ್ಲವಾ ನೀವು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಯಡಿಯೂರಪ್ಪನವರೇ, ರೈತರ ಮಕ್ಕಳು ಮಂತ್ರಿಗಳ ಮನೆ ಮುಂದೆ ಸುರಿಯಲಿಲ್ಲ. ಹಾಗೆ ಸುರಿದವರು ಸಮಾಜಗಾತುಕರು, ರೈತರು ಬರಲಿಲ್ಲ ಮನೆ ಹತ್ತಿರ. ಏತಕ್ಕೆ ಅವರ ಹೆಸರು ಹೇಳಿ ಅನ್ಯಾಯ ಮಾಡುತ್ತೀರಿ? ಅವರು ರೈತರಲ್ಲ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಈಗ ಟೊಮ್ಯಾಟೊ ಹಣ್ಣು ಬೆಳೆದಿರುವವರಲ್ಲಿ ಎರಡು ವರ್ಗ ಇರಬಹುದು ಹಾಗಾದರೆ. ಒಂದು ವರ್ಗ ಸಮಾಜಘಾತುಕರು. ಇನೊಬ್ಬರು ರೈತರು. ಇವರ ಮನೆಯ ಮುಂದೆ ಟೊಮ್ಯಾಟೊ ಹಣ್ಣು ಹಾಕಿದವರು ಯಾರು ಎಂಬುದು ತನಿಖೆಯಾಯಿತೋ? ಸಮಾಜಘಾತುಕರು ಎಂದು ತನಿಖೆ ಮಾಡಿದಿರಾ? ಟೊಮ್ಯಾಟೊ ಹಣ್ಣು ಎಸೆದವರು ಸಮಾಜ ಘಾತುಕರಾ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ತನಿಖೆ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ದಯವಿಟ್ಟು ತಾಳು ಆ ಪದ ಉಪಯೋಗಿಸಬಾರದು? ಸಮಾಜ ಘಾತುಕರು ಎನ್ನುವ ಪದವನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು. ದಯಮಾಡಿ ನಾನು ನಿಮಗೆ ಹೇಳುತ್ತಿದ್ದೇನೆ. ಯಾವು ಸಮಾಜ ಘಾತುಕರು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ರೈತರು ಬರಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಯಾರು ಸಮಾಜಘಾತುಕರು? ರೈತರಿಗೆ ನೀವು ಅನ್ಯಾಯ ಮಾಡಿದ್ದೀರಿ. ನಿಮ್ಮ ವಿರುದ್ಧ ಜನ ಎದ್ದರೆ ಸಮಾಜಘಾತುಕರು ಎಂದು ಹೇಳುತ್ತೀರಾ? ಈ ಸದನದಲ್ಲಿ ಕುಳಿತುಕೊಂಡು ನೀವು ರೈತರನ್ನು ಸಮಾಜಘಾತುಕರು ಎಂದು ಹೇಳುವುದು ಯಾವ ನೀತಿ ಅದು? ಒಳ್ಳೆಯದಲ್ಲ ಅದು. ಆ ಪದ ತೆಗೆದುಹಾಕಬೇಕು ನೀವು. ಹಿಂತೆಗೆದುಕೊಳ್ಳಬೇಕು. ಬೈರೇಗೌಡರೆ, ಸಮಾಜಘಾತುಕರು ಅಂದರೆ ಏನು?

(ಗೊಂದಲ)

ಶ್ರೀ ಸಿ. ಬೈರೇಗೌಡ : ಅದರ ಬಗ್ಗೆ ನಿಮ್ಮೆಲ್ಲರಿಗಿಂತ ಚೆನ್ನಾಗಿ ನಮಗೆ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಏನು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕೃಷ್ಣಾರೆಡ್ಡಿಯವರೇ

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ದಯಮಾಡಿ ಕೇಳಿ.

ಶ್ರೀ ಸಿ. ಬೈರೇಗೌಡ : ಯಾರು ಹೋಗಿದ್ದರು, ಯಾರು ಸುರಿದರು ಎಂಬುದನ್ನು ನೀವು ನೋಡೀದ್ದೀರಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವೂ ನೋಡಿಲ್ಲ.

ಶ್ರೀ ಸಿ.ಬೈರೇಗೌಡ : ಅವರು ನೋಡಿರುವುದರಿಂದಲೇ ಹೇಳುತ್ತಿರುವುದು ಸಮಾಜಘಾತುಕರು ಎಂದು.

ಶ್ರೀ ವಾಟಾಳ್ ನಾಗರಾಜ್ : ನೀವೂ ನೋಡಿಲ್ಲ. ಸ್ವಾಮಿ ಅಧ್ಯಕ್ಷರೇ, ಹಿಂದೆ ಬೈರೇಗೌಡರೇ ತಂದು ವಿಧಾನಸೌಧದ ಮುಂದೆ ಟೊಮ್ಯಾಟೊ ಹಣ್ಣು ಆಲೂಗೆಡ್ಡೆ ಸುರಿದರು. ನಾವು ನಿಮ್ಮನ್ನು ಸಮಾಜಘಾತುಕರು ಎಂದು ಹೇಳುವುದಕ್ಕಾಗುತ್ತದಾ? ಹೇಳಿ. ಇಲ್ಲ ಆಗುವುದಿಲ್ಲ. ಹೇಳುವುದಕ್ಕಾಗುವುದಿಲ್ಲ. ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ. ತಾವು ದಯವಿಟ್ಟು......

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ. ನಾನು ನಿಂತಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ : ಯಾವರೀತಿ ನನ್ನನ್ನು ನನ್ನ ಸ್ನೇಹಿತರಾದಂಥ ವಾಟಾಳ್ ನಾಗರಾಜ್ ಅವರ ಬೈರೇಗೌಡರು ಎಂದು ಗುರುತಿಸಿದ್ದಾರೋ ಅದೇರೀತಿ ಯಾರು ಅಲ್ಲಿ ಹೋಗಿ ಟೊಮ್ಯಾಟೊ ಹಣ್ಣನ್ನು ಮಾನ್ಯ ಕೃಷ್ಣಾರೆಡ್ಡಿಯವರು ಮನೆಯ ಮುಂದೆ ಸುರಿದರು ಎನ್ನುವುದನ್ನು ಗುರುತಿಸಿದ್ದಾರೆ. ಅವರು ಸಮಾಜಘಾತುಕರು.

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಯಾರೂ ಅದನ್ನು ನೋಡಿಲ್ಲ. ಅದೇ ಸಂದರ್ಭದಲ್ಲಿ ಅವರ ಮನೆಯ ಮೇಲೆ ಕಲ್ಲು ಹೊಡೆದಿರತಕ್ಕದ್ದನ್ನು ನಾವು ಯಾರೂ ಸಮರ್ಥನೆ ಮಾಡುವುದಿಲ್ಲ. ಅದನ್ನು ಒಪ್ಪುವುದಿಲ್ಲ ನಾವು. ನಾವು ಅದನ್ನು ಖಂಡಿಸುತ್ತೇವೆ.

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ : ಕಲ್ಲುಹಾಕಿ ಎಂದು ಹೇಳುತ್ತೀರಾ? ಕಲ್ಲು ಹಾಕಿರುವವರು ರೈತರಾ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಕಲ್ಲು ಹಾಕಿ ಎಂದು ಹೇಳತಕ್ಕಂಥದ್ದನ್ನು ಯಾರೂ ಸಮರ್ಥನೆ ಮಾಡುವುದಿಲ್ಲ.

ಶ್ರೀ ಕೆ. ಕೃಷ್ಣಾ ರೆಡ್ಡಿ : ಅವರನ್ನೇ ಸಮಾಜಘಾತುಕರು ಎಂದು ಹೇಳಿದ್ದು. ರೈತರನ್ನಲ್ಲ. ನೀವು ಹೇಳುತ್ತಾ ಇದ್ದೀರಿ ರೈತರು ಎಂದು.

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸಮಾಜ ಘಾತುಕರು ಎನ್ನುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ .

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಇವರೊಬ್ಬರೇ ರೈತರು. ನಮಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸಮಾಜಘಾತುಕರು ಎಂದರೆ ಏನು? ನಿಮ್ಮ ಮನೆಯ ಮುಂದೆ ಟೊಮ್ಯಾಟೊ ಸುರಿದರೆ ಅವರು ಸಮಾಜ ಘಾತುಕರಾ?

ಅಧ್ಯಕ್ಷರು : ಒಂದು ನಿಮಿಷ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಕಲ್ಲು ಹಾಕುತ್ತಾರೆ. ಅವರನ್ನೇ ಇವರು ರೈತರು ಎಂದು ಹೇಳುತ್ತಾರೆ. ರೈತರು ಕಲ್ಲು ಹಾಕುತ್ತಾರಾ?

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ : ಈ ದೇಶದಲ್ಲಿ ರೈತರೂ ಕಲ್ಲು ಹಾಕಿದ್ದಾರೆ, ಎಲ್ಲರೂ ಕಲ್ಲು ಹಾಕಿದ್ದಾರೆ ಸಂದರ್ಭ ಬಂದಾಗ. ಅದು ಬೇರೆ ವಿಷಯ. ಕಲ್ಲು ಹಾಕಿದವರೆಲ್ಲಾ ಸಮಾಜ ಘಾತುಕರಲ್ಲ. ಆ ವಾದಕ್ಕೆ ಬಂದರೆ....

ಶ್ರೀ ವಾಟಾಳ್ ನಾಗರಾಜ್ : ಟೊಮ್ಯಾಟೊ ಹಣ್ಣು ಬೆಲೆ ಕುಸಿದುಹೋಗಿದೆ. ರೈತರನ್ನು ಕತ್ತು ಹಿಸುಕುತ್ತಿದ್ದೀರಿ. ಬೆಳೆಗಾರರನ್ನು ಕೊಂದಿದ್ದೀರಿ. ಅವರನ್ನು ಸಮಾಜಘಾತುಕರು ಎಂದು ಹೇಳತಕ್ಕ ನೀತಿ ಒಳ್ಳೆಯದಲ್ಲ ಇದು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಕಲ್ಲು ಹೊಡೆದಿರುವುದನ್ನು ಸಮರ್ಥಿಸುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಅದನ್ನು ನಾನು ಒಪ್ಪುವುದಿಲ್ಲ. ನಾನು ಹೇಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಾ ರೆಡ್ಡಿ : ಅದನ್ನೇ ನಾನು ಹೇಳುತ್ತಿರುವುದು. ಕೋಲಾರ ಜಿಲ್ಲೆಯ ರೈತರ ಕಲ್ಲು ಹಾಕುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ರೈತರನ್ನು ಕಲ್ಲು ಹಾಕಿದ್ದಕ್ಕೆ ಸಮಾಜಘಾತುಕರು ಎಂದು ಹೇಳುತ್ತೀರಿ. ಗೋಲೀಬಾರ್ ಮಾಡಿ ಎಷ್ಟೋ ಜನ ರೈತರನ್ನು ಇವರು ಕೊಂದಿದ್ದಾರೆ ಇವರು ರೈತರನ್ನು ಕೊಂದಿಲ್ಲವೇ?

ಶ್ರೀ ಜಿ. ವಿ. ರಾಮರೆಡ್ಡಿ : ಲಾಕಪ್‌ಡೆತ್ ಆಯಿತಲ್ಲಾ ಅದಕ್ಕೆ ಸರ್ಕಾರವನ್ನು ಸಮಾಜಘಾತುಕರು ಎಂದು ಹೇಳಬೇಕಾ ನಾವು?

ಶ್ರೀ ವಾಟಾಳ್ ನಾಗರಾಜ್ : ನಿಮ್ಮಿಷ್ಟ ಬಂದಹಾಗೆಲ್ಲಾ ಹೇಳುವುದಕ್ಕಾಗುವುದಿಲ್ಲ ಇಲ್ಲಿ. ಸಾಧ್ಯವಿಲ್ಲ ಅದು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ನನ್ನ ಮನೆಯ ಮುಂದೆ ನಡೆದಿರುವುದರ ಬಗ್ಗೆ ನಾನು ವಿವರಣೆ ಕೊಡಬೇಕಾಗುತ್ತದೆ. ಅದು ನನ್ನ ಹಕ್ಕು.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಹಕ್ಕನ್ನು ನಾವು ಕಿತ್ತುಕೊಳ್ಳುವುದಿಲ್ಲ. ಆದರೆ ರೈತ ಬಾಂಧವರನ್ನು ಸಮಾಜಘಾತುಕರು ಎಂದು ಹೇಳುವುದನ್ನು ನಾವು ಒಪ್ಪುವುದಿಲ್ಲ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ: ನಾನು ಹೇಳುತ್ತಾ ಇರತಕ್ಕಂಥದ್ದು ಕಲ್ಲು ಹಾಕಿದವರು ಸಮಾಜಘಾತುಕರು ಎಂದು. ರೈತರನ್ನಲ್ಲ ನಾನು ಹೇಳಿದ್ದು.

ಶ್ರೀ ವಾಟಾಳ್ ನಾಗರಾಜ್ : ಕಲ್ಲು ಹಾಕಿದವರೆಲ್ಲಾ ಸಮಾಜಘಾತುಕರಲ್ಲ. ಗೋಲಿಬಾರ್‌ಮಾಡುವವರು ಯಾರು? ಗೋಲೀಬಾರ್ ಮಾಡತಕ್ಕ ಸರ್ಕಾರಕ್ಕೆ ಏನು ಹೇಳಬೇಕು ನಾವು?

ಶ್ರೀ ಸಿ. ಭೈರೇಗೌಡ : ಕಲ್ಲು ಹಾಕಿದವರು ಏನು ಸಂಭಾವಿತರಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ನಾವು ಸಂಭಾವಿತರು ಅಲ್ಲ. ಏನು ಹೀಗೆ ಮಾತನಾಡುತ್ತಿದ್ದೀರಿ ತಾವು?

ಶ್ರೀ ಸಿ. ಭೈರೇಗೌಡರು : ಕಲ್ಲು ಹಾಕಿದವರು ಸಂಭಾವಿತರಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದೇ ಸದನದಲ್ಲಿ ಬೈರೇಗೌಡರು ಇಲ್ಲಿ ಕುಳಿತಿದ್ದಾಗ ರೈತರ ಬಗ್ಗೆ ಏನೂ ಮಾತನಾಡಿದ್ದೀರಿ? ವಿದ್ಯುಚ್ಛಕ್ತಿ ಬಗ್ಗೆ ಏನು ಮಾತನಾಡಿದ್ದೀರಿ? ಬೆಲೆಯೇರಿಕೆ ಬಗ್ಗೆ ಏನು ಮಾತನಾಡಿದ್ದೀರಿ?....

ಅಧ್ಯಕ್ಷರೇ : ಬೈರೇಗೌಡರೇ, ವಾಟಾಳ್‌ರವರೇ ದಯಮಾಡಿ ಕುಳಿತುಕೊಳ್ಳಿ. ನಾನು ಏನು ಹೇಳುತ್ತಿದ್ದೇನೆ ಎಂದರೆ ಯಾರು ಯಾವ ಸನ್ನಿವೇಶದಲ್ಲಿ ಏನೇನು ಮಾತನಾಡಿದರು ಎನ್ನುವುದನ್ನು ನಾವೆಲ್ಲರೂ ಕೂಡ ಸ್ವಲ್ಪ ಎಚ್ಚರಿಕೆಯಿಂದ ಕೇಳಿಕೊಂಡರೆ ಈ ರೀತಿಯ ಸನ್ನಿವೇಶ ಸಂಭವ ಉದ್ಭವವಾಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಮಾತನಾಡುವ ವೇಳೆಗೆ ಪ್ರಾಸಂಗಿಕವಾಗಿ ಅವರು ಹೇಳಿದರು, ನೋಡಿ ಇದರ ಪರಿಣಾಮವೆಲ್ಲಾ ಹೀಗೆ ಆಗಿದೆ. ನಿಮ್ಮ ಮಂತ್ರಿಗಳ ಮನೆಮುಂದೆ ಎಲ್ಲಾ ಹೋಗಿ ಹೋರಾಟ ಮಾಡಿ, ಟೊಮೆಟೊ

ಹಣ್ಣು ಚೆಲ್ಲಬೇಕಾಗಿ ಬಂತು, ರೈತರು ಹೀಗೆಮಾಡಿದರು ಎಂದು ರೈತರ ಕಷ್ಟವನ್ನು ನಿವೇದಿಸಿ ಕೊಳ್ಳತಕ್ಕಂಥ ಉದ್ದೇಶದಿಂದ ಅವರು ಆ ಮಾತನ್ನು ಹೇಳಿದ್ದು. ಹೌದಾ? ಶ್ರೀಮಾನ್ ಕೃಷ್ಣಾರೆಡ್ಡಿಯವರು ಏನು ಹೇಳಿದರು ಎಂದರೆ ರೈತರು ನನ್ನ ಮನೆಮುಂದೆ ಬಂದು ಕಲ್ಲು ಎಸೆದವರು, ಈ ಗಲಾಟೆ ಮಾಡಿದವರೆಲ್ಲರೂ ಕೂಡ ಸಮಾಜಘಾತುಕರು ಇದ್ದರು ಎಂದು ಹೇಳಿದರೇ ಹೊರತು, ರೈತರು ಸಮಾಜಘಾತಕರು ಎಂದು ಅವರು ಹೇಳಲಿಲ್ಲ. ದಯಮಾಡಿ ಕಡತ ತೆಗೆಸಿ ನಾನು ತೋರಿಸುತ್ತೇನೆ. ಕಡತವನ್ನು ತೆಗೆದುನೋಡಿ. ನೀವು ಅಷ್ಟರೊಳಗಾಗಿ ಭಾವೋದ್ರೇಕಕ್ಕೆ ಒಳಗಾಗಿಬಿಟ್ಟಿರಿ. ಯಾರೂ ಕೂಡ ಈ ಸದನದಲ್ಲಿ ಇರತಕ್ಕಂಥವರು ರೈತರನ್ನುಸಮಾಜಘಾತಕರು ಎಂದು ಹೇಳುವಂಥ ಹಂತಕ್ಕೆ ತಲುಪಲಿಕ್ಕೆ ಸಾಧ್ಯವಿಲ್ಲ. ಹಾಗೆ ಹೇಳಿ ನಾವು ಯಾರೂ ಒಂದು ಕ್ಷಣ ಕೂಡ ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನಾವು ಎಲ್ಲರೂ ಇಲ್ಲಿ ಬಂದಿರುವುದೇ ರೈತರಿಂದ. ಆದ್ದರಿಂದ ಅವರು ಹೇಳದೇ ಇರತಕ್ಕಂಥ ಮಾತನ್ನು ಅವರ ಬಾಯೊಳಗೆ ಹಾಕುವುದು ಬೇಡ. ಕಡತವನ್ನು ಬೇಕಾದರೆ ತರಿಸಿ ನಿಮಗೆಲ್ಲಾಇನ್ನೊಂದು ಸಲ ತೋರಿಸುತ್ತೇನೆ. ಬೆಂಗಳೂರಿನಲ್ಲಿ ಅವರ ಮನೆಮುಂದೆ, ಸರ್ಕಾರಿ ಬಂಗಲೆ ಮುಂದೆ ಹೋಗಿ ಗಲಾಟೆ ಮಾಡಿದರೆ ಪರವಾಗಿಲ್ಲ. ಬೈರೇಗೌಡರು ಮಾಡಿದಂತೆ ವಿಧಾನ ಸೌಧದ ಹತ್ತಿರ ಬಂದಿದ್ದರೆ ಪರವಾಗಿಲ್ಲ. ಹೆಣ್ಣುಮಕ್ಕಳೆಲ್ಲಾ ಮನೆಯಲ್ಲಿರುವಾಗ, ಇವರು ಮಂತ್ರಿಯವರು ಅವರ ಆಫಿಷಿಯಲ್‌ಡ್ಯೂಟಿ ಮೇಲೆ ಅವರು ಇರುವಾಗ, ಮನೆ ಹತ್ತಿರಕ್ಕೆ ಹೋಗಿ ಕಲ್ಲು ತೆಗೆದು ಹೊಡೆದರೆ ಅವರನ್ನು ರೈತರು ಎಂದು ಯಾರಾದರೂ ಕರೆಯುತ್ತಾರಾ? ಅವರ ಮನೆಯಲ್ಲಿರುವ ಹೆಣ್ಣುಮಕ್ಕಳ ಪರಿಸ್ಥಿತಿ ಏನಾಗಿರಬಹುದು ಹೇಳಿ. ಅವರಿಗೆ ಏನು ಗೊತ್ತು ಹೇಳಿ. ಮಂತ್ರಿಗಳು ಎಲ್ಲಿ ಹೋದರೋ ಏನು ಮಾಡಿದರೋ ಎಂದು ಹೇಳಿ. ಇವರ ಮನೆಯ ಸದಸ್ಯರಾದದ್ದೇ ದೊಡ್ಡ ತಪ್ಪೇ ಅವರದ್ದು? ಮನೆಯಲ್ಲಿರತಕ್ಕಂಥ ಹೆಣ್ಣುಮಕ್ಕಳಿಗೆ ಸಣ್ಣ ಮಕ್ಕಳಿಗೆ ಎಷ್ಟು ಅತಂಕ ಆಗಿದ್ದಿರಬಹುದು ಹೇಳಿ ಯೋಚನೆ ಮಾಡಿ. ಅದನ್ನು ಅವರು ಹೇಳಿಕೊಂಡಿದ್ದು ಅಷ್ಟೆ. ಅವರು ಸ್ವಲ್ಪ ಭಾವೋದ್ರೇಕಕ್ಕೆ ಒಳಗಾದರು. ದಯಮಾಡಿ ಅದನ್ನು ಅಲ್ಲಿಗೇ ನಿಲ್ಲಿಸೋಣ. ತಾವು ಭಾಷಣವನ್ನು ಮುಂದುವರೆಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೇ ನಾನು ಒಂದು ಮಾತನ್ನು ಹೇಳುತ್ತೇನೆ. ಇದೊಂದು ಹೊಸ ಸಂಪ್ರದಾಯ. ಸಮಾಜಘಾತಕರು ಯಾರೂ ಬಂದು ಟೊಮ್ಯಾಟೊ ತಂದು ಹಾಕುವುದಿಲ್ಲ. ಅವರು ಬೇರೆಬೇರೆ ಕೆಲಸಗಳನ್ನು ಮಾಡುತ್ತಾರೆ. ಆದರೆ ನಾನು ಏನು ಹೇಳಲಿಕ್ಕೆ ಹೊರಟಿದ್ದೆ ಎಂದರೆ.....

ಶ್ರೀ ಕೆ. ಎಂ. ಕೃಷ್ಣರೆಡ್ಡಿ : ಅಧ್ಯಕ್ಷರೇ....

ಶ್ರೀ ಬಿ. ಎಸ್. ಯಡಿಯೂರಪ್ಪ : ಸ್ವಲ್ಪ ಕೇಳಿ. ನೀವು ಎಮೋಷನಲ್ ಆದರೆ ಹೇಗೆ ಆಗುತ್ತದೆ? ನಾನು ಅದನ್ನು ಪ್ರಸ್ತಾಪ ಮಾಡಿದ್ದೇನಾ? ಕಲ್ಲು ಹೊಡೆದದ್ದು ಸರಿ ಎಂದು ಹೇಳಿದ್ದೇನಾ?

ಅಧ್ಯಕ್ಷರು : ಈಗ ಕೋಲಾರದಲ್ಲಿ ಬಿಸಾಕುವುದಕ್ಕೆ ಕಲ್ಲೇ ಸಿಗುವುದು. ಇನ್ನೇನು ಸಿಗುತ್ತದೆ?

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಮಾನ್ಯ ಅಧ್ಯಕ್ಷರೇ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಕಲ್ಲೂ ಸಿಗುತ್ತದೆ, ಬಂಗಾರವೂ ಸಿಗುತ್ತದೆ. ಕೊನೆಪಕ್ಷ ಬಂಗಾರವನ್ನಾದರೂ ಬಿಸಾಡಿಬಿಡಲಿ.

ಅಧ್ಯಕ್ಷರು : ಬಂಗಾಲ ಇಲ್ಲ. ಬಂಗಾರ ಎಲ್ಲಾ ಹೋಯಿತು. ಏನು ಶ್ರೀನಿವಾಸ್ ರವರೇ. ಎರಡುಮೂರು ಸಲಎದ್ದುನಿಂತು ಕೇಳಿದ್ದಾರೆ. ಅವರಿಗೆ ಒಂದು ಅವಕಾಶ ಕೊಡೋಣ. ಪಾಪ, ಹೊಸ ಸದಸ್ಯರು. ಹೇಳಿ.

ಶ್ರೀ ಆರ್. ಶ್ರೀನಿವಾಸ್ : ನಮ್ಮ ಕೋಲಾರ ಜಿಲ್ಲೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಸಾವಿರರಾರು ಲೋಡುಗಳು ಈಗ ಹೋಗುತ್ತಿವೆ. ಬರೇ ಚಿಂತಾಮಣಿ ಒಂದೇ ಅಲ್ಲ. ತಮ್ಮ ಕ್ಷೇತ್ರವಾಗಬಹುದು. ಕೋಲಾರ ಆಗಬಹುದು, ನನ್ನ ಕ್ಷೇತ್ರ ಆಗಬಹುದು. ಆದರೆಅಲ್ಲಿ ಯಾರೂ ಕೂಡ, ಯಾವ ರೈತರೂ ಕೂಡ ಬಹುಶಃ ಈ ಒಂದು ಘಟನೆಯನ್ನುನಡೆಸಿಲ್ಲ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ, ಎನ್. ಹೆಚ್. 4 ರಿಂದ ಹೋಗಬೇಕಾದರೆ ವಡ್ಡಳ್ಳಿಯಲ್ಲಿ ಸುಮಾರು ದಿನಕ್ಕೆ 150 ರಿಂದ 200 ಲೋಡ್ ಹೋಗುತ್ತದೆ. ನಾನು ಪ್ರತಿದಿನ ಅಲ್ಲಿಂದಲೇ ಹಾದುಹೋಗುವುದು ನಮ್ಮ ಊರಿಗೆ. ಆದರೂ ಒಬ್ಬ ರೈತ ಕೂಡ ನನ್ನ ಗಾಡಿಯನ್ನು ನಿಲ್ಲಿಸಿ ಈ ರೀತಿ ಟೊಮ್ಯಾಟೊ ಬೆಲೆ ಕಡಿಮೆಯಾಗಿದೆ, ಇದರ ನೀವು ಯಾರೂ ಪ್ರತಿಭಟನೆ ಮಾಡಿಲ್ಲ ಎಂದು ಕೇಳಲಿಲ್ಲ ಈಗ ಚಿಂತಾಮಣಿಯಲ್ಲಿ ಏನಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ನಿಜವಾದ ರೈತರು ಯಾರೂ ಕೂಡ ಅದನ್ನು ಮಾಡುವುದಕ್ಕೆ ಹೋಗಿಲ್ಲ. ಅದು ರಾಜಕೀಯವಾದಂಥ ಒಂದು ಪರಿವರ್ತನೆಯಾಗಿ, ವೈಯಕ್ತಿಕವಾದ ದ್ವೇಷವನ್ನು ತೀರಿಸಿಕೊಳ್ಳುವುದಕ್ಕೆ ಈ ಒಂದು ಘಟನೆ ನಡೆದಿದೆಯೇ ಹೊರತುಬೇರೆ ಯಾವ ಕಾರಣದಿಂದಲೂ ಅಲ್ಲ. ಎರಡನೆಯದಾಗಿ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ಈ ವಿದ್ಯುಚ್ಛಕ್ತಿ ಬಗ್ಗೆ ನಾವು ಬಹಳವಾಗಿ.

ಅಧ್ಯಕ್ಷರು : ಅದರ ಬಗ್ಗೆ ಆಮೇಲೆ ಮಾತನಾಡಿ. ನಿಮಗೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸ್ವಾಮಿ, ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ ತಾವು ಕೋಲಾರ ಜಿಲ್ಲೆಯಿಂದ ಬಂದವರು. ಇಡೀ ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಐ.ಪಿ. ಸೆಟ್ಟುಗಳು ಇರುವುದು ಕೋಲಾರ ಜಿಲ್ಲೆಯಲ್ಲಿ. ತಾವು ಆತ್ಮಾವಲೋಕನ ಮಾಡಿಕೊಂಡು ಹೇಳಿ. ಇವತ್ತು ವಿದ್ಯುತ್‌ದರವನ್ನು ಮನಬಂದಂತೆ ಏರಿಸಿ. ರೈತನನ್ನು ಉಳಿಸುವುದಕ್ಕೆ ಫ್ರೀಯಾಗಿ ವಿದ್ಯುತ್ ಕೊಡುತ್ತಿದ್ದುದು ಅಕೌಂಟ್ ಸಿಗುವುದಿಲ್ಲ ಎಂದು ಹೇಳಿ ನಾಮಿನಲ್ ಆಗಿ ಹೆಚ್. ಪಿ. ಗೆ ಒಂದುನೂರು ರೂಪಾಯಿ ಹಾಕಬೇಕೆಂದು ಹೇಳಿ ನಾವೆಲ್ಲರೂ ಸದನಸಮಿತಿಯಲ್ಲಿ ಒಪ್ಪಿಕೊಂಡು ಮೇಲೂ ಸಹ ಈ ರೀತಿ ಮಾಡಿದ್ದಾರೆ ಮುನ್ನೂರು ಅಡಿ ಹೋದರೂ ಸಹ ನೀರು ಸಿಗುವುದಿಲ್ಲ. ಕಷ್ಟಪಟ್ಟು ಬೆಳೆದಂಥ ಆ ಟೊಮೆಟೊ ಹಣ್ಣು ಇರಬಹುದು, ತರಕಾರಿ ಇರಬಹುದು. ಸರಿಯಾದ ಬೆಲೆಸಿಗದೇನೇ ರೈತ ಕಂಗಾಲಾಗಿದ್ದಾನೆ. ಆಲೂಗಡ್ಡೆ ಬೆಳೆದವನದ್ದೂ ಅದೇ ಸ್ಥಿತಿ, ಈರುಳ್ಳಿ ಬೆಳೆದವನದ್ದೂ ಅದೇ ಸ್ಥಿತಿ. ನಿಮ್ಮ ಸರ್ಕಾರದಲ್ಲಿ ಈ ಒಂದು ಪರಿಸ್ಥಿತಿ ಇವತ್ತು ಬಂದಿದೆ. ಇದನ್ನು ಸರಿಪಡಿಸುತ್ತೇವೆ ಎಂದು ಹೇಳಿ ಓಟು ಕೇಳಿದಿರಿ. ಇದನ್ನು ಸರಿಪಡಿಸುತ್ತಾರೆ ಎಂದು ನಂಬಿಕೊಂಡು ಜನರು ನಿಮಗೆ ಓಟು ಕೊಟ್ಟರು. ಆದರೆ ಇವತ್ತು ಈ ದೇಶಕ್ಕೆ ಅನ್ನಕೊಡುವಂಥ ಅನ್ನದಾತ, ಯಾರು ನೀರಾವರಿ ಪ್ರದೇಶ ಇಲ್ಲದೇನೆ ಆ ಖುಷ್ಕ ಭೂಮಿಯಲ್ಲಿ ಮಳೆ ಆಶ್ರಯದಲ್ಲಿ ಪಂಪುಸೆಟ್ಟು ಹಾಕಿಕೊಂಡು, ಆತನ ಹೆಂಡತಿಮಕ್ಕಳು ಜೀವನ ನಡೆಸುತ್ತಿದ್ದಾರೆ, ಅದಕ್ಕೂ ಕಲ್ಲುಹಾಕುತ್ತಿದ್ದೀರಿ. ಅದನ್ನು ಹೇಗೆ ಸಬ್ಸಿಡೈಸ್ಡ್ ಮಾಡುವುದು ಅದನ್ನು ಯೋಚನೆ ಮಾಡೋಣ ಆ ಲಾಸ್ ಎಲ್ಲಾ ಕೆ.ಇ.ಬಿ. ಯವರು ತುಂಬಿಕೊಡಬೇಕು ಎಂದು ಏನಿಲ್ಲ. ಬಡವರ ಉದ್ಧಾರ ಮಾಡುತ್ತೇವೆ ಎಂದು ಬೊಬ್ಬೆ ಹೊಡೆಯುವ ನೀವು ಬೇರೆ ರೂಪದಲ್ಲಿ ಅದನ್ನು ತುಂಬಿಕೊಡಿ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಅದಕ್ಕೋಸ್ಕರವೇ ಬೇರೆಬೇರೆ ದೊಡ್ಡ ದೊಡ್ಡ ಕಾರ್ಖಾನೆ ಮಾಲೀಕರುಗಳಿಂದ ಹೆಚ್.ಟಿ.ಲೈನ್‌ನಿಂದ ವಿದ್ಯುತ್ ಕೊಡುತ್ತಿದ್ದೇವೆ, ಅದರ ಬಗ್ಗೆ ನಾನು ಮುಂದೆ ಬರುತ್ತೇನೆ. ಯಾವರೀತಿ ಈ ರಾಜ್ಯದ ರೈತ ಎರಡುಎಕರೆ ಮೂರು ಎಕರೆಯಲ್ಲಿ ಮಳೆ ಆಶ್ರಯದಲ್ಲಿ ಬೆಳೆಯನ್ನು ಬೆಳೆಯುತ್ತಾನೆ, ನಿವೇ ನಾನು ಮಂತ್ರಿಯಲ್ಲ, ಎಂ.ಎಲ್.ಎ. ಅಲ್ಲ ಎಂದು ಹೇಳಿಬಿಟ್ಟು ಯಾರೋ ತಿಳಿಗೇಡಿಗಳು ಕುಯುಕ್ತಿ ಮಾಡುವುದಕ್ಕೆ ಬೆಂಬಲ ಕೊಡುವುದಕ್ಕೆ ನಾವು ಇಲ್ಲಿ ನಿಂತಿಲ್ಲ. ನಾನು ಹೇಳುತ್ತೇನೆ, ಇದೇ ರೀತಿನಾವು ಆಡಳಿತವನ್ನು ಮುಂದುವರೆಸಿದರೆ ಇಲ್ಲಿ ಕೈಕಟ್ಟಿಕೊಂಡು ನಿಂತುಕೊಂಡರೆ ವಿದ್ಯುತ್ ಉಪಯೋಗ ಮಾಡುವಂಥ ಸಾಮಾನ್ಯ ಗ್ರಾಹಕ ಯಾರಿದ್ದಾನೆ, ರೈತ ಇರಬಹುದು ಅಥವಾ ಕಾರ್ಖಾನೆಯಲ್ಲಿ ಕೆಲಸಮಾಡಿಕೊಂಡು ಎರಡುಹೊತ್ತು ನೆಮ್ಮದಿಯಿಂದ ಊಟ ಮಾಡುವವನು ಈ ನಿಮ್ಮ ವಿದ್ಯುತ್‌ದರವನ್ನು

ಮನಬಂದಂತೆ ಏರಿಸಿದಮೇಲೆ ಕಾರ್ಖಾನೆ ಬಾಗಿಲುಹಾಕಿ, ಲಕ್ಷಾಂತರ ಜನ ಕಾರ್ಮಿಕರು ಬೀದಿಪಾಲಾಗಿ, ಎರಡು ಹೊತ್ತು ಗಂಜೀಗೂ ಕೂಡ ಸಾಕಾಗದೆ ಸಾಯುತ್ತಿದ್ದಾರೋ ಅವರು ಬಡಿಗೆ ತೆಗೆದುಕೊಂಡು ಬೆನ್ನುಹತ್ತುವಂಥ ಕಾಲ ಬಹಳ ಹತ್ತಿರಕ್ಕೆ ಬರುತ್ತಿದೆ. ಬರೀ ಟೊಮೆಟೊ ಸುರಿಯುವುದು ಅಲ್ಲ. ಇದನ್ನು ನಾವು ನೀವು ಎಲ್ಲರೂ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಕೇವಲ ನಿಮ್ಮ ಮೇಲೆ ಆರೋಪ ಮಾಡುವುದಕ್ಕೆ ನಾನು ಈ ಮಾತನ್ನು ಆಡುತ್ತಿಲ್ಲ. ಒಂದು ಸರ್ಕಾರ ಎಂದರೆ, ನಾವು ಯಾರ ಪರವಾಗಿ ಇರುವಂಥದ್ದು? ನಮ್ಮ ಮಾಲೀಕರ ಯಾರು? ಈ ರಾಜ್ಯದ ರೈತರ, ಕಾರ್ಮಿಕರ ಪರಿಸ್ಥಿತಿ ಏನು? ಇದರ ದುಷ್ಪರಿಣಾಮ ಏನು, ಇದರ ಬಗ್ಗೆ ಯೋಚನೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಬೇರೆ ಯಾವುದೇ ರೀತಿಯಿಂದ ಇದನ್ನು ಪ್ರಸ್ತಾಪ ಮಾಡುವಂಥ ಪ್ರಯತ್ನವನ್ನು ನಾನು ಮಾಡುತ್ತಿಲ್ಲ. ಯಾವ ರೀತಿಯಲ್ಲಿ ನಿಮ್ಮ ಇಲಾಖೆಯವರು ನಿಮಗೆ ದ್ರೋಹ ಮಾಡುತ್ತಿದ್ದಾರೆ? ನಾನೇ ಕೇಳಿದ ಪ್ರಶ್ನೆಗೆ ನಿಮ್ಮ ಇಲಾಖೆಯವರೇ ಅಸೆಂಬ್ಲಿಯಲ್ಲಿ ಕೊಡುವಂಥ ಉತ್ತರ ಇದು. ಈ ರೀತಿಯಿಂದ ನೀವು ಹೇಳಿಕೆ ಮಾಡಿಕೊಂಡು ಹೊರಟರೆ ನಿಮಗೆ ದೇವರು ಒಳ್ಳೆಯದು ಮಾಡುತ್ತಾನಾ? ಬೈರೇಗೌಡರು ಇದನ್ನು ಒಪ್ಪುತ್ತಾರಾ? ಸ್ವಾಮಿ ಏನು ಉತ್ತರ ಕೊಟ್ಟಿದ್ದೀರಿ ಅಸೆಂಬ್ಲಿಯಲ್ಲಿ? 94-95ನೇ ಸಾಲಿನಲ್ಲಿ ಆ ಸಂದರ್ಭದಲ್ಲಿ ನಾನು ಪ್ರಶ್ನೆ ಕೇಳಿದಾಗ ರಾಜ್ಯದಲ್ಲಿ ಲಭ್ಯವಿರುವ ವಿದ್ಯುಚ್ಛಕ್ತಿಯಲ್ಲಿ ಶೇಕಡಾ ಎಷ್ಟು ಭಾಗ ನೀರಾವರಿ ಪಂಪು ಸೆಟ್ಟುಗಳಿಗೆ ಖರ್ಚಾಗುತ್ತಿದೆ? ಇದು ಪ್ರಶ್ನೆ. 94-95ನೇಸಾಲಿನಲ್ಲಿ ರಾಜ್ಯದಲ್ಲಿ ಲಭ್ಯವಿರುವ ಒಟ್ಟು ವಿದ್ಯುಚ್ಛಕ್ತಿಯಲ್ಲಿ ಶೇಕಡಾ 45.9ರಷ್ಟು ವಿದ್ಯುತ್ತ್‌ನ್ನು ನೀರಾವರಿ ಪಂಪು ಸೆಟ್ಟುಗಳಿಗೆ ಕರ್ಚಾಗುತ್ತಿದೆ. ಏನು ಮಾಡಬೇಕು ಇವರಿಗೆ? ಶೇಕಡಾ 55 ಭಾಗ ಮೀಟರೇ ಇಲ್ಲ ನಿಮಗೆ. 45 ಭಾಗ ಜನರಿಗೆ ಕನ್ಸ್ಯೂಮರ್ಸ್‌ಗೆ ಮೀಟರ್ ಇದೆ. ಕಳವು ಆಗುತ್ತಿದೆ, ಲೂಟಿಯಾಗುತ್ತಿದೆ. ಟ್ರಾನ್ಸಮಿಷನ್ ಲಾಸ್ ಆಗುತ್ತಿದೆ. ಯಾರು ಬಡಪಾಯಿ ರೈತ ಅನ್ನ ಕೊಡುತ್ತಿದ್ದಾನೆ ಅವನ ಲೆಕ್ಕಕ್ಕೆ ಎಲ್ಲಾ ಬರೆಯುತ್ತೀರೇನು? ಇದು ಶೋಭೆ ತರುವಂಥ ಸಂಗತಿಯೇನು? ಇದು ಲಜ್ಜೆಗೆಟ್ಟಿ ನಡವಳಿಕೆ ಎಂದು ಜನ ಮಾಡನಾಡುವುದಿಲ್ಲವೇನು? ಹಾಗೆಂದು ರೈತರು ಅಂದುಕೊಳ್ಳುವುದಿಲ್ಲವೇನು? ಏನೇ ಆದರೂ ಅದನ್ನು ರೈತರ ಮೇಲೆ ಹೊರಿಸುವಂಥ ಕೆಟ್ಟ ಪ್ರವೃತ್ತಿ ನಿಮ್ಮ ಕೆ.ಇ.ಬಿ. ಇಲಾಖೆಯ ಅಧಿಕಾರಿಗಳಲ್ಲಿ ಏನುಬಂದಿದೆ, ಇದನ್ನು ತಡೆಯುವಂಥ ಏನಾದರೂ ಪ್ರಾಮಾಣಿಕ ಪ್ರಯತ್ನವನ್ನು ನೀವು ಮಾಡುತ್ತೀರಾ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತಿದ್ದೇನೆ, ಅಷ್ಟೆ. ಯಾರು, ಪ್ರೊ॥ ಅಮೂಲ್ಯಾ ರೆಡ್ಡಿ, ಅಂತರರಾಷ್ಟ್ರೀಯ ಇಂಧನ ಸಂಸ್ಥೆಯವರುದು ಇದರ ಬಗ್ಗೆ ಎಲ್ಲಾ ತನಿಖೆ, ಶೋಧನೆಮಾಡಿ ನೀರಾವರಿ ಪಂಪುಸೆಟ್ಟುಗಳಿಗೆ ನಾವು ಕೊಡುತ್ತಾ ಇರುವುದು ಶೇಕಡಾ 20 ಎಂದು ಹೇಳಿದ್ದಾರೆ. ಇದನ್ನು ಒಪ್ಪುತ್ತೀರಾ ಇಲ್ವಾ ನೀವು ? ಏಕೆ ನೀವು ರೈತರನ್ನು ಶೋಷಣೆ

ಮಾಡುವುದಕ್ಕೆ, ಅವರನ್ನು ಇಕ್ಕಟ್ಟಿಗೆ ಸಿಕ್ಕಿಸುವುದಕ್ಕೆ 49.5 ಪರ್ಸೆಂಟ್ ವಿದ್ಯುತ್‌ನ್ನು ಪಂಪುಸೆಟ್ಟುಗಳಿಗೆ ಕೊಡುತ್ತಿದ್ದೇವೆ ಎಂದು ಉತ್ತರ ಕೊಡುವಂಥ ಸಾಹಸವನ್ನು ಮಾಡುತ್ತೀರಿ? ನಿಮ್ಮ ಉದ್ದೇಶ ಏನು? ಈಗ ತಾನೆ ಬೆಳಿಗ್ಗೆ ಸುರೇಶಕುಮಾರು ಅವರು ರೆಫರ್‌ಮಾಡಿದರು. ಇಲ್ಲೇ ಚರ್ಚೆಯಾಯಿತು. ಆಗ ಮುಖ್ಯ ಮಂತ್ರಿಗಳು ಹೇಳಿದರು ಕೆ. ಇ. ಬಿ. ಯಲ್ಲಿನ ಉನ್ನತ ಅಧಿಕಾರಿಗಳು ಕಾರ್ಖಾನೆ ಮಾಲೀಕರ ಜೊತೆಗೆ ಶಾಮೀಲಾಗಿ ಐದುನೂರು ಮೆಗಾವ್ಯಾಟ್ ವಿದ್ಯುತ್ ಕಳ್ಳತನ ಆಗುತ್ತಿದೆ ಎಂದು ಐದುನೂರು ಬೇಡ, ಮುನ್ನೂರು ಇಟ್ಟುಕೊಳ್ಳಿ, ಇನ್ನೂರು ಇಟ್ಟುಕೊಳ್ಳಿ. ಖಾಸಗೀಕರಣ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ ಎಂದು ಇಲ್ಲಿ ಹೇಳಿಕೆಯನ್ನು ಫ್ಲೋರ್‌ಆಫ್ ದಿ ಹೌಸ್‌ನಲ್ಲಿ ಕೊಟ್ಟರು. ಅದು ರೆಕಾರ್ಡಿನಲ್ಲಿದೆ. ನಾನು ಕೇಳುತ್ತೇನೆ ನಿಮ್ಮ ಅಧಿಕಾರಿಗಳನ್ನು ಕರೆದುಯಾವತ್ತಾದರೂ ಕೇಳಿದ್ದೀರೇನು? ನಿಮಗೆ ಪುರಸೊತ್ತು ಇದೆಯೇನು? ರಾಜಕೀಯ ಗೊಂದಲದಲ್ಲಿ ದೊಂಬರಾಟದಲ್ಲಿ ಕಾಲಹರಣ ಮಾಡುತ್ತಿದ್ದೀರಿ. ನಿಮಗೆ ಪುರಸೊತ್ತಿಲ್ಲ. ನಿಮಗೆ ಜನ ಸತ್ತಿದ್ದಾರೋ ಬದುಕಿದ್ದಾರೋ ಎಂಬುದು ಗೊತ್ತಿಲ್ಲ.

ಲೇಖಾನುದಾನ ಒಂದು ತಿಂಗಳಿಗೆ ತೆಗೆದುಕೊಳ್ಳಬೇಕಾಗಿತ್ತು ಆದರೆ ನೀವು 6 ತಿಂಗಳು ತೆಗೆದುಕೊಂಡು 4 ತಿಂಗಳ ಮೇಲೆ ಸೇರುತ್ತಾ ಇದ್ದೀರಿ ಸಾವಿರಾರು ಸಮಸ್ಯೆಗಳನ್ನು ತೆಗೆದುಕೊಂಡು ಮಾತನಾಡುವಂಥ ಸ್ಥಿತಿ ಬಂದಿದೆ, ಅಲ್ಲಿ ಜನಗಳು ಸಾಯುತ್ತಾ ಇದ್ದಾರೆ ಆ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಿ, ಅದರ ಬಗ್ಗೆ ಗಮನಹರಿಸಿ ಎಂದು ಹೇಳಿದರೆ. ಬೈರೇಗೌಡರೇ ಏನೋ ಹೇಳಿಕೊಂಡು ಕುಳಿತರೆ ನಾನು ಏನೂ ಮಾಡುವಂಥ ಸ್ಥಿತಿಯಲ್ಲಿ ಇಲ್ಲ.

ಶ್ರೀ ಬೈರೇಗೌಡ : ಸರ್ಕಾರ ಬಹಳ ತೀವ್ರವಾದ ಗಮನವನ್ನು ಈ ವಿದ್ಯುತ್ ವಿಚಾರದಲ್ಲಿ ಕೊಡುತ್ತಾ ಇದೆ, ಅದಕ್ಕೋಸ್ಕರ ಮಾನ್ಯ ಉಪ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ರಚಿಸಿದ್ದಾರೆ. ಅದರಲ್ಲಿ ನಾನು ಮತ್ತು ಮಾನ್ಯ ಸಿಂಧ್ಯಾರವರು ಕೂಡ ಸದಸ್ಯರಾಗಿದ್ದೇವೆ.

(ಗೊಂದಲ)

ನೀವು ಏನು ಗಮನಿಸುತ್ತಿದ್ದೀರಿ ಎಂದು ಹೇಳಿದ್ದಕ್ಕೆ ನಾನು ಏನು ಮಾಡುತ್ತಿದ್ದೇನೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ನಿಂತಿದ್ದೇನೆ. ಸಚಿವ ಸಂಪುಟದ ಉಪ ಸಮಿತಿ ಆಗಾಗ ಸಭೆಗಳನ್ನು ಸೇರಿ ನೀವು ಹೇಳಿರತಕ್ಕಂಥ ಅಂಶಗಳು ಏನು ಇದ್ದಾವೋ. ವಿದ್ಯುತ್ ಸೋರುತಕ್ಕಂಥದ್ದು ನಿಜ, ಕಳ್ಳತನ ಆಗತಕ್ಕಂಥದ್ದು ನಿಜ, ಟ್ರಾನ್ಸ್‌ಮಿಷನ್ ಲಾಸ್

ಆಗತಕ್ಕಂಥದ್ದು ನಿಜ, ಇದೆಲ್ಲವನ್ನು ಸರಿಪಡಿಸತಕ್ಕಂಥದ್ದು ಯಾವ ರೀತಿ ಎನ್ನುವುದನ್ನು ನಾವು ಬಹಳ ತೀವ್ರವಾದಂಥ ಕ್ರಮಕೈಗೊಳ್ಳುತ್ತಾಇದ್ದೇವೆ ಅದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದಾರೆ ಎಲೆಕ್ಟ್ರಾನಿಕ್ಸ್ ಮೀಟರ್ಸ್‌ನ್ನು ಉಪಯೋಗಿಸತಕ್ಕಂಥದ್ದು ಟ್ಯಾಂಪರ್‌ಪ್ರೂವ್ ಇದು ಪ್ರಪಂಚದಲ್ಲೇ ಉತ್ತಮವಾದಂಥ ಮೀಟರ್‌ಗಳು. ಅವುಗಳನ್ನು ಕೂಡ ತರಿಸಿ ಯಾವುದೇ ಸಂದರ್ಭದಲ್ಲಿ ವಿದ್ಯುತ್ ಟ್ಯಾಂಪರ್ ಆಗದಂಥ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕೆಂದು ಸಹ ಸಲಹೆ ಕೊಟ್ಟಿದ್ದಾರೆ ಅದು ಈಗಾಗಲೇ ಕಾರ್ಯಗತವಾಗುತ್ತಿದೆ, ಒಂದೇ ಬಾರಿಗೆ ವಿದ್ಯುತ್ ಪಂಪ್ ಸೆಟ್ಟುಗಳಿಗೆ ಹಾಕಿರುವ ಮೀಟರ್‌ಗಳನ್ನು ಬದಲಾಯಿಸಬೇಕಾದರೆ ಸುಮಾರು 80 ಕೋಟಿ ರೂಪಾಯಿ ಒಂದು ವರ್ಷದಲ್ಲಿ ಬೇಕಾಗುತ್ತದೆ. ಹಾಗೆಮಾಡುವುದಕ್ಕೆ ಸಾಧ್ಯವಿಲ್ಲ. ಅದು ಒಂದೇ ಸಾರಿ ಆಗತಕ್ಕಂಥ ಕೆಲಸ ಅಲ್ಲ, ಆದರೆ ನಾವು ಆ ದಿಕ್ಕಿನಲ್ಲಿ ಬಹಳ ತೀವ್ರವಾದಂಥ ಪ್ರಯತ್ನವನ್ನು ನಡೆಸಿದ್ದೇವೆ. ಮತ್ತು ಸರ್ಕಾರ ಕೂಡ ಈ ಬಗ್ಗೆ ಗಮನ ಹರಿಸಿದೆ ಎಂಬುದರ ಬಗ್ಗೆ ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ದಿನಾಂಕ : 30-6-97ರಂದು ಏನು ನೋಟಿಫಿಕೇಷನ್ ಹೊರಟಿದೆ ನಿಮ್ಮ ಕನ್‌ಸೆಂಟಿನಿಂದ ಸಬ್‌ಕಮಿಟಿ ಒಪ್ಪಿದ ಮೇಲೆ ಅವರು ನಿಮ್ಮನ್ನೆಲ್ಲಾ ಕೇಳಿ ರೈತರು ಮಕ್ಕಳನ್ನು ಕೇಳಿ ರೇಟ್ ಎನ್‌ಹಾನ್ಸ್ ಮಾಡಿ ಇಶ್ಯೂ ಮಾಡಿದ್ದೀರಿ ಎಂದು ಆಯಿತಲ್ಲಾ.

ಶ್ರೀ ಸಿ. ಬೈರೇಗೌಡ : ಅದು ಉಪ ಸಮಿತಿ ಇರಬಹುದು. ಸಚಿವ ಸಂಪುಟ ಇರಬಹುದು ಅದು ಸರ್ಕಾರದ ತೀರ್ಮಾನ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಯಾವುದೇ ಸಂದರ್ಭ ಬಂದರೂ ಕೂಡ ಈ ಸರ್ಕಾರ ಮಾಡುತ್ತಿರುವುದು ಒಂದು ಘನ ಕೆಲಸ ಎಂದರೆ ಸಚಿವ ಸಂಪುಟದ ಉಪ ಸಮಿತಿ ಮಾಡಿದ್ದೇವೆ. ಅವರು ಅದನ್ನೆಲ್ಲಾ ನೋಡುತ್ತಾರೆ ಎಂದು ಹೇಳಿ ಎರಡೂವರೆ ವರ್ಷವಾಯಿತು, ಅಂದರೆ ಗಮನ ಹರಿಸುವುದಕ್ಕೆ ಎರಡೂ ವರೆ ವರ್ಷವಾಯಿತು, ಇದಕ್ಕೆ ಪರಿಹಾರ ಸಿಗುವುದಕ್ಕೆಮತ್ತೆ ಎರಡೂ ವರೆ ವರ್ಷ, ಅಲ್ಲಿಯವರೆಗೆ ಜನ ನಿಮ್ಮನ್ನು ಬಿಡುವುದಿಲ್ಲ. It is the question of one or two months. You are counting the days. ನಾನು ಏನು ಹೇಳುತ್ತೇನೆಂದರೆ ನಾನು ಹಿಂದೆ ಮಾನ್ಯ ಬೇರ್ರೈಗೌಡರ ಪಕ್ಕದಲ್ಲಿ ಕುಳಿತುಕೊಂಡಿದ್ದಾಗ ಹೇಳುತ್ತಿದ್ದೆ ನಿಮಗೆ ಹುಚ್ಚು ಅಧಿಕಾರದ್ದು

ನಮ್ಮದೆ ಹುಚ್ಚು ಜನಗಳಿಗೆ ಪರಿಹಾರ ಹುಡುಕಬೇಕು, ನ್ಯಾಯ ಒದಗಿಸಬೇಕು ಎಂದು ಅದೇ ನಮಗೂ ನಿಮಗೂ ಇರುವ ವ್ಯತ್ಯಾಸ.

ಅಧ್ಯಕ್ಷರು : ಇಲ್ಲಿ ನಿಮಗೆ ಏನು ಎಂದರೆ ಹುಚ್ಚುರು ಇಲ್ಲಿಯಾರೂ ಬರುವ ಹಾಗೆ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಹುಚ್ಚ ಎಂದರೆ ಅನೇಕ ತರಹದ್ದು ಇದೆ, ಈ ಹುಚ್ಚು ಏನೆಂದರೆ ಜನರ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕು ಎನ್ನುವುದು.

ಅಧ್ಯಕ್ಷರು : ಹಾಗಾದರೆ ನನ್ನ ತಕರಾರು ಏನು ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸ್ವಾತಂತ್ರ್ಯ ಬಂದು 50 ವರ್ಷಗಳಾಯಿತು ಈ ದುಸ್ಥಿತಿ ದೇಶದಲ್ಲಿ, ರಾಜ್ಯದಲ್ಲಿ ಜನರು ಎದುರಿಸುತ್ತಿದ್ದಾರೆ. ಇಂತಹ ದುಸ್ಥಿತಿಗೆ ಕಾರಣರಾದ ಜನರನ್ನು ಜನಗಳೇ ಮನಗೆ ಕಳಿಸುತ್ತಾರೆ ಇಂಥ ಸದ್ಬುದ್ಧಿ ಜನಗಳಿಗೆ ಯಾವಾಗ ಬರುತ್ತದೆ ಎಂದು ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್. ಶಿವಪ್ಪ : ಹುಚ್ಚರ ಬಗ್ಗೆ ಸ್ವಲ್ಪ ವ್ಯಾಖ್ಯಾನ ನೀಡಿ.

ಶ್ರೀ ವಾಟಾಳ್ ನಾಗರಾಜ್ : ಹುಚ್ಚರ ಮಧ್ಯೆ ನಮ್ಮ ಪರಿಸ್ಥಿತಿ ಏನು ಎಂದು ನನಗೆ ಅನುಮಾನವಾಗುತ್ತಿದೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಬೀಚಿಯವರು ಹುಚ್ಚರ ಬಗ್ಗೆ ಪ್ರಸ್ತಾಪ ಮಾಡುತ್ತಾ ಯಾರ ಹುಚ್ಚನ್ನು ಗುಣಮುಖ ಮಾಡಲಿಕ್ಕೆ ಸಾಧ್ಯವೊ ಅವರನ್ನು ಮಾತ್ರ ಮಾನಸಿಕ ಆಸ್ಪತ್ರೆಗೆ ಸೇರಿಸುತ್ತಾರೆ. ಗುಣಮುಖ ಮಾಡಲಿಕ್ಕೆ ಸಾದ್ಯವಾಗಿಲ್ಲದವರು ಹೊರಗಡೆ ಇದ್ದಾರೆ ನಾವು ಎಲ್ಲರೂ ಒಂದು ರೀತಿಯ ಹುಚ್ಚರೇ, ಗುಣ ಆಗಲಾರದಂಥ ಹುಚ್ಚರು.

ಅಧ್ಯಕ್ಷರು : ನಮಗೆ ಎಂದರೆ ಶ್ರೀ ಯಡಿಯೂರಪ್ಪನವರೇ ಸಂವಿಧಾನದಲ್ಲಿ ಏನು ಹೇಳುತ್ತದೆ ಎಂದರೆ ಈ ಸಬೆಗೆಬರಬೇಕಾದರೆ 25 ವರ್ಷ ಆಗಿರಬೇಕು, ಅವರ ಹೆಸರು ಮತದಾರರ ಪಟ್ಟಿಯಲ್ಲಿ ಇರಬೇಕು, ಅವರಿಗೆ ಯಾವುದೇ ಕೋರ್ಟ್‌ನಿಂದ ಸಂಜೆ ಆಗಿರಬಾರದು, ಅವರಿಗೆ ಹುಚ್ಚು ಹಿಡಿದಿರಬಾರದು. ಇವೆಲ್ಲಾ ಇವೆ. ನೀವು ಈ ರೀತಿಹುಚ್ಚರು ಎಂದು ಹೇಳಿದ್ದಕ್ಕೆ ಇವರು ಎಲ್ಲಾ ಇಲ್ಲಿಗೆ ಹೇಗೆ ಬಂದರು ಎಂದುನನಗೆ ಯೋಚನೆಯಾಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ : ಬೆಳಿಗ್ಗೆ ನಮ್ಮ ಮನೆಗೆಯಾರೋ ಹಿರಿಯರು ಬಂದಿದ್ದರು, ಕುಳಿತುಕೊಂಡು ಚರ್ಚೆ ಮಾಡಬೇಕಾದರೆ ಒಂದು ಮಾತನ್ನು ಹೇಳಿದ್ದೇನೆಂದರೆ ಏನಪ್ಪ ನಿನ್ನ ವ್ಯವಹಾರ ಹೇಗೆ ನಡೆಯುತ್ತದೆ ಎಂದು ಅವರು ಸ್ವಲ್ಪ ಲಾಸ್‌ನಲ್ಲೇ ಇದ್ದೇವೆ ಎಂದರಂತೆ. ರಾಜಕಾರಣಿಗಳು ಕೇಳಿದಂಥ ಪ್ರಶ್ನೆಗೆ ಅವರು ಉತ್ತರ ಕೊಟ್ಟರಂತೆ ನಾವು ಯಾವ ಸ್ಥಿತಿಗೆ ಬಂದಿದ್ದೇವೆ ಎಂದು. ನಮ್ಮಲ್ಲಿ ಲಾಸ್ ಅಕೌಂಟ್ ಇದೆ, ಪ್ರಾಫಿಟ್ ಅಕೌಂಟ್ ಇದೆ. ಇದರಿಂದಾಗಿ ನಮ್ಮ ಸ್ಥಿತಿ ಹಾಳಾಗಿದೆ. ನಿಮಗೆ ಬರೀ ಪ್ರಾಫಿಟ್ ಅಕೌಂಟ್ ಎಂದು ರಾಜಕಾರಣಿಗಳಿಗೆ ಉತ್ತರ ಕೊಟ್ಟಿದ್ದೇವೆ ಎಂದು ಅವರು ಹೇಳಿದ್ದರು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಈ ದಡ್ಡಿನ ಅಧಿಕಾರದ ಹುಚ್ಚು ಅಧಿಕಾರದಲ್ಲಿ ಬಂದವರಿಗೆ ಬಂದಾಗ ಪ್ರಜಾತಂತ್ರ ವ್ಯವಸ್ಥೆ ಸರ್ವನಾಶವಾಗುತ್ತದೆ. ಇದು ಆಗುತ್ತದೋ ಇಲ್ಲ ನಾವು ಆತ್ಮಾವಲೋಕನ ಮಾಡಿಕೊಳ್ಳೋಣ ದೇಶದಲ್ಲಿ ಏನು ಆಗುತ್ತದೆ ಏನು ಇಲ್ಲ ಎಂದು ನಾವೂ ಕೂಡ ನೋಡುತ್ತಿದ್ದೇವೆ, ನಾನು ಈಗ ಹೇಳುವುದೇನೆಂದರೆ ಶ್ರೀ ಕೃಷ್ಣಾ ರೆಡ್ಡಿಯವರಾಗಲಿ, ಶ್ರೀ ಬೈರೇಗೌಡರಾಗಲಿ ಶ್ರೀ ಯಡಿಯೂರಪ್ಪನವರಾಗಲಿ ವೈಯಕ್ತಿಕವಾದ ವಿಷಯಗಳನ್ನು ತಗೆದುಕೊಳ್ಳುವುದು ಅಗತ್ಯವಿಲ್ಲ. ಇವತ್ತು ಜನರಿಗೆ ಇಷ್ಟೊಂದು ಭರವಸೆ ಕೊಟ್ಟು 50 ವರ್ಷದಲ್ಲಿ ಬಹಳ ವರ್ಷಗಳ ಕಾಲ ಈ ದೇಶದಲ್ಲಿ ಆಡಳಿತ ನಡೆಸಿದಂತಹ ಕಾಂಗ್ರೆಸ್‌ನ ಸ್ನೇಹಿತರು ಮಾಡಿದಂತಹ ಎಲ್ಲಾ ಅನಾಹುತಗಳಿಂದ ಮುಕ್ತರಾಗುತ್ತೇವೆಂದು ನಿಮ್ಮನ್ನು ಅಧಿಕಾರಕ್ಕೆ ತಂದರೆ ನೀವು ಅದೇ ಕೆಲಸವನ್ನು ಮಾಡುತ್ತಿದ್ದೀರಲ್ಲಾ ಜನ ನಿಮ್ಮನ್ನು ಕ್ಷಮಿಸುತ್ತಾರೆಯೇ? ಅವರೇನು ಹೇಳುತ್ತಾರೆ ಎಂದರೆ ಅಯ್ಯೋ ಬಡ್ತಿ ನಾವು ನೋಡಿಕೊಳ್ಳುತ್ತೇವೆಂದು. ನಮ್ಮ ಗ್ರಹಚಾರ ಏನೆಂದರೆ ಒಂದು ರೀತಿಯ ಇಡೀ ವ್ಯವಸ್ಥೆ ಹದಗೆಟ್ಟು ಹೋಗಿದೆ. ನಾವು ಎಲ್ಲಾ ಒಂದೇ ಎಂದು ನೀವು ಹೊಸ ವೇಷ ಹಾಕಿಕೊಂಡು ಹೋದಾಗ ಜನ ನಿಮ್ಮನ್ನು ನಂಬಿದರು, ನೀವು ಅದೇರೀತಿ ಟೋಪಿ ಹಾಕಿ ಮೋಸ ಮಾಡುತ್ತಿದ್ದಾರೆಂದು ಜನಗಳು ಮಾತನಾಡುತ್ತಿದ್ದಾರೆ. ಚುನಾವಣೆ ಬಂದಾಗ ಇದು ಹೌದ ಅಲ್ಲವೋ ನೋಡೋಣ. ಯಾವತ್ತೂ ಹೇಳಿಲ್ಲ ಇಷ್ಟು ಬೇಗ ಅಧಿಕಾರದಲ್ಲಿ ಬಂದು ಕುಳಿತುಕೊಳ್ಳುತ್ತೇವೆ ಎಂದು. ನನಗೆ ಗೊತ್ತಿದೆ ಜನ ತಪ್ಪುಮಾಡುವುದಿಲ್ಲ ಇಷ್ಟು ಬೇಗ ಎಂದು ಏಕೆಂದರೆ ಅವರಿಗೆ ನೀವು ಇನ್ನು ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿ ಮುಗಿಸಿ ಬಿಡಿ. ಆಮೇಲೆ ಬುದ್ಧಿಬಂದರೆ ನೋಡೋಣ. ಆದರೆ ನಾನು ಹೇಳುವುದೇನೆಂದರೆ ಈ ರಾಜಕೀಯ ಸೋಗು ಹಾಕಿಕೊಂಡು ನಾವು ಜವಾಬ್ದಾರಿ ತೆಗೆದುಕೊಂಡು ಇಲಾಖೆಯ ಬಗ್ಗೆ ಚಿಂತನೆ ಮಾಡದಿದ್ದರೆ ಹೇಗೆ? ಇವತ್ತು ಎಷ್ಟುಜನ ಮಂತ್ರಿಗಳು ಇದ್ದೀರಿ? ಜಿಲ್ಲಾ ಮಂತ್ರಿಗಳು ಇದ್ದೀರಿ, ಏಕೆ ರಾಜ್ಯದ ಎಲ್ಲಾಇಡೀ ಇಲಾಖೆಗಳಲ್ಲೂ ನೋಡಿಕೊಳ್ಳುವುದಕ್ಕೆ

ಆಗುವುದಿಲ್ಲ ಅದಕ್ಕೆಜಿಲ್ಲೆಗೆಒಬ್ಬರು ವಿಶೇಷ ಗಮನ ನೀಡಲಿ ಎಂದು ಜಿಲ್ಲಾ ಮಂತ್ರಿಗಳು ಇದ್ದಾರೆ, ಆದರೆ ಎಷ್ಟೋ ಜನ ನಿಮ್ಮ ಜಿಲ್ಲಾ ಮಂತ್ರಿಗಳು ತಮ್ಮ ತಾಲ್ಲೂಕುಗಳನ್ನೇ ರಾಜ್ಯಎರಡು ತಿಳಿದುಕೊಂಡು ಬಿಟ್ಟಿದ್ದಾರೆ. ಇದಕ್ಕೆ ಬೇಕಾಗದರೆ ನಾನು ಹತ್ತಾರ ಉದಾಹರಣೆಗಳನ್ನು ಕೊಡಬಲ್ಲೆ, ಇವರು ಯಾರೂ ವಿಧಾನ ಸೌಧಕ್ಕೆ ಬರುವುದೇ ಇಲ್ಲ. ಎಲ್ಲಾ ಮನೆಯಲ್ಲಿ ವ್ಯವಹಾರ ನಡೆಸುತ್ತಾರೆ, ಇದನ್ನು ನಾವು ಇಲ್ಲಿ ಕುಳಿತು ಅನಿವಾರ್ಯವಾಗಿ ಕೇಳಬೇಕಾಗಿದೆ. ಜನ ನಮ್ಮನ್ನು ಥೂ. ಚೀ. ಎಂದು ಬಯ್ಯುತ್ತಿದ್ದಾರೆ. ನೀವು ವಿರೋಧ ಪಕ್ಷದಲ್ಲಿದ್ದುಕೊಂಡು ಏನುಕೆಲಸ ಮಾಡುತ್ತಿದ್ದೀರಿಎಂದು ಜನ ನಮ್ಮನ್ನೇ ಕೇಳುತ್ತಾ ಇದ್ದಾರೆ. ಉತ್ತರ ಕೊಡುವಂಥ ಸ್ಥಿತಿಯಲ್ಲಿ ನಾವುಗಳು ಇಲ್ಲ, ನಿಮಗಾದರೂ ಟೋಮೇಟೋ ಹಣ್ಣು ಸುರಿದು ಹೊರಟು ಹೋದರು, ನಾವು ರಸ್ತೆಯಲ್ಲಿ ಓಡಾಡದಂಥ ಪರಿಸ್ಥಿತಿ ಇಂದು ಬಂದಿದೆ. ಮನನೊಂದು ಬಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧ್ಯಕ್ಷರೇ ನಿಮ್ಮದು ಏನು ತಪ್ಪಿಲ್ಲ ನೀವು ಅಧಿಕಾರದಲ್ಲಿ ಇದ್ದೀರಿ ನಿಮಗೆ ತಪ್ಪು ನೆಪ್ಪು ಗೊತ್ತಿಲ್ಲ ಏಕೆಂದರೆ ನಿಮ್ಮ ಸುತ್ತಮುತ್ತಲು ನಿಮ್ಮನ್ನು ಎರ್ಜೀವ್ ಆಗಿ ಕೆಲಸ ಮಾಡುವುದಕ್ಕೆ ಆಗುತ್ತಾ ಇಲ್ಲ. ನಿಮ್ಮ ಲೋಪದೋಷಗಳು ನಿರೀಕ್ಷೆಗೆ ತಕ್ಕಂಥೆ ಎತ್ತಿತ್ತೋ ಯವುದಕ್ಕೆ ಆಗುತ್ತಾ ಇಲ್ಲ. ನಮಗೆ ಬಹುಮತ ಇದೆ. ನಾವು ಏನು ಮಾಡಿದರೂ ನಡೆಯುತ್ತದೆ ಎನ್ನುವ ಭ್ರಮೆಯಲ್ಲಿ ನೀವು ಕುಳಿತಿದ್ದೀರಿ ಈ ವ್ಯವಸ್ಥೆಯಲ್ಲಿ ನಾವು ಪ್ರತಿಪಕ್ಷದಲ್ಲಿದ್ದಾಗ ಯಾವುದಾದರೂ ಒಂದು ಸಂಗತಿಯನ್ನು ಪ್ರಾಮಾಣಿಕವಾಗಿ ಕಳಕಳಿಯಿಂದ ನಿಮ್ಮ ಗಮನಕ್ಕೆ ತಂದಾಗ ಅದಕ್ಕೆ ಗೌರವ ಕೊಡುವಂತಹ ಸದ್ಬುದ್ಧಿನಿಮಗೆ ಬರಲಿಲ್ಲವಲ್ಲಾ ಎಂದು ನಮಗೆ ದುಃಖವಾಗುತ್ತಿದೆ. ಅದಕ್ಕೆ ಪ್ರತಿ ಕ್ಷಣದಲ್ಲಿನಾವು ಸಾಯುವಂಥ ಪರಿಸ್ಥಿತಿ ನಮಗೆ ಬಂದಿಗೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಳೆಯ ವಿದ್ಯುತ್‌ಮೀಟರ್‌ಗಳನ್ನು ಬದಲಾಯಿಸಿ ಹೊಸ ಎಲೆಕ್ಟ್ರಾನಿಕ್ಸ್ ಮೀಟರ್‌ಗಳನ್ನು ಅಳವಡಿಸಿದ್ದೇವೆ ಎಂದು ನೀವು ಅಗಲೇ ಹೇಳಿದ್ದಿರಿ, ಇದನ್ನು ಯಾರ ತಲೆ ಬೋಳಿಸುವುದಕ್ಕೆ ಹೊರಟಿದ್ದೀರಿ?

ಹೈ-ಟೆನ್‌ಷನ್ ಬಳಕೆದಾರರಿಗೆ ತಲಾ13 ಸಾವಿರ ಕೊಡಬೇಕು, ಅದೇ ರೀತಿಯಾಗಿ ಎಇಹೆಚ್ ಬಳಕೆದಾರರು 1300 ಕೊಡಬೇಕು. ನಿಮ್ಮ ಟ್ರಾನ್ಸ್‌ಮಿಷನ್ ಲಾಸ್‌ಗೆ ಲೆಕ್ಕ ಬುಕ್ ಸಿಗಬೇಕಾದರೆ ಸಾಮಾನ್ಯ ಗ್ರಾಹಕರನ್ನು ಏಕೆ ನೀವು ಗೋಳು ಹುಯ್ದುಕೊಳ್ಳುತ್ತೀರಿ? ಇದಕ್ಕೆ ಏನಾದರೂ ಪರಿಹಾರ ಹುಡುಕಿ ಪ್ರತಿಯೊಂದರಲ್ಲಿ ಸುಲಿಗೆಮಾಡಿದರೆ ಅವನು ಬದುಕುವುದು ಹೇಗೆ? ಇದಕ್ಕೆ ಏನಾದರೂ ಪರಿಹಾರ ಹುಡುಕಿ ಪ್ರತಿಯೊಂದರಲ್ಲಿ ಹುಯ್ದುಕೊಳ್ಳುತ್ತೀರಿ? ಇದಕ್ಕೆ ಏನಾದರೂ ಪರಿಹಾರ ಹುಡುಕಿ ಪ್ರತಿಯೊಂದರಲ್ಲಿ ಸುಲಿಗೆಮಾಡಿದರೆ ಅವನು ಬದುಕುವುದು ಹೇಗೆ? ಇದಕ್ಕೆ ಏನಾದರೂ ಸಬ್ಸಿಡಿ

ತೆಗೆದುಕೊಳ್ಳುವಂಥ ಪ್ರಯತ್ನ ಮಾಡಿ, ಎಲ್ಲಾ ರೀತಿಯಿಂದಲೂ ಅವ್ಯವಸ್ಥೆಯಾಗಿದೆ. ಒಂದು ಕಡೆ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ, ಅವರಿಗೆ 3-30 ರೂಪಾಯಿ ಬಿಲ್ ಹಾಕುತ್ತೀರಿ ಎರಡು ಹೊತ್ತು ಹೊಟ್ಟೆಗೆ ಗಂಜೀಇಲ್ಲದಂಥ ಬಡವರ ಮೇಲೆ ನಿಮ್ಮವಕ್ರದೃಷ್ಟಿ ಬೀಳುತ್ತದೆ. ನಿಮ್ಮ ಮನಸ್ಸಿನಲ್ಲಿ ಏನು ಇದೆ ಎಂದು ಗೊತ್ತಿದೆ 200 ಇತ್ತು ಈಗ 300 ರೂಪಾಯಿ ಮಾಡಿದ್ದೀರಿ. ಇಲ್ಲಿ ಯಡಿಯೂರಪ್ಪನವರು ಖರ್ಗೆಗಯವರು ಕೂಗಾಡುತ್ತಾರೆ, ಆಗ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿಗೆಒಂದು ಸಲ ಮನ್ನಾ ಮಾಡುವುದು ಅವರ ಹತ್ತಿರ ಒಳ್ಳೆಯ ಹೆಸರು ತೆಗೆದು ಕೊಂಡು ಜನತಾದಳ ಮಾಡಿದೆ ಎಂದು ಶಹಭಾಷಗಿರಿ ತೆಗೆದುಕೊಳ್ಳಬಹುದು 300 ರೂಪಾಯಿ ಇದ್ದದ್ದು 200 ರೂಪಾಯಿ ಆಗಿದೆ. ಅಲ್ಲಾ ಅಷ್ಟೇ ಸಾಕು ನಮ್ಮ ರೈತರಿಗೆ ಏಕೆಂದರೆ 100 ಕಡಿಮೆ ಯಾಗಿದೆ ಎಂದು ಇದು. ನಿಮ್ಮ ತಂತ್ರ ಆದರೆ ನಾನು ಇವತ್ತು ಹೇಳುತ್ತೇನೆ ನಾವು ಬಿಜೆಪಿಯವರು ನಿರ್ಧಾರ ಮಾಡಿದ್ದೇವೆ ಖರ್ಗೆಯವರು ಏನುಮಾಡಿದ್ದಾರೋ ಯೋಚನೆ ಮಾಡಿಹೇಳಲಿ. ಸದನ ಸಮಿತಿ ಮತ್ತೊಂದು ಸಮಿತಿ ಮಾಡಿ ನೀವು ಏನು ಚರ್ಚೆಮಾಡಿದರೂ ಯಾವುದಕ್ಕೂ ನಮ್ಮದು ಒಪ್ಪಿಗೆ ಇಲ್ಲ. ನಮ್ಮಕಡ್ಡಾಯ ನಿರ್ಧಾರ ಎನೆಂದರೆ ಸಂಪೂರ್ಣವಾಗಿ 300 ಕೋಟಿರೂಪಾಯಿ ಜಾಸ್ತಿ ಮಾಡಿರುವಂಥದ್ದನ್ನು ಗ್ರಾಹಕರ ಮೇಲೆ ತೆರಿಗೆಹಾಕುವುದರ ಬಗ್ಗೆ ನೀವು ನೋಟಿಫಿಕೇಷನ್ ವಾಪಸ್ಸು ತೆಗೆದುಕೊಳ್ಳಬೇಕು. ಅಧ್ಯಕ್ಷರೇ ತಾವು ಗಮನಿಸಿದ್ದೀರೋ ಇಲ್ಲವೋ ಗೊತ್ತಿಲ್ಲ ಒಂದು ಸದನದ ಸಮಿತಿ ಏಕೆ ಮಾಡಬೇಕು? ಆ ಇಲಾಖೆ ಲಾಭದಾಯಕವಾಗಿ ನಡೆಯಬೇಕಾದರೆ ಎಲ್ಲಿ ಲೂಟಿ ಆಗುತ್ತದೆ ಅದಕ್ಕೆ ಏನು ನಿಯಮವನ್ನು ಅನುಸರಿಸಬೇಕು ಅದಕ್ಕೆ ತಜ್ಞರ ಅಭಿಪ್ರಾಯ ಪಡೆದುಕೊಂಡುಒಂದು ಸಮಿತಿ ಮಾಡಿ ಅದಕ್ಕೆ 6 ತಿಂಗಳು ಸಮಯ ಕೊಡಿ ಈ ರೀತಿ ಸಮಯ ಕೊಟ್ಟಂತಹ ಸಮಿತಿಗಳಿಗೆ ನಾವು ಹಾಜರಾಗುತ್ತೇವೆ ಅದಕ್ಕೆ ನಮಗೆ ಏನು ಟಿಎ, ಡಿಎ ಬೇಡ, ಇದರ ಅಗತ್ಯವೂ ನಮಗೆ ಇಲ್ಲ ನಾವು ಮಾಡಿ ತೋರಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಹೇಳುವುದು ಏನು ಎಂದರೆ ಸ್ಪಷ್ಟವಾಗಿ ಕೇಳಿದ್ದೇನೆ 30-6-97 ರಂದು ಇವರು ಏನು ನೋಟಿಫಿಕೇಷನ್ ಇಷ್ಯು ಮಾಡಿದ್ದಾರೆ, ಅದನ್ನು ವಿತ್ ಡ್ರಾ ಮಾಡಿಕೊಳ್ಳಬೇಕು.

ಎರಡನೆಯದು, ಜಂಟಿ ಸಮಿತಿಗೆ ಸಲಹೆ ಕೊಟ್ಟಿದ್ದು ಎಂದರೆ, ನೀವೇನು ಎರಡು ಸದನಗಳ ಸದಸ್ಯರು ಸೇರಿದ ಜಂಟಿ ಸಮಿತಿಯವರು ಒಂದು ವರದಿ ಕೊಟ್ಟಿದ್ದಿರಿ, ಅದರಲ್ಲಿ ಸುಮಾರು 12 ಅಂಶದ ಶಿಫಾರಸ್ಸು ಏನಿದೆ, ಆ ಶಿಫಾರಸ್ಸುಗಳನ್ನು ಇವರು ಇಂಪ್ಲಿಮೆಂಟ್ ಮಾಡಿದ್ದಾರೋ ಇಲ್ಲವೊ. ಏಕೆಂದರೆ, ನೀವು ಶಿಫಾರಸ್ಸು ಮಾಡಿದ ಮೇಲೆ ಏನು

ಒಳ್ಳೇಯದಾಗಿದೆಯೋ ಕೆಟ್ಟದಾಗಿದೆಯೋ, ಎಷ್ಟು ಲುಕ್ಸಾನು, ಅಥವಾ ಎಷ್ಟು ಆದಾಯ ಬಂತು ಎಂಬುದನ್ನು ನೋಡುವುದಕ್ಕೆ ಸದನದ ಸಮಿತಿ ಮಾಡಿ. ಅದನ್ನು ನೋಡಿದ ಮೇಲೆ, ಮುಂದಿನ ವಿಚಾರ ಎಂಬ ಮಾತನ್ನು ಹೇಳಿದ್ದೇನೆಯೇ ಹೊರತಾಗಿ, ನೋಟಿಫಿಕೇಷನ್ ವಿತ್‌ಡ್ರಾ ಮಾಡಿಕೊಳ್ಳಿ ಎಂದು ನಾನು ಸ್ಪಷ್ಟವಾಗಿ ಮೊದಲೇ ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ತಮ್ಮ ಕೊಠಡಿಗೆ ನಾವು ಬಂದಾಗ ಚರ್ಚೆ ಮಾಡಿದ್ದೇವೆ. ನಾವು ಏನೋ ಹೇಳುತ್ತೇವೆ, ಅವರು ಏನೋ ಭರವಸೆ ಕೊಡುತ್ತಾರೆ. ಅದು ಫಾಲೋ ಅಫ್ ಆಗುವುದಿಲ್ಲ ಅವರಿಗೆ ಬಿಡುವಿಲ್ಲ, ಅದನ್ನು ನಾವು ಒಪ್ಪುತ್ತೇವೆ. ತಮ್ಮ ಕೊಠಡಿಯಲ್ಲಿ ಎಲ್ಲಾ ಪ್ರತಿಪಕ್ಷದ ನಾಯಕರು ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಹೇಳಿದ್ದೇವೆ. ಇವತ್ತು ಈ ರಾಜ್ಯದಲ್ಲಿ ಬಹಳ ಜನ ರೈತರು ಬೋರ್‌ವೆಲ್ ತೆಗೆದು 3-4 ವರ್ಷವಾಯಿತು 70-80 ಸಾವಿರ ಸಾಲ ಮಾಡಿದ್ದಾರೆ. ಕೋಲಾರ ಜಿಲ್ಲೆಯವರೇ ಈ ಕೆಲಸ ಮಾಡಿದ್ದಾರೆ. ಇದು ತಮಗೆ ಚೆನ್ನಾಗಿ ಗೊತ್ತಿದೆ. ಆ ರೀತಿ ಕಾನೂನುಬಾಹಿರವಾಗಿ ನೀವು ಕರೆಂಟ್ ಕೊಡದೇ, ಆ ಲೈನ್‌ನಿಂದ ನೇರವಾಗಿ ಕರೆಂಟ್ ತೆಗೆದುಕೊಂಡರು ಎಂಬುದು ನಿಮ್ಮ ಜಿಲ್ಲೆಯಲ್ಲೇ ಕೊಡದೇ, ಆ ಲೈನ್‌ನಿಂದ ನೇರವಾಗಿ ಕರೆಂಟ್ ತೆಗೆದುಕೊಂಡರು ಎಂಬುದು ನಿಮ್ಮ ಜಿಲ್ಲೆಯಲ್ಲೇ ಜಾಸ್ತಿ. ಅದಕ್ಕೆ ಕಾರಣ ಏನು? ಇದನ್ನು ನೀವು ಅರ್ಥಮಾಡಿಕೊಳ್ಳಿ. ಬಹುಶಃ ಈ ಕೆ. ಇ. ಬಿ. ಅಧಿಕಾರಿಗಳಿಗೆ ತಲೆಯಲ್ಲಿ ಏನಿದೆ ಎಂಬುದನ್ನು ಕೇಳಿ. ಆಗ ಈ ವಿದ್ಯುತ್‌ದರ ಇತ್ತೇ ಸ್ವಾಮಿ? ಯಾವುದೇ ಐ.ಪಿ. ಸೆಟ್‌ಗಳಿಗೆ ಪುಕ್ಕಟೆ ವಿದ್ಯುತ್‌ಕೊಡುತ್ತಿದ್ದರು.ಆ ಸಮಯದಲ್ಲಿ ಬೋರ್‌ವೆಲ್ ತೆಗೆದು ಅಪ್ಲಿಕೇಷನ್ ಕೊಟ್ಟು 2-2 ವರ್ಷವಾದರೂ ಸಹ ಬೇರೆ ಬೇರೆ ಕಾರಣಕ್ಕೋಸ್ಕರ ವಿದ್ಯುತ್ ಇಲಾಖೆಯವರು ವಿದ್ಯುತ್ ಸಂಪರ್ಕ ಕೊಡುವುದಕ್ಕಾಗಲಿಲ್ಲ. ಆಗ ಲೈನ್‌ಮನ್‌ಗೆ ತಿಂಗಳಿಗೊಂದುಸಾರಿ ಮಾಮೂಲಿ ಕೊಡಬೇಕಾಗಿತ್ತು ಕೆ.ಇ.ಬಿ. ಅಧಿಕಾರಿಗಳ ಜೊತೆ ಅವರೇ ಹೊಂದಾಣಿಕೆ ಮಾಡಿಕೊಂಡು ಶಾಮೀಲಾಗಿ, ಅವನು ಕಾನೂನುಬಾಹಿರವಾಗಿ ಕರೆಂಟ್ ತೆಗೆದುಕೊಂಡಿದ್ದಾನೆ. ಬೆಳೆ ಬೆಳೆಯುತ್ತಾ ಇದ್ದಾನೆ. ಈಗ ಸದನದಲ್ಲಿ, ಸನ್ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಚರ್ಚೆಯಾಗುವಂಥ ಕಾಲದಲ್ಲಿ 14-2-97 ರಂದು ತಮ್ಮ ಕೊಠಡಿಯಲ್ಲಿ ಚರ್ಚೆಯಾಗುವ ಕಾಲದಲ್ಲಿ ಯಾವ ಕಾರಣಕ್ಕೂ ಮ್ಯಾಕ್ಸಿಮಮ್ ಅಂದರೆ ಈ ರೀತಿ ಕನೆಕ್ಷನ್ ತೆಗೆದುಕೊಂಡಿರುವಂಥ ಅನಧಿಕೃತ ಐ.ಪಿ.ಸೆಟ್‌ಗಳಿಗೆ 5 ಸಾವಿರ ರೂಪಾಯಿಗಿಂತ ದಂಡ ಜಾಸ್ತಿಯಾಗುವುದಿಲ್ಲವೆಂದು ಅಧ್ಯಕ್ಷರು ಎದುರಿಗೆ ಹೇಳಿದಿರಿ. ಆದರೆ ಅದನ್ನು ಈಗ ಅವನಿಂದ 13 ಸಾವಿರ ವಸೂಲಿ ಮಾಡುತ್ತಿದ್ದೀರಲ್ಲಾ ಇದು ನಿಮಗೆ ಶೋಭೆ ತರುವಂಥ ಸಂಗತಿಯೇ? ಅಂದರೆ, ಅವನು ಉಳಿಯಬೇಕೆಂದು ನಿಮಗೆ ಇಷ್ಟ ಇಲ್ಲವೇ?

ಆ ಕೆ.ಇ.ಬಿ. ಇಲಾಖೆಯಲ್ಲಿ ರೈತರ ಮನೆಯಿಂದ ಬಂದವರು ಯಾರೂ ಇಲ್ಲವೇ? ಇವರೆಲ್ಲಾ ಹೊರಗಡೆಯಿಂದ ಬಂದವರಾಗಿದ್ದರೆ ರೈತರ ಕಷ್ಟ ಗೊತ್ತಿಲ್ಲದ್ದವರನ್ನೆಲ್ಲಾ ಓಡಿಸಿ, ರೈತರ ಮಕ್ಕಳನ್ನು ತಂದು ಅಲ್ಲ ಕೊಡಿಸಿ. ನೀವು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ವಿದ್ಯುತ್ ಕೊಡುತ್ತೀರಿ. ಇವತ್ತು ರಾಜ್ಯದಲ್ಲಿ ರೈತರು ಎಷ್ಟು ಸಾವಿರ ಪಂಪುಸೆಟ್ಟು ಹಾಕಿಕೊಂಡು ವಿದ್ಯುತ್‌ಗಾಗಿ ಒಂದೂವರೆ ಎರಡು ವರ್ಷದಿಂದ ಕಾಯುತ್ತಿದ್ದಾರೆ ಅವನೇ ಕಂಬ ತರಬೇಕಂತೆ ಅವನೇ ವೈರ್ ತರಬೇಕಂತೆ ಯಾವ ಜವೈರು, ನಿಮ್ಮ ಕೆ.ಇ.ಬಿ. ಇಲಾಖೆಯವರು ಮಾರಿರುವ ವೈರೇ. ಅದನ್ನು ಕೊಂಡುಕೊಂಡು ತಂದು, 10-13 ಸಾವಿರ ದಂಡ ಕೊಟ್ಟು ತರಬೇಕೇ? ಏಕೆ, ನಾಳೆಯಿಂದ ನಾವು ಕರೆ ಕೊಡುತ್ತೇವೆ. ಪಂಪ್‌ಸೆಟ್ಟುಗಳು ನಡೆಯುವುದು ಬೇಡ, ಬೀಗ ಹಾಕಿಸಿ, ನೀವು ಆ ಇಲಾಖೆಯನ್ನು ಲಾಭದಲ್ಲಿ ನಡೆಸುತ್ತೀರಾ? ಆ ರೈತ ಬೆಲೆ ಬೆಳೆಯುವುದನ್ನು ಬಿಟ್ಟುಬಿಡುತ್ತಾನೆ. ಅವನಿಗೆ ಉದ್ಯೋಗ ಕೊಡುವಂಥ ಶಕ್ತಿ ನಿಮಗೆ ಅಥವಾ ನಮಗೆ ಇರುವುದಕ್ಕೆ ಸಾಧ್ಯವೇ? ಅವನು ನೆಮ್ಮದಿಯಿಂದ ಕೊಡುವಂಥ ಶಕ್ತಿ ನಿಮಗೆ ಅಥವಾ ನಮಗೆ ಇರುವುದಕ್ಕೆ ಸಾಧ್ಯವೇ? ಅವನು ನೆಮ್ಮದಿಯಿಂದ, ನಾವು, ನೀವು ಇಲ್ಲಿ ಮಾಡಬಾರದನ್ನು ಮಾಡಿಕೊಂಡು ಕುಳಿತಿದ್ದರೂ ಸಹ, ಅವನು ಎರಡು ಹೊತ್ತಿನ ಗಂಜಿ ಬೇಯಿಸಿಕೊಂಡು, ಹಣ್ಣುಹಂಪಲು, ತರಕಾರಿಬೆಳೆದು ಬದುಕುತ್ತಾ ಇದ್ದಾನೆ. ಅವನ ಜೀವನಕ್ಕೆ ಕಲ್ಲು ಹಾಕಿ ಚೆಲ್ಲಾಟ ಮಾಡುವುದಕ್ಕೆ ನೀವು ಹೊರಟಿದ್ದೀರಿ. ಇದರಿಂದ ಜನ ಇನ್ನೇನು ಮಾಡುತ್ತಾರೆ? ಜನ ಇದನ್ನು ಸಹಿಸುತ್ತಾರೆಯೇ? ಹಿಂದೆ ಹೊಸ ಸಂಪರ್ಕ ಕೊಡುವುದಕ್ಕೆ ಮನೆಗಳಿಗೆ ಡಿಫಾಜಿಟ್ 1,500 ರೂಪಾಯಿ ಇತ್ತು. ಈಗ ಅವನು ಏಳೂವರೆ ಸಾವಿರರ ರೂಪಾಯಿ ಡಿಫಾಜಿಟ್ ಕಟ್ಟಬೇಕು. ಮಿಲ್ ಮಾಲೀಕರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ನಮ್ಮ ಹತ್ತಿರ ಬಂದರು. ಯಾರು ಅವರು? ಗ್ರಾಮೀಣ ಪ್ರದೇಶದ ರೈತನ ಭತ್ತವನ್ನು ಹಲ್ ಮಾಡುವವನು. ಅಥವಾ ನಿಮ್ಮಂಥ ನಮ್ಮಂಥವರಿಗೆ ರೈತ ಬೆಳೆದಂಥ ಭತ್ತವನ್ನು ಅಕ್ಕಿ ಮಾಡಿ, ಎರಡು ಹೊತ್ತಿಗೆ ಊಟ ಮಾಡುವುದಕ್ಕೆ ಕೊಡುವವನು. ಒಂದು ಕ್ವಿಂಟಾಲ್ ಅಕ್ಕಿ ಮಾಡುವುದಕ್ಕೆ 60 ರೂಪಾಯಿ ತೆಗೆದುಕೊಳ್ಳುತ್ತಾನೆ. ಈಗೇನಾಗಿದೆ? ಇವತ್ತು ಮೊದಲು ಎಲ್.ಟಿ.ಸಪ್ಲೈ 99 ಹೆಚ್.ಪಿ.ವರೆಗೆ ಇರುತ್ತಾ ಇತ್ತು. ಆಗ ಫಿಕ್ಸೆಡ್ ಚಾರ್ಜ್ ಒಂದು ಹೆಚ್.ಪಿ.ಗೆ. 25 ರೂಪಾಯಿ ಇತ್ತು. ಈಗ 57 ರೂಪಾಯಿ ಮಾಡಿದ್ದೀರಿ. 115 ಪರ್ಸೆಂಟ್ ಏರಿಕೆ. ಒಂದು ಯೂನಿಟ್‌ಗೆ ಒಂದು ರೂಪಾಯಿ 95 ಪೈಸೆ ಇತ್ತು. ಈಗ 2 ರೂಪಾಯಿ 45ಪೈಸೆ ಮಾಡಿದ್ದೀರಿ. ಪವರ್ ರೇಟ್ 25 ಪರ್ಸೆಂಟ್ ಏರಿಕೆ. ಡಿಪಾಸಿಟ್ 115 ಪರ್ಸೆಂಟ್ ಏರಿಕೆ. ಎಲ್.ಟಿ ಸಪ್ಲೈ 99 ಹೆಚ್. ಪಿ.ವರೆಗೆ ಇತ್ತು. ಈಗ ಎಲ್. ಟಿ ಸಪ್ಲೈ ಲಿಮಿಟ್‌ನ್ನು

67 ಹೆಚ್.ಪಿ.ಗೆ ಮಾಡಿದ್ದೀರಿ. ಈಗ ಎಲ್‌ಟಿ ಸಪ್ಲೈನ್ನು ಹೆಚ್.ಪಿ.ಗೆ ಕನ್‌ವರ್ಟ್ ಮಾಡಿದರೆ, 99 ಹೆಚ್.ಪಿ.ವರೆಗೆ ಫಿಕ್ಸೆಡ್ ಚಾರ್ಜ್ 57 ರೂಪಾಯಿ ಇದ್ದುದನ್ನು 147 ರೂಪಾಯಿ ಮಾಡಿದ್ದೀರಿ. ಎಲ್.ಟಿ.ಗೆ ಪರ್ ಹೆಚ್.ಪಿ. 500 ರೂಪಾಯಿ ಡಿಪಾಸಿಟ್‌ಇದ್ದರೆ ಹೆಚ್.ಪಿ.ಗೆ. 1500 ರೂಪಾಯಿ ಮಾಡಿದ್ದೀರಿ. ಹೆಚ್. ಪಿ. ಲೈನ್ ತೆಗೆದುಕೊಂಡ ತಕ್ಷಣ ಟ್ರಾನ್ಸ್‌ಫಾರ್ಮರ್ ತರಬೇಕು, ಅವನೇ ನಿರ್ವಹಣೆ ಮಾಡಬೇಕು. ನಾನು ಮಿಲ್ ಓನರ್ ಬಗ್ಗೆ ಮಾತನಾಡುತ್ತಾ ಇಲ್ಲ. ಕಾರ್ಖಾನೆ ಮಾಲೀಕನ ಬಗ್ಗೆ ಮಾತನಾಡುತ್ತಾ ಇಲ್ಲ. ಆ ಮಿಲ್ಲಿನಲ್ಲಿ ರೈತರು ಬೆಳೆದಂಥ ಭತ್ತ ನಾವು ಮತ್ತು ನೀವೂ ಊಟ ಮಾಡುವಂಥ ಅಕ್ಕಿ ಆಗುತ್ತದೆ. ಇದರಿಂದ ಮಾರ್ಕೆಟ್‌ನಲ್ಲಿರುವಂಥ ಅಕ್ಕಿ ಬೆಲೆ ಇನ್ನೂ 70-80 ರೂಪಾಯಿ ಜಾಸ್ತಿಯಾಗುತ್ತದೆ. ನೀವೇನೋ ಉಪಕಾರ ಮಾಡಿದ್ದೇವೆ ಎಂದು ತಿಳಿದುಕೊಳ್ಳಬೇಡಿ. ಆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಎಲ್ಲದಕ್ಕೂ ಇದೇ ಅಪ್ಲೈ ಮಾಡಿರುವುದರಿಂದ ಯಾರು ನಿರುದ್ಯೋಗಿ ಯುವಕರು ಸಾಲ ಮಾಡಿ ಕೆ.ಎಸ್.ಎಫ್.ಸಿ.ನಲ್ಲಿ ಸಾಲ ಮಾಡಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ನಡೆಸುತ್ತಿದ್ದಾರೆ, ಈ ರೀತಿ ಲಕ್ಷಾಂತರ ರೂಪಾಯಿಗಳ ಟ್ರಾನ್ಸ್‌ಫಾರ್ಮರ್ ತಂದು 4-5 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ, ಅವನು ನಿರ್ವಹಣೆ ಮಾಡುವುದಕ್ಕಾಗದೆ ಕಾರ್ಖಾನೆ ಬಾಗಿಲು ಹಾಕುತ್ತಾನೆ. ಅವನೂ ಬೀದಿ ಪಾಲಾಗುತ್ತಾನೆ. ಅಲ್ಲಿ ದುಡಿಯತಕ್ಕಂಥ ನೂರಾರು ಜನ ಕಾರ್ಮಿಕರೂ ಬೀದಿ ಪಾಲಾಗುತ್ತಾರೆ.ಇದನ್ನು ನೀವು ಯೋಚನೆ ಮಾಡಬೇಕಲ್ಲ. ನಿಮಗೆ ಪುರೆಸೊತ್ತು ಇಲ್ಲದೇ ಇದ್ದರೆ ನಾವೇನು ಮಾಡೋಣ.

ಶ್ರೀ ಶ್ರೀರಂಗದೇವರಾಯಲು : ಗಂಗಾವತಿಯಲ್ಲಿ ಎಷ್ಟೋ ಮಿಲ್ಸ್ ಇವೆ. ಬಹುತೇಕ ಅವೆಲ್ಲವೂ ಈಗ ಮಾರಾಟಕ್ಕಿವೆ. ಈ ರೇಟ್‌ನಿಂದ ನಮ್ಮಲ್ಲಿ ರೈತರಿಗೆ ಬಹಳ ಕಷ್ಟವಾಗುತ್ತದೆ. ಮಿಲ್ಸ್ ಎಲ್ಲವನ್ನೂ ಬಂದ್ ಮಾಡುವ ಪರಿಸ್ಥಿತಿ ಬರುತ್ತದೆ. ಸಾಧಾರಣವಾಗಿ 70-80 ಮಿಲ್ಲುಗಳು ಮಾರುವ ಹಂತದಲ್ಲಿವೆ. ಅದರ ಪೈಕಿ 20-30 ಹಿಂದೆಯೇ ಮಾರಾಟಕ್ಕೆ ಇಟ್ಟಿದ್ದಾರೆ. ನೀವು ಈ ರೇಟ್ ಹಾಕಿದರೆ, ಎಲ್ಲಾ ಮಿಲ್ಲುಗಳೂ ಮಾರಾಟವಾಗುತ್ತವೆ ಎಂಬುದು ನನ್ನ ಭಾವನೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ತೀವ್ರ ಗಮನಹರಿಸಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳು ಇದ್ದಾಗ 500 ಮೆಗಾವ್ಯಾಟ್ ವಿದ್ಯುತ್ ಕಳ್ಳತನವಾಗುತ್ತದೆ ಎಂದು ಅವರು ಹೇಳಿದ್ದನ್ನು ನಿಮಗೆ ರೆಫರ್ ಮಾಡಿದೆ. ಏನು ನಡೆಯುತ್ತಾ ಇದೆ ಎಂಬುದು ತಮಗೂ ಗೊತ್ತಿದೆ. ಇಲ್ಲಿ ಹೆಚ್.ಎನ್.ನಾಗೇಗೌಡರು ಇಲ್ಲ. ಅವರು ಏಪ್ರಿಲ್ 21 ರಂದು ಮಂಡ್ಯದಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು : ಹೆಚ್. ಎನ್. ನಾಗೇಗೌಡರು ಅಲ್ಲ, ಕೆ. ಎನ್. ನಾಗೇಗೌಡರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೌದು ಕೆ. ಎನ್. ನಾಗೇಗೌಡರು, ಸ್ವಲ್ಪ ಈ ಗೌಡರದ್ದು ನನಗೆ ಕನ್‌ಫ್ಯೂಷನ್ ಆಗುತ್ತದೆ.

ಅಧ್ಯಕ್ಷರು : ನಿಮಗೆ ಕನ್‌ಫ್ಯೂಷನ ಆದರೆ, ನಾನು ಕ್ಲಾರಿಫೈ ಮಾಡುತ್ತೇವೆ ಬಿಡಿ.

ಶ್ರೀ ಎಂ. ಪಿ. ಪ್ರಕಾಶ್ : ಗೌಡರ ವಿಷಯ ಬಂದಾಗ ನಿಮಗೆ ಬಹಳ ಕನ್‌ಫ್ಯೂಷನ್ ಆಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಗೌಡರ ಗದ್ದಲದಲ್ಲಿ ಜನಕ್ಕಾದರೂ ಒಳ್ಳೆಯದಾಗಿದ್ದರೆ ನಾನು ಸಂತೋಷಪಡುತ್ತಿದ್ದೆ. ನಾನೇನೂ ಇದರಲ್ಲಿ ದುಃಖಪಡುವ ಪ್ರಶ್ನೆ ಇಲ್ಲ. ಪ್ರಶ್ನೆ ಏನಾಗಿದೆ ಎಂದರೆ, ನಿಜವಾದಂಥ ನಮ್ಮ ಗೌಡರುಗಳನ್ನು ನಂಬದೇ ಯಾರು ಯಾರೋ ಗೌಡರುಗಳನ್ನು ನಂಬಿಕೊಂಡು ಜನ ಹೀಗಾಗಿದ್ದಾರಲ್ಲಾ ಎಂದು ದುಃಖಪಡುವಂಥ ಪರಿಸ್ಥಿತಿ ಬಂದಿದೆ. ನಮ್ಮ ಕಡೆ ರೈತರನ್ನೂ ಗೌಡರು ಎಂದು ಕರೆಯುತ್ತಾರೆ. ನಾನು ಜನಾಂಗದಿಂದ ಹೇಳಲಿಲ್ಲ. ಈ ರಾಮಗುಂಡಂನಿಂದ ರಾಜ್ಯಕ್ಕೆ ಹರಿಯಬೇಕಾದ ವಿದ್ಯುತ್ ಆಂಧ್ರದಲ್ಲಿ ಕಳುವಾಗುತ್ತಿದ್ದು, ಈ ವಿದ್ಯುತ್ ಸರಬರಾಜು ಮಾರ್ಗವನ್ನು ಜಡ್ ವಲಯ ಎಂದು ಪರಿಗಣಿಸಬೇಕು. ಎಂದು ಕೆ.ಎನ್. ನಾಗೇಗೌಡರು ಏಪ್ರಿಲ್ 21 ರಂದು ಮಂಡ್ಯದಲ್ಲಿ ತಿಳಿಸಿ ರಾಜ್ಯಕ್ಕೆ ಬರಬೇಕಾದಂಥ 11 ಲಕ್ಷ ಯೂನಿಟ್‌ನಲ್ಲಿ ಕೇವಲ 7 ರಿಂದ 8 ಲಕ್ಷ ಯೂನಿಟ್ ಮಾತ್ರ ಬರುತ್ತಾಇದೆ. 4 ರಿಂದ 5 ಲಕ್ಷ ಯೂನಿಟ್ ಕಳ್ಳತನವಾಗುತ್ತಿದೆ ಎಂದು ಸನ್ಮಾನ್ಯ ಕೆ. ಎನ್. ನಾಗೇಗೌಡರು ಹೇಳಿದ್ದಾರೆ. ಇದನ್ನು ನಾನು ಹೇಳುತ್ತಾ ಇಲ್ಲ. ಅಂದರೆ, ಇವತ್ತು ನೀವು ಹೊರ ರಾಜ್ಯದಿಂದ ವಿದ್ಯುತ್ ತರುವುದು ಇರಬಹುದು. ನಮ್ಮದ್ದೇ ಉತ್ಪನ್ನವಾಗುವತಕ್ಕಂಥ ವಿದ್ಯುತ್‌ನ್ನು ತೆಗೆದುಕೊಳ್ಳುವಂಥ ಸಂದರ್ಭ ಇರಬಹುದು. ಟ್ರಾನ್ಸ್‌ಮಿಷನ್ ಲಾಸ್ ಎಂಬ ನೆಪದಲ್ಲಿ ಈ ರೀತಿ ಲಕ್ಷಾಂತರ ಯೂನಿಟ್ ಕಳ್ಳತನವಾಗುತ್ತಿದೆ. ನಮಗೇನುಬೇಕು, ಇಷ್ಟೆಲ್ಲಾ ಚರ್ಚೆ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಕೆಲವುಕಡೆ ಕಳ್ಳತನದ ವಿದ್ಯುತ್ ಸರಬರಾಜನ್ನು ಹಿಡಿದಿದ್ದೀರಿ. ನಾನು ನಿಮ್ಮನ್ನು ಕೇಳುತ್ತೇನೆ. ಇಷ್ಟೆಲ್ಲಾ ನಡೆಯುತ್ತಾ ಇದೆ. ಪತ್ರಿಕೆಯಲ್ಲಿ ಬರುತ್ತಾ ಇದೆ. ಕೆ.ಇ.ಬಿ. ಅಧಿಕಾರಿಗಳು ಶಾಮೀಲಾಗಿ ಮೀಟರುಗಳನ್ನು ತೆಗೆಸಿ, ಕಳ್ಳತನದಲ್ಲಿ ಕರೆಂಟ್ ಕೊಡುತ್ತಿದ್ದರು, ಅಂಥ ಎಷ್ಟು ಅಧಿಕಾರಿಗಳನ್ನು ಹಿಡಿದಿದ್ದೀರಿ? ಅವರು ಜೈಲಿಗೆ ಹೋಗಿದ್ದಾರೆಯೇ? ಕಾನೂನಿನಲ್ಲಿ ನಿಮಗೆ ಅವಕಾಶ ಇಲ್ಲ. ಕಳ್ಳತನ ಮಾಡುವವರನ್ನು ರಕ್ಷಣೆ ಮಾಡುವುದೇ ನಿಮ್ಮ ಕಾನೂನು. ಅಥವಾ ಸಸ್ಪೆಂಡ್ ಆಗಿದ್ದಾರೆಯೇ? ಎಷ್ಟು ಜನ ಸಸ್ಪೆಂಡ್ ಆಗಿದ್ದಾರೆ? ಕಾರ್ಖಾನೆ ಬೀಗ ಹಾಕಿದ್ದೀರಾ? ಒಂದೆರಡು ಕಾರ್ಖಾನೆ

ಬೀಗ ಹಾಕಿ, ಅವನನ್ನು ಒಳಗಡೆ ಹಾಕಿ, ನೀವು ಕೆ.ಇ.ಬಿ. ಅಧಿಕಾರಿಯೊಂದಿಗೆ ಶಾಮೀಲಾಗಿ ಲೂಟಿ ಮಾಡುತ್ತಿದ್ದೀಯಾ ಎಂದು ಒಳಗೆ ಹಾಕಿದ್ದೀರಾ? ಇಲ್ಲಿ ಅಂದರೆ ನಿಮ್ಮ ಸರ್ಕಾರದಲ್ಲಿ ದುಡಿಯುವಂಥ ಜನ ಹೊಟ್ಟೆಗಿಲ್ಲದೆ ಸಾಯುಬೇಕು. ಈ ದುಡಿಯುವಂತಹ ಜನರಿಂದ ಕಿತ್ತುಕೊಂಡವರು ಕುಬೇರರಾಗಿ ಮೆರೆಯಬೇಕು, ಇದಾ ನಿಮ್ಮ ನೀತಿ? ಸಂವಿಧಾನವನ್ನು ಕರ್ನಾಟಕದಲ್ಲಿ ಆ ರೀತಿ ಮಾರ್ಪಾಟು ಮಾಡಿಕೊಂಡಿದ್ದೀರಾ? ದಯಮಾಡಿ ಇದರ ಬಗ್ಗೆ ಹೇಳಬೇಕಾಗುತ್ತದೆ. ಯೋಚನೆ ಮಾಡಬೇಕಾಗುತ್ತದೆ. ಸರಿಪಡಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಸ್ವಾಮಿ, ವಿದ್ಯುತ್ ಅಧ್ಯಯನಕ್ಕಾಗಿ ಎಂದು ಎ.ಎಸ್.ಸಿ.ಐ ಎಂದು ರಾಜ್ಯದಲ್ಲಿ ನೇಮಕವಾಗಿದೆ ವಿದ್ಯುತ್ ಕ್ಷೇತ್ರದ ಸುಧಾರಣೆ ಕುರಿತು ಅಧ್ಯಯನಕ್ಕೆ ಹಾಗೂ ಶಿಫಾರಸ್ ಮಾಡಿಲಿಕ್ಕೆ ಅಂತರಾಷ್ಟ್ರೀಯವಾಗಿ ಟೆಂಡರ್ ಕರೆದು ಆಂಧ್ರ ಪ್ರದೇಶದ ಆಡಳಿತ ಸಿಬ್ಬಂದಿ ಕಾಲೇಜನ್ನು ನೇಮಕ ಮಾಡಲಾಗಿದೆ ಅಂತರ್ ರಾಷ್ಟ್ರೀಯಖ್ಯಾತಿಯ ತಜ್ಞರು ಬೆಂಗಳೂರಿನಲ್ಲಿ ಇದ್ದಾಗ, ಈ ಸ್ವತಂತ್ರ ಸಂಸ್ಥೆಗೆ ಈ ರೀತಿ ಕೆಲಸವನ್ನು ವಹಿಸುವುದನ್ನು ಬಿಟ್ಟು, ಈ ಐ .ಎಸ್. ಅಧಿಕಾರಿಗಳು ಇರುವಂಥ ಈ ಸಂಸ್ಥೆಗೆ ಈ ಜವಾಬ್ದಾರಿಯನ್ನು ಏತಕ್ಕೋಸ್ಕರ ಕೊಡುವಂಥ ಪ್ರಯತ್ನ ಮಾಡುತ್ತಿದ್ದೀರಿ? ಈ ತಾಪಮಾನ ಸಂಸ್ಥೆಯು ವಿಜ್ಞಾನಿಗಳು ನಮ್ಮಲ್ಲಿ ಇದ್ದಾರೆ, ಸೆಂಟ್ರಲ್ ಪವರ್ ರೀಸರ್ಚ್ ಇನ್ಸ್ಟಿಟ್ಯೂಟ್‌ನವರು ನಮ್ಮಲ್ಲೇ ಇದ್ದಾರೆ. ಅಮೂಲ್ಯ ರೆಡ್ಡಿ ಅಂಥ ಪ್ರೊಫೆಸರ್ ನಮ್ಮಲ್ಲಿ ಇದ್ದಾರೆ. ಇವರ ಸೇವೆಯನ್ನು ಉಪಯೋಗ ಮಾಡಿಕೊಳ್ಳುವುದನ್ನು ಬಿಟ್ಟು ಈ ರೀತಿ ಕೊಟ್ಯಾಂತರ ರೂಪಾಯಿ ಖರ್ಚು ಮಾಡಿ ಅಂತರ್ ರಾಷ್ಟ್ರೀಯ ಟೆಂಡರ್ ಕರೆದು ಅವರು ಯಾರಿಗೋ ಈ ಜವಾಬ್ದಾರಿಯುನ್ನು ಕೊಡತಕ್ಕಂಥ ಪ್ರಯತ್ನ ನೀವು ಏಕೆ ಮಾಡುತ್ತಿದ್ದೀರೆಂಬುದು ನಮಗೆ ಅರ್ಥವಾಗುತ್ತಿಲ್ಲ. ಮತ್ತೆ ಈ ಒಂದು ಪರಿಸ್ಥಿತಿಗೆ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ಗರಿಷ್ಠ ಉತ್ಪಾದನೆ ಮಾಡುವುದಕ್ಕೆ ವಿಶೇಷ ಗಮನ ಕೊಡದೇ ಇರುವುದು, ನೆರೆ ರಾಜ್ಯಗಳಿಂದ ನ್ಯಾಷನಲ್ ಗ್ರಿಡ್‌ನಿಂದ ಖರೀದಿಸುವಂಥ ವಿದ್ಯುತ್ ಮಧ್ಯದಲ್ಲೇ ಕಳ್ಳತನ ಆಗುತ್ತಿರುವುದನ್ನು ತಪ್ಪಿಸುವುದರ ಬಗ್ಗೆ ಕಳ್ಳತನ ಮಾರಾಟ ನಿಲ್ಲಿಸುವುದರ ಬಗ್ಗೆ ವಿಶೇಷ ಪ್ರಯತ್ನ ಮಾಡದೇ ಇರುವಂತದ್ದು ರೈತರಿಗೆ ಹೆಚ್ಚು ವಿದ್ಯುತ್ ಸರಬರಾಜು ಮಾಡುತ್ತಿದ್ದೇವೆಂದು ನಿಮಗೆ ನೀವು ಸಮಾಧಾನ ಮಾಡಿಕೊಂಡು, ಈ ಟ್ರಾನ್ಸ್‌ಮಿಷನ್ ಲಾಸ್‌ಎಂದು ತೋರಿಸಿಕೊಂಡು ಲೂಟಿ ಮಾಡುವುದಕ್ಕೆ ನೀವು ಅವಕಾಶ ಕೊಟ್ಟು ಅದನ್ನು ಸರಿಪಡಿಸುವಂಥ ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದರೆ ಅನುಕೂಲ ಆಗಬಹುದು. ಮತ್ತು ದೇಶಿಯ ಹಾಗೂ ವಿದೇಶಿಯ ಸಂಸ್ಥೆಗಳಿಗೆ ಒಂದು ಕೆಂಪು ರತ್ನ ಕಂಬಳಿಯನ್ನು ಹಾಸಿ 19 ಸಂಸ್ಥೆಗಳ ಒಪ್ಪಂದ ನೀವು ಮಾಡಿಕೊಂಡಿದ್ದೀರಿ ಸ್ವಾಮಿ. ಅನೇಕ ವರ್ಷಗಳು

ಕಳೆದು ಹೋಯಿತು. ಇದುವರೆಗೆ ಒಬ್ಬ ಒಂದು ವಿದ್ಯುತ್ ಉತ್ಪಾದನೆ ಮಾಡುವಂಥ ಒಂದು ಪ್ರಾಮಾಣಿಕ ಪ್ರಯತ್ನ ಇದುವರೆಗೂ ಆಗಲಿಲ್ಲ. ಆಕೆ.ಪಿ.ಸಿ ಯವರು ತುಂಬಾ ಪ್ರಾಮಾಣಿಕವಾಗಿ ಒಂದಷ್ಟು ಒಳ್ಳೆಯ ಕೆಲಸ ಮಾಡಿ, ಅವರು ಇಲ್ಲದೇ ಇದ್ದರೆ ಇಷ್ಟು ಹೊತ್ತಿಗೆ ಈ ವ್ಯವಸ್ಥೆನೇ ಕುಸಿದು ಬಿದ್ದು ಹೋಗುತ್ತಿತ್ತು. ಏನೋ ಒಂದು ವ್ಯವಸ್ಥಿತವಾಗಿಈ ಕೆ.ಪಿ.ಸಿ.ಯನ್ನು ಮುಚ್ಚುವಂಥ ಪ್ರಯತ್ನ, ವ್ಯವಸ್ಥಿತವಾದಂಥ ಸಂಚು ಸರ್ಕಾರವೇ ಮಾಡುತ್ತಿದೆಯೇನೋ ಎನ್ನುವ ಅನುಮಾನ ಇವತ್ತು ನಮಗೆ ಬರುತ್ತಿದೆ. ಈ ಕೆ.ಪಿ.ಸಿ.ಯನ್ನು ಎಲ್ಲಾ ಇನ್‌ವೆಸ್ಟಿಗೇಷನ್ ಮಾಡಿ, ಆಲಮಟ್ಟಿ ವಿದ್ಯುತ್ ಯೋಜನೆ ಏನಿತ್ತು? ಅದನ್ನು ಅವರಿಗೆ ವಹಿಸಿಕೊಡಬಹುದಾಗಿತ್ತು. ಸ್ವಾಮಿ ಇವತ್ತು ನೊಂದು ಒಂದು ಮಾತನ್ನು ಹೇಳುತ್ತೇನೆ, ನಮ್ಮ ರಾಜ್ಯದ ಐ.ಎ.ಎಸ್. ಅಧಿಕಾರಿಯೊಬ್ಬರ ಒತ್ತಾಯಕ್ಕೆ ತಾವು ಮಣಿದು ಈ ಟ್ಯಾಫ್ಯೊ ಸಂಸ್ಥೆಗೆ ಕೊಡುವಂಥ ಪ್ರಯತ್ನ ಮಾಡಿದ್ದೀರಿ. ಇದು ಎಲ್ಲಾ ಜಗಜ್ಜಾಹಿರಾಗಿರತಕ್ಕಂಥ ಸಂಗತಿ. ಅಲ್ಲಿ ಆ ಕಂಪನಿನೇ ಇಲ್ಲ. ಎನ್ನುವಂತಾದ್ದು ಇಲ್ಲಿ ಕುಳಿತ್ತಿರುವ ನಿಮ್ಮೆಲ್ಲರಿಗೂ ಗೊತ್ತಿದೆ. ಈಗಲಾದರೂ ದಯಮಾಡಿ ಇದನ್ನು ಆ ಕೆ.ಪಿ.ಸಿ.ಗೆ ವಹಿಸಿಕೊಡಿ. ಕಡಿಮೆ ವೆಚ್ಚದಲ್ಲಿ ವಿದ್ಯುತ್ ಉತ್ಪನ್ನ ಆಗುತ್ತದೆ. ಈ ಆಲಮಟ್ಟಿ ಬಗ್ಗೆ ಟೈಮ್ಲಿ ಅದರ ಕಡೆ ಗಮನ ಕೊಡದೆ. ಹೊಸ ಸಮಸ್ಯೆಯನ್ನು ಉದ್ಭವ ಮಾಡಿ ಇಟ್ಟುಕೊಂಡಿದ್ದೀರಿ. ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು ಈ 18 ಸಂಸ್ಥೆಗಳಿಗೆ ನಾವು ಏನು ಒಪ್ಪಂದ ಮಾಡಿಕೊಂಡಿದ್ದೇವೆ? ಇನ್ನೊಂದು ತಿಂಗಳಲ್ಲಿ ಇದನ್ನು ಕಾರ್ಯರೂಪಕ್ಕೆ ತರದೇ ಇದ್ದರೆ ಅದೆಲ್ಲವನ್ನೂ ರದ್ದುಮಾಡುತ್ತೇವೆಂದು ಇದೇ ಹೌಸ್‌ನಲ್ಲಿ ಹೇಳಿದ್ದು ಬೇರೆ ಕಡೆಯಲ್ಲಿ ಹೇಳಿದ್ದು ಪತ್ರಿಕೆಗಳಲ್ಲಿ ಬಂತು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿರಿ? ಏಕೆ ಅದು ಸರಿಹೋಗಲಿಲ್ಲ? ಸನ್ಮಾನ್ಯ ಅಧ್ಯಕ್ಷರೆ, ಇದಕ್ಕೆ ಯಾವ ರೀತಿಯ ಒಂದು ಆದ್ಯತೆ ಕೊಟ್ಟು ಈ ಇಲಾಖೆಯನ್ನು ಸರಿಪಡಿಸುವಂಥ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರ ಮಾಡಬೇಕಾಗಿತ್ತೋ ಆ ಕೆಲಸ ಇವರು ಮಾಡುತ್ತಿಲ್ಲ. ಅದಕ್ಕಾಗಿ ನಾನು ಈ ಸರ್ಕಾರವನ್ನು ಒತ್ತಾಯ ಮಾಡುವಂಥಾದ್ದು, ಈ ರಾಜ್ಯದ ಜನ ಸ್ವಲ್ಪ ನೆಮ್ಮದಿಯಿಂದ ನಿಟ್ಟುಸಿರು ಬಿಡಬೇಕು, ಅವರು ಗೌರವದಿಂದ ಬದುಕಬೇಕು ಎನ್ನುವ ಕಳಕಳಿ ನಿಮಗೆ ಏನಾದರೂ ಇದ್ದರೆ ದಯಮಾಡಿ ಈ 300 ಕೋಟಿ ರೂಪಾಯಿ ಹೊಸದಾಗಿ ವಿದ್ಯುತ್ ದರವನ್ನು ಏರಿಕೆ ಮಾಡುವಂಥ ಒಂದು ಹೊಸ ಪ್ರಯತ್ನ ಏನು ಮಾಡಿ ನೋಡಿಫಿಕೇಷನ್ ಹೊರಡಿಸಿದ್ದೀರಿ ಅದನ್ನು ಸಂಪೂರ್ಣ ವಾಪಸ್ ತೆಗೆದುಕೊಳ್ಳಬೇಕು ಎನ್ನುವಂಥ ಒತ್ತಾಯ ಮಾಡುತ್ತೇನೆ. ಮತ್ತೆ ಸದನದ ಒಂದು ಸಮಿತಿಯನ್ನು ಮಾಡಿ, ಯಾವ ಯಾವ ಮೆಟೀರಿಯಲ್ಸ್‌ನ್ನು ಹೇಗೆ ಪರ್ಚೇಸ್ ಮಾಡುತ್ತಿದ್ದೀರಿ? ಅದರ ಎಷ್ಟು ಉಪಯೋಗ ಆಗುತ್ತಿದೆ? ಯಾರ

ಕ್ವಾಲಿಟಿದು ನೀವು ಪರ್ಚೇಸ್ ಮಾಡುತ್ತಿದ್ದೀರಿ? ಇದರ ವಿವರವನ್ನು ಎಲ್ಲಾ ನೋಡಿ ಒಂದು ಸರಿಪಡಿಸತಕ್ಕಂಥ ಪ್ರಾಮಾಣಿಕ ದೃಷ್ಟಿಯಿಂದ ಸದನದ ಸಮಿತಿ ಮಾಡಿ ಎಕ್ಸ್‌ಪರ್ಟ್ಸ್‌ನ್ನು ಸಹಾಯಕ್ಕೆ ಕೊಡಬೇಕೆನ್ನುವಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಇಲ್ಲವೆಂದರೆ, ನಾನು ಪ್ರಾರಂಭದಲ್ಲೇ ಹೇಳಿದಂತೆ ನಾವಂತೂ ಬಿ.ಜೆ.ಪಿ. ಶಾಸಕರು ತೀರ್ಮಾನ ಮಾಡಿ ಬಂದಿದ್ದೇವೆ, ಏಕೆಂದರೆ, ಒಂದು ತರಹ ಕೂಗಿ, ಕೂಗಿ ಈ ಸರ್ಕಾರಕ್ಕೆ ಕಿವಿ ಇದ್ದು ಕಿವಿ ಇಲ್ಲದಂತೆ, ಕಣ್ಣು ಇದ್ದು ಕಣ್ಣು ಕಾಣದಂತೆ ಯಾವುದೋ ಭ್ರಮೆಯಲ್ಲಿ ಏನೋ ನಮ್ಮಕಾಲ ಮುಗಿಯಿತು ಮಾಡಿದ್ದು ಆಗಲಿ ಎಂದು ನೀವು ಕೈ ಕಟ್ಟಿಕೊಂಡು ಕುಳಿತುಕೊಳ್ಳುವ ಪ್ರಯತ್ನ ಮಾಡಿದರೆ ಕೇವಲ ಇದನ್ನು ಪ್ರಸ್ತಾಪ ಮಾಡಿ ನೀವು ಕೊಟ್ಟಂಥ ಉತ್ತರಕ್ಕೆ ಮಣಿದು ಯಾವುದೋ ವಿದ್ಯುತ್ 300 ರೂಪಾಯಿ ಪರ್ ಹೆಚ್.ಪಿ.ಗೆ ಮಾಡಿದ್ದನ್ನು 150 ರೂಪಾಯಿಗೆ ಮಾಡಿಬಿಡುತ್ತೇವೆ ಅಥವಾ ಕುಠೀರಾ ಭಾಗ್ಯ, ಭಾಗ್ಯ ಜ್ಯೋತಿಇನ್ಯಾವುದನ್ನು ಕಟ್ ಮಾಡಿಬಿಟ್ಟು ನಾವು ಸುಮ್ಮನೆ ಆಗುತ್ತೇವೆ ಎಂದು ಈ ಭ್ರಮೆಯಲ್ಲಿ ಇರುವುದು ಬೇಡ. ಅನಿವಾರ್ಯವಾಗಿ ಇವತ್ತು ಎಲ್ಲಾ ರೀತಿ ನೀವು ಮಾಡುವಂಥ ಒಳ್ಳೆಯ ಕೆಲಸಕ್ಕೆ ಸಹಕಾರ ಕೊಟ್ಟುಕೊಂಡು ಬಂದೆವು ರಾಜ್ಯದ ಜನರ ಹಿತದೃಷ್ಟಿಯಿಂದ. ಆದರೆ, ಇವತ್ತು ಜನ ಹಿತವನ್ನು ಸಂಪೂರ್ಣ ಮರೆತು ಯಾವುದೋ ನಿಮ್ಮ ಪಕ್ಷದ ಒಳ ಕಚ್ಚಾಟದಲ್ಲಿ ನೀವುತೊಡಗಿಕೊಂಡು ಅಭಿವೃದ್ಧಿ ಕಾರ್ಯದ ಕಡೆ ಗಮನ ಕೊಡದೆ ಕಳೆದ ನಾಲ್ಕು ತಿಂಗಳುಗಳಿಂದ ಯಾವುದೇ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡದೆ ಒಬ್ಬರ ಮೇಲೆ ಒಬ್ಬರು ವಿದೇಶಕ್ಕೆ ಹೋಗುತ್ತಿದ್ದಾರೆ. ಮತ್ತೆ ಇಂಥ ಅವಕಾಶ ಸಿಗುತ್ತದೆಯೋ ಇಲ್ಲವೋ ಎಂದು ವಿದೇಶಕ್ಕೆ ಹೋಗಿ ಬರುತ್ತಿದ್ದಾರೇನೋ? ಏನೂ ಗೊತ್ತಾಗದೇ ಇರುವಂಥ ಒಂದು ವಿಚಿತ್ರವಾದ ಪರಿಸ್ಥಿತಿಯಲ್ಲಿ ಜನ ಒಂದು ತರಹ ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದಾರೆ. ಪ್ರತಿಪಕ್ಷಗಳವರಿಗೆ ಏನಾಗಿದೆ? ಇವರು ಏಕೆ ನೋಡಿಕೊಂಡು ಒಂದು ಕೊನೆಯ ಮಾತನ್ನು ಹೇಳುತ್ತೇನೆ, ಹೋರಾಟದ ಬಗ್ಗೆ ವಿಶ್ವಾಸವನ್ನು ಜನ ಕಳೆದುಕೊಂಡಿದ್ದಾರೆ. ಇದು ಏನೊ ಹೊರಾಟ ಮಾಡಿದ ಹಾಗೆ ಮಾಡುತ್ತಾರೆ, ಇವರು ಏನೋ ಒಂದು ಸ್ವಾರ್ಥಕ್ಕೆ ಎನ್ನುವಂಥ ಭಾವನೆ ಇವತ್ತು ಜನರಲ್ಲಿ ಮೂಡಿದೆ. ಹಾಗಾಗಿ ಇವತ್ತು ಸದನದ ಒಳಗಡೆ ಇದು ತೀರ್ಮಾನ ಆಗಬೇಕು. ಆ ರೀತಿ ಪರಿಸ್ಥಿತಿಯನ್ನು ಇದುವರೆಗೂ ನಾವು ತಂದಿಲ್ಲ. ಇಡೀ ರಾತ್ರಿ ಇರಬಹುದು, ಇನ್ನೆರಡು ದಿನ ಮೂರು ದಿನ ಹಗಲು ಇರಬಹುದು, ನಾವು ಇದರ ಬಗ್ಗೆ ಸಂಪೂರ್ಣ ಈ ಮುನ್ನೂರು ಕೋಟಿ ರೂಪಾಯಿ ಏರಿಸಿರುವಂಥ ನೋಟಿಫಿಕೇಷನ್ ಅನ್ನು ಸಂಪೂರ್ಣ ವಾಪಸ್ ತೆಗೆದುಕೊಳ್ಳುವವರೆಗೆ,

ಅಧ್ಯಕ್ಷರು : ರಾತ್ರಿ ಎಲ್ಲಾ ಇರುತ್ತೇವೆಂದು, ಅವರಿಗಾಗಿ ಸೂಚನೆಯೇ ಅಥವಾ ನನಗೂ ಎಂದು ತಿಳಿಯಲಿ

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ವಿದ್ಯುತ್ ಶಾಕ್, ಬಗ್ಗೆ ನನಗೆ ಗೊತ್ತಿದೆ. ಜನತಾದಳ ಶಾಸಕಾಂಗ ಸಭೆಯಲ್ಲಿ ಇದು ಚರ್ಚೆಯಾಗಿದೆ. ಇದನ್ನು ನಾವೇನಾದರೂ ಸಂಪೂರ್ಣ ವಾಪಸ್ ತೆಗೆದುಕೊಳ್ಳದೆ ಇದ್ದರೆ ನಮ್ಮ ಅಡ್ರೆಸ್ ಇರುವುದಿಲ್ಲ ಎನ್ನುವ ಭಾವನೆಯನ್ನು ಕೆಲವರಾದರೂ ಗಟ್ಟಿಯಾಗಿ ಮುಖ್ಯ ಮುಂತ್ರಿಗಳಿಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎನ್ನುವುದನ್ನು ನಾನು ಕೇಳಿದ್ದೇನೆ. ಅಲ್ಲಿರುವಂಥ ರೈತರ ಮಕ್ಕಳು ಬಹುತೇಕ ಇಲ್ಲಿ ಇರುವಂಥವರು. ಇದು ತಪ್ಪಾಗಿದೆ ಎನ್ನುವ ಅರಿವು ನಿಮಗೆ ಆಗಿದೆ. ಅದಕ್ಕಾಗಿ ಇದನ್ನು ನಾವು ಪ್ರೆಸ್ಟೀಜ್ ಎಂದು ತೆಗೆದುಕೊಳ್ಳುವುದಿಲ್ಲ. ಬೇಕಾದರೆ ನೀವು ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ ನೋಟಿಫಿಕೇಷನ್ ಅನ್ನು ಪೂರ್ಣ ವಾಪಸ್ ತೆಗೆದುಕೊಂಡು ಒಂದು ಸದನದ ಸಮಿತಿ ಮಾಡಿ, ಯಾವ ಪರಿಸ್ಥಿತಿ ಇದೇ ಕೆ.ಇ.ಬಿ.ಗೂ ಉಳಿಯಬೇಕು, ಕೆ.ಪಿ.ಸಿನೂ ಉಳಿಯಬೇಕು, ಜನರೂ ಉಳಿಯಬೇಕು, ಆ ದಿಕ್ಕಿನಲ್ಲಿ ಯೋಚನೆ ಮಾಡಿದರೆ ನಾವು ಸಹಕಾರ ಕೊಡುತ್ತೇವೆ. ಇಲ್ಲದಿದ್ದರೆ ಎಲ್ಲರ ಭಾಷಣ ಮುಗಿದ ಮೇಲೆ, ಮಧ್ಯದಲ್ಲಿ ಏನೂ ಅವಸರ ಇಲ್ಲ, ನಾವು ಎಲ್ಲರೂ ಒಟ್ಟಾಗಿ ಸಜ್ಜಾಗಿ ಬಂದಿದ್ದೇವೆ, ನಮ್ಮ ಎಲ್ಲಾ ಶಾಸಕರುಗಳಿಗೂ ಹೇಳಿದ್ದೇವೆ ರಾತ್ರಿ, ಹಗಲು ಇಲ್ಲಿ ಧರಣಿ ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಇದು ಅನಿವಾರ್ಯ. ಜನರ ಒಂದು ದೃಷ್ಟಿಯಿಂದ ನಮ್ಮ ಕರ್ತವ್ಯವನ್ನು ನಿರ್ವಹಿಸಿದಂತೆ ಇದ್ದರೆ ಪ್ರತಿ ಪಕ್ಷದಲ್ಲಿ ಕುಳಿತುಕೊಂಡು ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸದಂತೆ ಆಗುವುದಿಲ್ಲ. ಅದಕ್ಕಾಗಿ ಈ ನಿರ್ಧಾರಕ್ಕೆ ನಾವು ಬಂದಿದ್ದೇವೆ. ಯೋಚನೆ ಮಾಡಿ ತಾವು ತೀರ್ಮಾನ ತೆಗೆದುಕೊಳ್ಳಬೇಕು. ತಾವು ಸಹಾ ಸ್ವಲ್ಪ ಕಿವಿ ಹಿಂಡಿ, ಅವರಿಗೆ ಯಾವ ಭಾಷೆಯಲ್ಲಿ ಹೇಳಬೇಕೋ, ತಾವು ಸಹ ಸ್ವಲ್ಪ ಕಿವಿ ಹಿಂಡಿ ಅವರಿಗೆ ಯಾವ ಭಾಷೆಯಲ್ಲಿ ಹೇಳಬೇಕೋ ತಾವು ಒಳ್ಳೆ ಭಾಷೆಯಲ್ಲಿ ಹೇಳುತ್ತಿರಿ. ಆ ಭಾಷೆಯಲ್ಲಿ ಹೇಳಿ, ಇಲ್ಲಪ್ಪ ಕೋಲಾರ ಜಿಲ್ಲೆಯುಲ್ಲಿ ನಾವೂ ಸಹ ಉಳಿದುಕೊಳ್ಳುವ ಹಾಗಿಲ್ಲ ಯಡಿಯೂರಪ್ಪನವರೇ, ಇದು ಬರೀ ಅವರು ಇವರ ಪ್ರಶ್ನೆ ಅಲ್ಲ, ಎಲ್ಲರ ಪರಿಸ್ಥಿತಿಯೂ ಇದೇ ಆಗಿದೆನ್ನುವುದಾದರೆ ದಯಮಾಡಿ ಸೂಕ್ತವಾದ ತೀರ್ಮಾನ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್: (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ವಿದ್ಯುಚ್ಛಕ್ತಿ ಮಂಡಳಿ ಆಡಳಿತದ ಬಗ್ಗೆ ಸಮಗ್ರವಾಗಿ ಮತ್ತು ಸುದೀರ್ಘವಾಗಿ ಇವತ್ತು ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ವಿದ್ಯುಚ್ಛಕ್ತಿ ದರವನ್ನು ಏರಿಸಿರತಕ್ಕಂಥಾದ್ದು ಸಾಧುವೇ ಅಲ್ಲವೇಎನ್ನತಕ್ಕಂಥಾದ್ದರ ಬಗ್ಗೆ ಸರ್ಕಾರದ ಆತ್ಮಾವಲೋಕನವಾಗಬೇಕಾಗಿದೆ. ಯಾವುದೇ ಸರ್ಕಾರ ಬಂದರೂ ಆ ಸರ್ಕಾರಕ್ಕೆ ಒಳ್ಳೆಯ ಹೆಸರು ಅಥವಾ ಕೆಟ್ಟ ಹೆಸರು ತರತಕ್ಕಂಥಾದ್ದು ವಿದ್ಯುಚ್ಛಕ್ತಿ ಮಂಡಳಿಯು ಹದಗೆಟ್ಟು ರೈತರುಗಳ ಮೇಲೆ, ಬಳಕೆದಾರರುಗಳ ಮೇಲೆ, ಕಾರ್ಖಾನೆ ಮಾಲೀಕರುಗಳ ಮೇಲೆ ವಿದ್ಯುಚ್ಛಕ್ತಿ ದರವನ್ನು ಏರಿಸುತ್ತಾ ಹೋದರೆ ಅದು ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತರುವುದಿಲ್ಲ. ಈ ಸರ್ಕಾರ ಬಂದ ನಂತರ ಎರಡು ಬಾರಿ ವಿದ್ಯುಚ್ಛಕ್ತಿ ದರವನ್ನು ಜಾಸ್ತಿ ಮಾಡಿದಾಗ ಈ ಸದನದಲ್ಲಿ ತೀವ್ರವಾದಂಥ ಚರ್ಚೆ ಮತ್ತು ಟೀಕೆ ಆರಂಭವಾಗಿ ಅಂತಿಮವಾಗಿ ಆ ಬಗ್ಗೆ ವಿಚಾರ ಮಾಡಲು ಸದನ ಸಮಿತಿಯನ್ನು ರಚನೆ ಮಾಡಲಾಯಿತು. ಸದನ ಸಮಿತಿಯು ವರದಿಯನ್ನು ಕೊಡುವುದಕ್ಕೆ ಮುಂಚಿತವಾಗಿ, ಸದನ ಸಮಿತಿಯ ಸಮಗ್ರ ಸದಸ್ಯರು, ಸಮಿತಿಯ ಅಧ್ಯಕ್ಷರು ಅನೇಕ ಕಡೆ ಸುತ್ತಾಡಿ ಬೇರೆ ಬೇರೆ ರಾಜ್ಯಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಸಮಂಜಸವಾದಂತಹ ಸರ್ವ ಸಮ್ಮತವಾದಂತಹ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಹಾಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದಾಗ, ಒಂದು ಕಡೆ, ವಿದ್ಯುಚ್ಛಕ್ತಿ ಮಂಡಳಿ ಅಧ್ಯಕ್ಷರು ವರದಿಯನ್ನು ಕೊಟ್ಟಿರತಕ್ಕ ಸಮಿತಿಯವರೇ ಪ್ರತಿವರ್ಷ ಜಾಸ್ತಿ ಮಾಡಿ ಎಂದು ಹೇಳಿದ್ದಾರೆಂದು ಹೇಳಿ ಅವರ ಪತ್ರಿಕಾ ಹೇಳಿಕೆಯಲ್ಲಿ ಹೇಳಿ, ಪಕ್ಕದಲ್ಲಿ ಮಾನ್ಯ ಸಚಿವರು ಕುಳ್ಳಿರಿಸಿಕೊಂಡು ಪತ್ರಿಕಾಗೋಷ್ಠಿ ಮಾಡಿದಾಗ ಸಚಿವರು ಒಂದಕ್ಷರ ಕೂಡ ಬಾಯಿ ಬಿಡಲಿಲ್ಲ ಅವತ್ತು. ಇಂಥದ್ದಕ್ಕೆ ಇಷ್ಟು ಜಾಸ್ತಿ ಮಾಡಿದ್ದೇವೆ, ಇಂಥದಕ್ಕೆ ಇಷ್ಟು ಜಾಸ್ತಿ ಮಾಡಿದ್ದೇವೆ ಎಂದು ಅಧ್ಯಕ್ಷರ ಬಾಯಿಯಿಂದ ಒಂದಕ್ಷರವೂ ಬರಲಿಲ್ಲ, ಅವರು ಮಾತನಾಡಲಿಲ್ಲ. ನಾನು ಅವತ್ತು ನೋಡಿದೆ. ಮಂತ್ರಿಗಳ ಬಾಯನ್ನು ಅಧ್ಯಕ್ಷರೇ ಹಿಡಿದುಕೊಂಡರು. ನಮ್ಮ ರಾಜ್ಯದ ವಿದ್ಯುಚ್ಛಕ್ತಿ ಮಂಡಳಿಗೆ ಸಂಬಂಧಪಟ್ಟಂತೆ ಸಚಿವರಾಗಿರತಕ್ಕ ತಾವು ಏನಿದ್ದೀರಿ, ತಾವು ಅರ್ಧ ಬಾಯಿ ಬಿಡಲೇ ಇಲ್ಲ. ನಾನು ಇಡೀ ಪತ್ರಿಕೆಯನ್ನು ಓದಿದೆ. ಅಧ್ಯಕ್ಷರೇ ಎಲ್ಲವನ್ನೂ, ಒಂದು ರೀತಿ ನಿಮ್ಮನ್ನು ಚಕ್ಕಳದ ಗೊಂಬೆಯಾಟ ಎಂದು ಹೇಳುತ್ತಾರಲ್ಲಾ ಹಾಗೆ ಇಟ್ಟುಕೊಂಡಿದ್ದಾರೆ ಒಂದುತರಹ ಆಟ ಆಡುತ್ತಾರೆ ನಮ್ಮಲ್ಲಿ, ನೀವು ಸುಮ್ಮನೆ ನಾಮಕಾವಸ್ತೆ ಅಧ್ಯಕ್ಷರು ಇದ್ದಹಾಗೆ, ನಿಮ್ಮ ಕೈ ಬಾಯಿ ಕುಣಿಸತಕ್ಕ ಹಾಗೆ ಆಗಿದೆ. ಆಂದರೆ, ಕೈ, ಬಾಯಿ ಯಾವುದೂ ಕಾಣಲಿಲ್ಲ ಈ ದರ ಜಾಸ್ತಿ ಮಾಡುವಾಗ. ಎಲ್ಲವನ್ನೂ ಅವರೇ ಹೇಳುತ್ತಾರೆ, ನಾವು ದರವನ್ನು ಜಾಸ್ತಿ ಮಾಡಿದ್ದೇವೆ ರೈತರಿಗೆ ಇಷ್ಟು, ಪಂಪ್‌ಸೆಟ್ಟುಗಳಿಗೆ ಇಷ್ಟು, ಬಳಕೆದಾರರಿಗೆ ಇಷ್ಟು ಮತ್ತು

ಕಾರ್ಖಾನೆಗಳಿಗೆ ಇಷ್ಟು, ಪ್ರತಿಯೊಂದನ್ನು ಒಂದು ಕಡೆಯಿಂದ ನನಗೆ ಅವಾಗ ಅನಿಸಿತು, ಪ್ರಜಾಪ್ರಭುತ್ವದ ವ್ಯವಸ್ಥೆ ಕುಸಿದು ಬೀಳುತ್ತಿದೆ ಎಂದು. ಪ್ರಜಾಪ್ರಭುತ್ವ ತಂತ್ರದ ವ್ಯವಸ್ಥೆ ಕುಸಿದು ಬೀಳುತ್ತಿದೆ. ಒಂದು ಕಡೆ ಅಧಿಕಾರಿ, ಮತ್ತೊಂದು ಕಡೆ ಮಂತ್ರಿ ಕುಳಿತಿರುವ ಈ ಸಭೆಯಲ್ಲಿ ಅಧಿಕಾರಿಯೇ ಎಲ್ಲವನ್ನೂ ಜಾಸ್ತಿ ಮಾಡಿದ್ದೇನೆ ಎಂದು ಹೇಳುವ ಆ ಒಂದು ಧಾಟಿಯನ್ನು ನೋಡಿದಾಗ ಇದು ಯಾವುದೇ ಪ್ರಜಾ ತಂತ್ರದ ವ್ಯವಸ್ಥೆಗೆ ಗೌರವತರಕ್ಕದ್ದಲ್ಲ. ಇದೊಂದು ರೀತಿ ಮಿಲಿಟರಿ ಪ್ರಭುತ್ವ. ದಂಡಿನ ಆಳ್ವಿಕೆಗೆ ಇದು ಸಮವೇ ಹೊರತು ಈ ಪ್ರಜಾತಂತ್ರ ವ್ಯವಸ್ಥೆಗೆ ಸಮಯ ಅಲ್ಲ. ಪ್ರಜಾತಂತ್ರ ಸಮಯವಾದರೆ, ಅಧಿಕಾರಿಯನ್ನು ಬಾಯಿ ಮುಚ್ಚಿಕೊಂಡು ನೀನು ಕುಳಿತಿರು, ನಾನು ಪ್ರತಿಯೊಂದನ್ನೂ ಹೇಳುತ್ತೇನೆಂದು ಹೇಳಬೇಕಾಗಿತ್ತು. ಆದರೆ, ನನಗನ್ನಿಸುತ್ತದೆ, ಇದು ಸ್ವಲ್ಪ ಬದಲಾವಣೆಯಾಗಿ ಪ್ರಜಾ ತಂತ್ರ ವ್ಯವಸ್ಥೆಗೆ, ಅತ್ಯಂತ ಅಪಾಯಕಾರಿ ಮನೋಭಾವನೆಯಾಗಿದೆ. ನಾನೇ ಮಂತ್ರಿಯಾಗಿದ್ದರೆ ನಾನೇ ಹೇಳುತ್ತಿದ್ದೆ. ಆದರೆ, ನಿಮ್ಮ ಹಣೆಬರೆಹ ಈ ಪರಿಸ್ಥಿತಿ ಆಯಿತು ಎಂದು ಹೇಳಿ ನಾನು ಮರಕಪಟ್ಟು ಅನುಕಂಪ ಪಡುತ್ತಿದ್ದೇನೆ ಆದರೆ, ಈ ವ್ಯವಸ್ಥೆಗೆ ಅಪಾಯ ಬರುತ್ತದೆ ಎನ್ನತಕ್ಕ ಮಾತನ್ನು ನಾನು ತಮಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಇದು ಆಗತಕ್ಕಂಥದ್ದಲ್ಲ. ಮಾಡಬೇಕಾದು ಅಲ್ಲ. ಮಾನ್ಯ ಅಧ್ಯಕ್ಷರೆ, ಇವರು ಯಾವ ದರವನ್ನು ಏರಿಸಬೇಕಾದರೆ, ಇಷ್ಟು ಬೇಗ ಸಮಿತಿ ವರದಿ ಕೊಟ್ಟು 4 ತಿಂಗಳು ಕಳೆದಿಲ್ಲ, 6ನೇ ತಿಂಗಳಿನಲ್ಲೇ ಏಕಾಏಕಿ ದರವನ್ನು ಏರಿಸತಕ್ಕ ವಿಚಾರವೇನಿದೆ, ಇದರಿಂದ ನನಗೆ ಸ್ವಲ್ಪ ಅನುಮಾನ ಬರುತ್ತದೆ. ಒಂದು, ಇಲ್ಲ, ಈ ಸರ್ಕಾರದ ಮೇಲೆ ಐ.ಎ.ಎಸ್. ಅಧಿಕಾರಿಗಳಿಗೆ ಒಂದು ರೀತಿಯ ಜಿಗುಪ್ಸೆ ಬಂದಿರಬಹುದು. ಐ.ಎ.ಎಸ್. ಅಧಿಕಾರಿಗಳಿಗೆ ನಿಮ್ಮ ಸರ್ಕಾರ ಬೇಗ ಹೋಗಬೇಕು ಎನ್ನತಕ್ಕಂಥ ತೀರ್ಮಾನಕ್ಕೆ ಅವರು ಬಂದಿರಬಹುದು. ಇದು ಸತ್ಯ. ಇದರಲ್ಲಿ ಬೇರೆ ಮುಚ್ಚುಮರೆ ಇಲ್ಲದೆ ನಾನು ಹೇಳುತ್ತೇನೆ. ಹೌದು. ಆದರೆ, ಈ ಸರ್ಕಾರದ ಮೇಲೆ 2 ವರ್ಷದ ನಿಮ್ಮ ಆಡಳಿತವನ್ನು ನೋಡಿಕೊಂಡು ಅವರಿಗೆ ಜಿಗುಪ್ಸೆ ಆಗಿರಬಹುದು. ಹೇಗಾದರೂ ಮಾಡಿ, ಯಾವ ರೂಪದಲ್ಲಿ ಈ ಸರ್ಕಾರಕ್ಕೆ ನೇರವಾಗಿ ಕೆಟ್ಟ ಹೆಸರು ತರಬೇಕೆಂದು ಹೇಳಿ ಅಧಿಕಾರಿಗಳು ನಿಮ್ಮ ದರ್ಬಾರಿನ, ನೀವು ಏನು ದರ್ಬಾರು ಮಾಡುತ್ತೀರಲ್ಲಾ ನಿಮ್ಮ ಮುಖ್ಯಮಂತ್ರಿಗಳು, ಮಂತ್ರಿಗಳು ಎಲ್ಲಾ ಕುಳಿತು ದರ್ಬಾರು, ಆವಾಗ ಬಂದು ಅಹವಾಲು ಸಲ್ಲಿಸುತ್ತಾರೆ. ಸ್ವಾಮಿ, ತಾವು ಮಾಡಿದ್ದೇ ಸರಿ, ಇದೇ ಚೆಂದ, ಇದನ್ನು ನೀವು ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಗೌರವ ಬರುತ್ತದೆ, ಈ ರೀತಿ ನೀವು ಮಾಡಬೇಕು ಎನ್ನುವ ಆ ಸಲಹೆಗಳು ಅವರು ಸರ್ಕಾರಕ್ಕೆ ಕೊಡುತ್ತಾರೆ. ಈಗ ನಿಮಗೆ ಐ.ಎ.ಎಸ್. ಅಧಿಕಾರಿಗಳು ಬಂದು ಪರಾಕುಗಳನ್ನು ಹೇಳುತ್ತಾರಲ್ಲಾ, ಆವಾಗ

ನಿಮಗೆ ಖುಷಿ. ಒಂದು ರೀತಿ ಇಲ್ಲಿ ಕುಳಿತಿರುವಾಗ ಇರತಕ್ಕ ಕಿವಿಯೇ ಬೇರೆ, ಶ್ರೀ ಸಿ. ಬೈರೇಗೌಡರನ್ನೇ ನೇರವಾಗಿ, ಶ್ರೀ ಪಿ. ಜಿ. ಆರ್. ಸಿಂಧ್ಯಾರವರಿಗೆ ನೇರವಾಗಿ ಈ ಕಡೆಯಿಂದ ಆ ಕಡೆಗೆ ಹೇಳುತ್ತಿದ್ದೇನೆ. ಕೆಟ್ಟು ಹೋಯಿತು ನಿಮ್ಮ ಕಿವಿಗಳು. ನಿಮ್ಮ ಕಿವಿಗಳು ಕೆಟ್ಟು ಹೋಗಿವೆ. ನಿಮ್ಮ ಮನಸ್ಸು ಕೆಟ್ಟು ಹೋಗಿದೆ. ನಿಮ್ಮ ಆತ್ಮವನ್ನು ಮುಟ್ಟಿ ನೋಡಿ, ಈ ಸದನದಲ್ಲಿ ಆವತ್ತು ನಾನು ಎಷ್ಟು ನಿಮಗೆ ಶಭಾಷ್‌ಗಿರಿ ಕೊಟ್ಟಿದ್ದೇನೆ ಅಂದರೆ, ಇದೇ ಸ್ಥಳದಲ್ಲಿ ಕುಳಿತು ವಿದ್ಯುಚ್ಛಕ್ತಿ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಲ್ಲಿ ಕುಳ್ಳಿರಿಸಿ, ಶಭಾಷ್‌ಗಿರಿ ಕೊಟ್ಟೂ ಕೊಟ್ಟೂ ಬೆನ್ನು ತಟ್ಟಿ ಅಲ್ಲಿಗೆ ಕಳುಹಿಸಿ ನಮ್ಮನ್ನು ಈ ಸ್ಥಿತಿಗೆ ತಂದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಾನು ಕಳುಹಿಸಿಲ್ಲ. ನನಗನ್ನಿಸುತ್ತದೆ. ಅಧ್ಯಕ್ಷರೆ, ತಾವು ಅವಾಗ ಈ ಸದನದೊಳಗೆ ಇರಲಿಲ್ಲ, ಹೊರಗಡೆ ಹೋಗಿದ್ದಿರಿ. ತಾವು ಆ ದೃಶ್ಯವನ್ನು ನೋಡಬೇಕಾಗಿತ್ತು. ಪತ್ರಿಕೆಯಲ್ಲಿ ಬಂದಿರುವುದು ಸ್ವಲ್ಪ ಅಂದರೆ ಶೇಕಡಾ ಒಂದು ಭಾಗ ಇರಬಹುದು. ಶ್ರೀ ಸಿ. ಬೈರೇಗೌಡರು ವಿದ್ಯುಚ್ಛಕ್ತಿ ಮಂಡಳಿ ಬಗ್ಗೆ ಈ ಖುರ್ಚಿಯಿಂದ ಲೆಕ್ಕ ಹಾಕಿದರೆ ನೂರು ಬಾರಿ ಒಂದೊಂದು ದಿನಕ್ಕೆ ಏಳುತ್ತಿದ್ದರು. ಆಶಕ್ತಿ ಎಲ್ಲಿ ಹೋಯಿತು? ಆ ಶಕ್ತಿ ಎಲ್ಲಿ ಹೋಯಿತು ನಿಮಗೆ? ಆ ರೈತರ ಬಗ್ಗೆನಿಮಗೇಇದ್ದಂತಹ ಕಳಕಳಿ ಎಲ್ಲಿ ಹೋಯಿತು ? ಕಾಳಜಿ ಎಲ್ಲಿ ಹೋಯಿತು? ಇಲ್ಲಿ ಬಹಳ ವೀರಾರ್ಜುನ ರೀತಿ ಹೋರಾಟ ಮಾಡುತ್ತಿದ್ದಿರಿ. ಈಗ ಬೃಹನ್ನಳೆ ಆಗಿದ್ದೀರಿ ನೀವು ಬೃಹನ್ನಳೆ ವೇಷವನ್ನು ಧರಿಸಿದ್ದೀರಿ ನೀವು. ಅದಕ್ಕೆ? ಏನಾದರೂ ಬೇಡವೇ ನನಗನ್ನಿಸುತ್ತದೆ, ನಾನು ಈ ಸ್ಥಳದಲ್ಲಿ ಕುಳಿತಾಗ ಅವರು 2 ವಿಚಾರಗಳಲ್ಲಿ ಅಧ್ಯಕ್ಷರೆ, ವಿದ್ಯುಚ್ಛಕ್ತಿ ಬಗ್ಗೆ ಮತ್ತು ಅಬ್ಕಾರಿ ಬಗ್ಗೆ ಅತ್ಯಂತ ಪ್ರಾಮಾಣಿಕವಾಗಿ ಚೆನ್ನಾಗಿ ಮಾತನಾಡಿದ್ದಾರೆಂದು ಅಂದರೆ ನಾನು ಆ ಮಾತನ್ನು ಒಪ್ಪುತ್ತೇನೆ. ಈ ಬೆಲೆ ಏರಿಸಿದ್ದರ ಬಗ್ಗೆ ರಾಜಿನಾಮೆ ಕೊಡುತ್ತೀರಿ ಎಂದು ಅಂದುಕೊಂಡಿದ್ದೆ ನೀವು ಕೊಡಲಿಲ್ಲ. 2 ಬಾರಿ ಈ ರೀತಿಯಾಯಿತು. ಆ ಪ್ರಾಮಾಣಿಕತೆ ಬಗ್ಗೆ, ಅವರ ಪ್ರಾಮಾಣಿಕತೆಯನ್ನು ನಾನು ಈಗ ಪ್ರಶ್ನೆ ಮಾಡುತ್ತಿದ್ದೇನೆ. ನೀವು ಅಪ್ರಾಮಾಣಿಕರು ಎಂದು ಅಲ್ಲ. ನಿಮ್ಮ ಕಳಕಳಿ ಏನಾಯಿತು ಎನ್ನತಕ್ಕದ್ದರ ಬಗ್ಗೆ ನೇರವಾಗಿ ನಿಮಗೆ ಹೇಳುತ್ತಿದ್ದೇನೆ. ಅಬ್ಕಾರಿ ಬಗ್ಗೆ ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ ಕರ್ನಾಟಕ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ ಎಂದು ಹೇಳಿದಿರಿ, ಸಾರಾಯಿ ನಿಲ್ಲಿಸಬೇಕು ಎಂದು ಹೇಳಿದಿರಿ, ವಿದ್ಯುಚ್ಛಕ್ತಿ ಬಗ್ಗೆ ನಿಮ್ಮ ಕೂಗಾಟದ ಮೇಲೆ ಎ. ನಾಗರಾಜ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯಾಯಿತು; ನೀವು ಆ ಸಮಿತಿಯ ಸದಸ್ಯರಾದಿರಿ. ಇಡೀ ದೇಶ ಸುತ್ತಿದಿರಿ. ವರದಿಯನ್ನು ಕೊಟ್ಟಿರಿ. ಏನಾಯಿತು ಸ್ವಾಮೀ? ನಿಮ್ಮ ಮಾತು ಏನಾಯಿತು? ನೀವು ಅದೇ ಬೈರೇಗೌಡರೇ?

ಶ್ರೀ ಸಿ. ಬೈರೇಗೌಡರ (ಮಾನ್ಯ ಕೃಷಿ ಸಚಿವರು) : ನಾವು ಕೊಟ್ಟಂತಹ ವರದಿಯೇ ಇದಕ್ಕೆಲ್ಲಾ ಮೂಲ. ನಾವು ಅಮೂಲಾಗ್ರವಾಗಿ ಅಭ್ಯಾಸ ಮಾಡಿದ್ದೇವೆ. ಆ ವರದಿಯಲ್ಲಿ ನಮ್ಮ ಟಿ. ಬಿ. ಜಯಚಂದ್ರರವರು ಸಮಿತಿಯ ಸದಸ್ಯರಾಗಿದ್ದರು. ಅವರು ಹೇಳಲಿ ಹೇಳಿದ್ದಾರೋ, ಇಲ್ಲವೋ ಎನ್ನತಕ್ಕದ್ದನ್ನು. ಒಂದು ಎಚ್‌ಪಿಗೆ ಒಂದು ವರ್ಷಕ್ಕೆ ಒಂದು ನೂರು ರೂಪಾಯಿ ಹಾಕಬೇಕು ಎನ್ನತಕ್ಕದ್ದನ್ನು ಆ ವರದಿಯಲ್ಲಿ ಹೇಳಿದ್ದೇವೆ. ವರದಿ ಕೊಟ್ಟು ಎಷ್ಟು ವರ್ಷವಾಯಿತು? 4 ವರ್ಷಗಳಾಗಿವೆ. 4 ವರ್ಷಗಳಿಂದ ಏನೇನು? ಯಾವ ಯಾವ ಬಾಬು, ಎಷ್ಟೆಷ್ಟು ಏರಿಕೆಯಾಗಿದೆ ಎನ್ನತಕ್ಕದ್ದನ್ನು ಲೆಕ್ಕಹಾಕಿ. ಅದರ ಅನುಸಾರವಾಗಿ ಅನುಪಾತದಿಂದನೇ ಇದು ಹೆಚ್ಚಾಗಿರತಕ್ಕಂಥದ್ದು. ಅವತ್ತು ನಾನು ಏನು ಹೇಳಿದ್ದೇನೋ, ಇವತ್ತೋ ಕೂಡ ಇಲ್ಲಿ ಕುಳಿತು ಸಹ ಅದನ್ನೇ ಹೇಳುತ್ತಿದ್ದೇನೆ. ಯಾವುದೇ ವಿಧದಿಂದ ಬದಲಾವಣೆಯಾಗಲೀ ವ್ಯತ್ಯಾಸವಾಗಲೀ ಮಾಡಲಿಲ್ಲ. ಇನ್ನೊಂದು ಉದಾಹರಣೆಯನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ, ಇಲ್ಲಿ ಇದೇ ಸದನದಲ್ಲಿ, ಉಚಿತವಾಗಿ ರೈತರಿಗೆ ವಿದ್ಯುತ್‌ನ್ನು ಕೊಡಬೇಕೆನ್ನುತಕ್ಕದ್ದು ಪ್ರಸ್ತಾಪವಾದಾಗ, ನಾನು ಕೊಡಕೂಡದೆಂದು ಹೇಳಿದ್ದೇನೆ. ಸದನದ ಕಡತದಲ್ಲಿ ಈಗಲೂ ಸಹ ಇದೆ. ರೈತರಿಗೆ ಬೇಕಾಗಿರತಕ್ಕದ್ದು ಗುಣಮಟ್ಟದ ವಿದ್ಯುತ್ತೇ ವಿನಃ ನಾನು ಒತ್ತಿ ಹೇಳಲಿಕ್ಕೆ ಇಷ್ಟಪಡುತ್ತೇನೆ, ಉಚಿತವಾಗಿ ಅಲ್ಲ. ಒಂದು ನಿಮಿಷ ಕುಳಿತುಕೊಳ್ಳಿ, ಮೈಸೂರಲ್ಲಿ ನೀವು ರೈತರಲ್ಲ ಏನಿಲ್ಲ. ಮೈಸೂರಿನಲ್ಲಿ ಯಾವ ರೈತರು?

ಶ್ರೀ ಯು. ಆರ್. ಸಭಾಪತಿ : ಸ್ವಾಮಿ, ನೀವು ಗುಣಮಟ್ಟದ ವಿದ್ಯುತ್ತನ್ನು ಕೊಡುತ್ತಿದ್ದೀರೋ?

ಶ್ರೀ ಸಿ. ಬೈರೇಗೌಡ : ನಾನು ರಾಜ್ಯಾದ್ಯಂತ ಮೂಲೆ ಮೂಲೆಯಲ್ಲಿ ಈ ಪ್ರಶ್ನೆಯನ್ನು ರೈತರಿಗೆ ಕೇಳಿದೆ ನಿಮಗೆ ಗುಣಮಟ್ಟದ ವಿದ್ಯುತ್ ಬೇಕೋ, ಉಚಿತ ವಿದ್ಯುತ್ ಬೇಕೋ ಎಂದು, ಈ ರಾಜ್ಯದಲ್ಲಿ ಒಬ್ಬ ರೈತನೂ ಉಚಿತವಾಗಿ ಬೇಕೆಂದು ಕೇಳಲಿಲ್ಲ. ನಿನ್ನೆ ಸಂಜೆಯೂ ಸಹ ನಾನು ಈ ಮಾತನ್ನು ಕೆಲವು ಕಡೆ ರೈತರನ್ನು ಕೇಳಿದ್ದೇನೆ. ಉಚಿತವಾಗಿ ಕರೆಂಟ್‌ಬೇಕೆಂದು ಯಾರೂ ಹೇಳಲಿಲ್ಲ. ಒಬ್ಬ ರೈತ ಕೂಡ ಹೇಳಲಿಲ್ಲ. ನಾನೂ ಸಹ ಒಬ್ಬ ರೈತನಾಗಿ ರೈತರ ಸಂಪರ್ಕ ಇರುವನಾಗಿ ಹೋಗಿ ಕೇಳಿಕೊಂಡು ಬಂದಿದ್ದೇನೆ. ಎಲ್ಲಾ ಕಡೆ ಈ ಪ್ರಶ್ನೆ ಕೇಳಿ ಅದನ್ನು ನಾನು ಈ ಸದನದ ಮುಂದೆ ಇಡುತ್ತಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಬೈರೇಗೌಡರ ಕಮಿಟಿಯಲ್ಲಿ ನಾನೂ ಸದಸ್ಯನಾಗಿದ್ದೆ. ಆ ಕಮಿಟಿ ಶಿಫಾರಸ್ಸು ಆಗಲಿಲ್ಲ.

ಶ್ರೀ ಬೈರೇಗೌಡರೊಬ್ಬರ ಅಭಿಪ್ರಾಯವಾಗಿತ್ತು ಅದು ನೀವು ಮೀಟರನ್ನು ಹಾಕಬೇಕು, ನೀವು ಪವರ್ ಟಾರಿಫ್ ಫಿಕ್ಸ್ ಮಾಡಬೇಕು, ಇಲ್ಲ ಕ್ಷಮಿಸಬೇಕು ಬೈರೇಗೌಡರೇ, ನಾವೆಲ್ಲಾ ನಿಮ್ಮ ಜೊತೆಯಲ್ಲಿ ಸದಸ್ಯರಾಗಿ ಕೆಲಸ ಮಾಡಿದವರು. ನಾವೆಲ್ಲಾ ತಕರಾರು ತೆಗೆದುಕೊಂಡು ಇರಿಗೇಷನ್ ಪಂಪ್‌ಸೆಟ್‌ಗೆ ಟಾರಿಫ್ ಹಾಕಬಾರದು ಎಂದು ಅಂತಿಮವಾಗಿ ಶಿಫಾರಸ್ಸು ಕಮಿಟಿಯಲ್ಲಿ ಆಯಿತು. ತೆಗೆದು ಓದಬಹುದು. ನಿಮ್ಮ ಜೊತೆಯಲ್ಲಿ ಕೆಲಸ ಮಾಡಿ, ಬೈರೇಗೌಡರ ವೈಯಕ್ತಿಕ ಅಭಿಪ್ರಾಯ ಅವತ್ತು ಅದೇ ಆಗಿತ್ತು. ಟಾರಿಫ್ ಫಿಕ್ಸ್ ಮಾಡಲೇಬೇಕು, ಆಗಬೇಕು ಎನ್ನುವವರೆಗೂ ಮಾತನಾಡಿದ್ದೆವು ನಾವು. ಅಂತಿಮವಾಗಿ ನಾವು ಯಾರೂ ಒಪ್ಪಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಮಾನ್ಯ ಶ್ರೀ ಬೈರೇಗೌಡರು ನಮ್ಮ ಸಮಿತಿಯೇ ಇದಕ್ಕೆ ಮೂಲ ಎಂದು ಹೇಳಿದರು.ಇದು ಮೂಲ ಅಲ್ಲ. ಆ ಸಮಿತಿಯ ಮೂಲವನ್ನು ತೆಗೆದುಕೊಳ್ಳಲಿಲ್ಲ. ಇದು ಮೂಲವ್ಯಾಧಿ. ತಾವುಗಳು ಅತ್ಯಂತ ಜವಾಬ್ದಾರಿಯಿಂದ ಇಲ್ಲಿ ಕೆಲಸ ಮಾಡಿದ್ದೀರಿ. ಹಾಗಾದರೆ ಉಪಸಮಿತಿಯಲ್ಲಿ ಮತ್ತು ಸಚಿವಸಂಪುಟದಲ್ಲಿ ತಾವು ಏನು ಮಾಡಿದ್ದೀರಿ? ತಮಗೆ ರೈತರ ಬಗ್ಗೆ ಕಳಕಳಿ ಇಲ್ಲವೇ? ಮೊದಲಿನ ಆ ಒಂದು ಕಾಳಜಿಯನ್ನು ತಾವು ಕಳೆದುಕೊಂಡಿದ್ದಿರಿ. ಹಾಗಾದರೆ ನಿಮಗೆ ಆಗಿರತಕ್ಕಂಥ ವಿಚಾರವಾದರೂ ಏನು?

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ ತಾವುಗಳು 1967ರಲ್ಲಿ ಒಂದು ವಾರದಲ್ಲಿ ಎಷ್ಟು ಸಾರಿ ಆರೆಸ್ಟ್ ಆಗುತ್ತಾ ಇದ್ದಿರಿ? ಈಗ ಎಷ್ಟು ಸಾರಿ ಆಗುತ್ತಾ ಇದ್ದೀರಿ?

ಶ್ರೀ ವಾಟಾಳ್ ನಾಗರಾಜ್ : 1967ರಲ್ಲಿ ಒಂದು ವಾರದಲ್ಲಿ ಸಾಮಾನ್ಯವಾಗಿ ದಿನವೂ ಆರೆಸ್ಟ್ ಆಗಿದ್ದೇನೆ. ಈಗ ಅಷ್ಟು ಇಲ್ಲ. ಆದರೆ ಆ ಪ್ರಶ್ನೆಯೇ ಬೇರೆ ಈ ಪ್ರಶ್ನೆಯೇ ಬೇರೆ.

ಶ್ರೀ ಬಿ. ಬಿ. ಶಿವಪ್ಪ : ಹಾಗೆಂದ ಮೇಲೆ ಈ ಸರಕಾರದವರು ಮಾನ್ಯ ವಾಟಾಳ್ ನಾಗರಾಜ್ ರವರ ಮೇಲೆ ಆಶೀರ್ವಾದ ಇಟ್ಟಿದೆ ಎಂಬುದು ತಮ್ಮ ಅಭಿಪ್ರಾಯವೇ?

ಶ್ರೀ ವಾಟಾಳ್ ನಾಗರಾಜ್ : ಅವೊತ್ತಿನ ವ್ಯವಸ್ಥೆಯೇ ಬೇರೆ, ಇವೊತ್ತಿನ ವ್ಯವಸ್ಥೆಯೇ ಬೇರೆ. ಇವೊತ್ತಿನ ಪರಿಸ್ಥಿತಿಯೇ ಬೇರೆ ರೀತಿಯಲ್ಲಿದೆ. ತಮಗೂ ಅದರ ಅರ್ಥವಾಗಿದೆ. ತಮಗೆ ಖಂಡಿತವಾಗಿಯೂ ಅರ್ಥವಾಗಿದೆ.

ಅಧ್ಯಕ್ಷರು : ನನಗೆ ಅರ್ಥವಾಗಿದೆ. ಆದರೆ ಬೈರೇಗೌಡರು ಏಕೆ ಸುಮ್ಮನೆ ಇದ್ದಾರೆ ಎಂಬುದು ನಿಮಗೂ ಅರ್ಥವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಏಕೆ ಈ ಮಾತನ್ನು ಹೇಳಿದ್ದೇನೆ ಅಂದರೆ.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಮತ್ತೆ ದಸ್ತಗಿರಿ ಆಗುವಂಥ ಸನ್ನಿವೇಶ ಇದ್ದರೆ ಅದನ್ನು ನೀವು ಕಳೆದುಕೊಳ್ಳ ಬೇಡಿ.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಬೈರೇಗೌಡರ ಪರಿಸ್ಥಿತಿಯು ಏಕೆ ಹೀಗೆ ಆಯಿತು ಎಂದು ನಮಗೆ ಆದರೆ ನಿಮಗೆ ಮರುಕ ಆಯಿತು. ಹಾಗಾದರೆ ಅವರಲ್ಲಿದ್ದ ಶೌರ್ಯ ಮತ್ತು ಧೈರ್ಯವು ಎಲ್ಲಿಗೆ ಹೋಯಿತು? ಅದು ಈಗ ಸಂಪೂರ್ಣವಾಗಿ ನಶಿಸಿದೆಯೇ? ನಾನು ಒಂದು ತೀರ್ಮಾನಕ್ಕೆ ಬಂದು ಈಗಾಗಲೇ ಒಂದು ವಿಷಯವನ್ನು ಹೇಳಿದೆ. ಸರಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ, ಆಡಳಿತವು ಚೆನ್ನಾಗಿ ಇರಬೇಕಾದರೆ ಅಧಿಕಾರಿಗಳು ಅನೇಕ ಸಂದರ್ಭಗಳಲ್ಲಿ ಸರಕಾರಕ್ಕೆ ಸಲಹೆಗಳನ್ನು ಕೊಡುತ್ತಾರೆ. ಅದನ್ನು ಸರಕಾರದವರು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಈ ವಿದ್ಯುಚ್ಛಕ್ತಿಮಂಡಳಿಯಲ್ಲಿ ಸರಕಾರಕ್ಕೆ ಒಳ್ಳೆಯ ಹೆಸರನ್ನು ತರತಕ್ಕಂಥ ಯಾವುದೇ ವ್ಯವಸ್ಥೆ ಇಲ್ಲ. ಈಗ ಇರತಕ್ಕಂಥಾದ್ದು ಇಲ್ಲಿ ಅವ್ಯವಸ್ಥೆ ಮಾತ್ರ. ಈ ವಿದ್ಯುತ್‌ಚ್ಛಕ್ತಿ ಮಂಡಳಿಯ ಮೂಲಕ ಸರಕಾರಕ್ಕೆ ಜಾಸ್ತಿ ಅಪಪ್ರಚಾರ ಮಾತ್ರ ಸಿಗುತ್ತದೆ. ಹೀಗೆ ಎರಡು ಬಾರಿ ಬೆಲೆ ಏರಿಸತಕ್ಕಂಥ ಸಲಹೆಯನ್ನು ನೀವು ಅವರಿಂದ ತೆಗೆದುಕೊಂಡು ಬೆಲೆ ಏರಿಸಬೇಕಾದರೆ ನೀವೇ ಒಂದು ತೀರ್ಮಾನ ಮಾಡಿರಬಹುದೆಂದು ಕಾಣುತ್ತದೆ. ಮುಂದೆ ನಮ್ಮ ಸರಕಾರವು ಅಧಿಕಾರಕ್ಕೆ ಬರುವುದಿಲ್ಲ, ನಾವು ಅಧಿಕಾರದಲ್ಲಿ ಇರುವುದಿಲ್ಲ, ಇದು ನಮ್ಮ ಕೊನೆಯ ಆಡಳಿತ, ಆದ್ದರಿಂದ ನಾವು ನಮ್ಮ ಇಚ್ಛೆ ಬಂದ ಹಾಗೆ ಬೆಲೆ ಏರಿಸ ಬಹುದು ಎಂದು ತೀರ್ಮಾನವನ್ನು ಮಾಡಿದ್ದೀರೋ? ನನಗಂತೂ ಹಾಗೆಯೇ ಭಾಸವಾಗುತ್ತಾ ಇದೆ. ಹಾಗಾದರೆ ನೀವು ನಿಮ್ಮ ಕೊನೆಯ ಅದಿಕಾರದ ಪಯಣಕ್ಕೆ ತಯಾರು ಮಾಡುತ್ತಾ ಇದ್ದೀರಿ. ಕೊನೆಯದಾಗಿ ಅಧಿಕಾರದಲ್ಲಿರುವ ನೀವು ಜನಸಾಮಾನ್ಯರ ಬಗ್ಗೆ ಅವರಿಗೆ ಬೇಕಾದಂಥ ಸಮಗ್ರವಾದ ಅವಶ್ಯಕತೆಗಳ ಬಗ್ಗೆ ಸ್ವಲ್ಪವಾದರೂ ಚಿಂತನೆ ಮಾಡಿದ್ದೀರಾ? ನಿಮ್ಮಲ್ಲಿ ಇಂಥ ವಿಚಾರಗಳ ಬಗ್ಗೆ ಚಿಂತನೆ ಮಾಡತಕ್ಕಂಥ ವ್ಯವಸ್ಥೆಯೇ ಇಲ್ಲ. ಏನಾದರೂ ಆಗಲಿ ನಾವು ಹೊರಟಿದ್ದೇವೆ, ಮುಂದೆ ಈ ರಾಜ್ಯದಲ್ಲಿ ನಮ್ಮ ಸರಕಾರ ನಮ್ಮ ಪಕ್ಷವು ಅಧಿಕಾರದಲ್ಲಿ ಬರಬೇಕೆಂಬ ಉದ್ದೇಶವು ನಿಮಗೆ ಇಲ್ಲವೆಂದು ಕಾಣುತ್ತದೆ....

ಶ್ರೀ ಕಾಗೋಡು ತಿಮ್ಮಪ್ಪ : ಮೊನ್ನೆ ಇತ್ತೀಚೆಗೆ ಭೈರೇಗೌಡರು ಇಸ್ರೇಲಿಗೆ ಅಧ್ಯಯನಕ್ಕಾಗಿ ಹೋಗಿ ಬಂದಿದ್ದಾರೆ. ಇನ್ನೊಮ್ಮೆ ವಿದ್ಯುಚ್ಛಕ್ತಿ ಮಂಡಳಿಯನ್ನು ದುರಸ್ತಿ ಮಾಡಲು ಸ್ವಲ್ಪ ದಿನಗಳ ಕಾಲ ಚೈನಾಕ್ಕೆ ಹೋಗಿ ಬರಬೇಕೆಂದು ತೀರ್ಮಾನ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ಇವೊತ್ತು ರಾಜ್ಯದ ಜನರು ಶಾಪ ಹಾಕುತ್ತಾ ಇದ್ದಾರೆ. ದರ ಏರಿಸಲು ದಿನಕ್ಕೆ ಒಂದು ಉಪಸಮಿತಿಯನ್ನು ಮಾಡುತ್ತಾ ಇದ್ದೀರಿ. ವರದಿಯಲ್ಲಿ ದರವನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೀರಿ. ನಿಮಗೆ ನಿಮ್ಮ ಸುತ್ತಮುತ್ತ ಇರುವ ನಿಮ್ಮ ಪಕ್ಷದವರು ಬಂದು ಜಯಕಾರ ಹಾಕುವುದು ಮಾತ್ರ ಕೇಳುತ್ತದೆಯೇ ವಿನಹ ಜನರು ಹಾಕುತ್ತಿರುವ ಶಾಪವು ಕೇಳುತ್ತಾ ಇಲ್ಲ. ಅದು ನಿಮ್ಮ ಕಿವಿಗೆ ಬೀಳುವುದಿಲ್ಲವೇ? ಈ ರಾಜ್ಯದಲ್ಲಿನ ಜನರಿಂದ ಮತ್ತೆ ಮತಗಳನ್ನು ಪಡೆದು ಮತ್ತೆ ಆಡಳಿತಕ್ಕೆ ಬರಬೇಕೆಂಬ ಆಶೆಯು ನಿಮಗೆ ಇಲ್ಲವೊ? ನಿಮ್ಮಲ್ಲಿ ಬಹಳ ಜನರಿಗೆ ಆ ಒಂದು ಆಶೆ ಇದೆ. ನಿಮಗೆ ಇದೇ ಕೊನೆಯ ಆಡಳಿತ ಎಂಬ ವಿಚಾರ ಇದೆಯೋ? ಹೇಗೆ?

ಅಧ್ಯಕ್ಷರು : ನಾವು ಇಲ್ಲಿ ಚರ್ಚಿಸುತ್ತಿರುವುದು ವಿದ್ಯುಚ್ಛಕ್ತಿ ಮಂಡಳಿಯವರು ಕೊಡತಕ್ಕಂಥ ಪವರ್‌ನ ವಿಚಾರದಲ್ಲಿ....

ಶ್ರೀ ವಾಟಾಳ್ ನಾಗರಾಜ್ : ವಿದ್ಯುತ್ ಮಂಡಳಿಯ ಪವರ್ ಹೋಗುವುದು, ಬರುವುದು ಒಂದೇ. ಹಾಗಾಗಿ ನೀವೆಲ್ಲರೂ ಒಂದು ರೀತಿಯಲ್ಲಿ ಸಿದ್ಧರಾಗಿರಬಹುದು. ನೀವುಗಳು ಅಂಥ ಒಂದು ವ್ಯವಸ್ಥೆಯಲ್ಲಿ ಇದ್ದೀರಿ. ನಮ್ಮ ಈ ಮಾತುಗಳನ್ನು ಮಾನ್ಯ ಸಿದ್ಧರಾಮಯ್ಯನವರು ಒಪ್ಪಿದ್ದೀರಿ ಎಂದು ಅರ್ಥ ಮಾಡೋಣವೇ? ನಿಮ್ಮ ಸರಕಾರವು ಮುಂದೆ ಬರುವುದಿಲ್ಲ. ಈ ದಳದ ಕತೆಯು ಮುಗಿಯಿತು ಎಂಬ ತೀರ್ಮಾನಕ್ಕೆ ನೀವೆಲ್ಲರೂ ಬಂದಿದ್ದೀರಿ. ಆ ತೀರ್ಮಾನಕ್ಕೆ ಬಂದಿಲ್ಲ ಎಂದಾದರೆ, ಈ ಬೆಲೆ ಏರಿಕೆಯನ್ನು ನೋಡಿ ಸುಮ್ಮನೆ ಕುಳಿತುಕೊಳ್ಳುತ್ತಾ ಇರಲಿಲ್ಲ....

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಯವರು) : ಈ ಸುಧಾರಣಾ ಕ್ರಮಗಳನ್ನು ತೆಗೆದುಕೊಂಡಿರುವುದು ಜನರು ನಮ್ಮನ್ನು ಮತ್ತೆ ಆಡಳಿತಕ್ಕೆ ತರಬೇಕೆಂಬ ಕಾರಣಕ್ಕಾಗಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಮಾತುಗಳನ್ನು ತಾವು ಎಲ್ಲಿಂದ ಮಾತನಾಡುತ್ತಿದ್ದೀರಿ?....

ಶ್ರೀ ಸಿದ್ಧರಾಮಯ್ಯ : ನನ್ನ ಗಂಟಲಿನಿಂದಲೇ ಮಾತನಾಡುವ ಸ್ವರ ಎಲ್ಲಿಂದ ಬರುತ್ತದೆಯೋ ಅಲ್ಲಿಂದ ಮಾತನಾಡುತ್ತಿದ್ದೇನೆ. ನಾವು ರೈತರುಗಳಿಗೆ ಹೆಚ್ಚು ಮತ್ತು

ಗುಣಮಟ್ಟದ ವಿದ್ಯುತ್‌ನ್ನು ಕೊಡಬೇಕೆಂಬ ಕಾರಣಕ್ಕಾಗಿ ಅನೇಕ ಸುಧಾರಣಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಕೇಬಿಗೆ ನಾವು ಪುನಶ್ಚೇತನ ಕ್ರಮವನ್ನು ತೆಗೆದುಕೊಂಡಿರುವುದರಿಂದ ಅನೇಕ ಸುಧಾರಣೆಗಳಾದವು. ರೈತರುಗಳಿಗೆ ದಿನಕ್ಕೆ 8 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡಬೇಕೆಂದು ಮಾಡಿದ್ದೇವೆ. ನಾವು ಜನರಿಗೆ ಅನುಕೂಲ ಮಾಡಿಕೊಡುತ್ತೇವೆ. ಜನರು, ರೈತರು ವಿದ್ಯುತ್ ದರವನ್ನು ಹೆಚ್ಚು ಮಾಡಿದ್ದೀರಿ, ಅದನ್ನು ಕಡಿಮೆ ಮಾಡಿ ಎಂದು ಕೇಳಲಿಲ್ಲ. ಅವರು ತಮಗೆ ಹೆಚ್ಚು ಕರೆಂಟ್ ಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ನೀವು ಮಾತ್ರ ಹೇಗೆ ಹೇಳುತ್ತಾ ಇದ್ದೀರಿ. ಒಟ್ಟಿನಲ್ಲಿ ಮುಂದಿನ ಚುನಾವಣೆಯಲ್ಲಿ ನಿಮ್ಮ ಸರಕಾರವಂತೂ ಅಧಿಕಾರಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾವು ಅಧಿಕಾರಕ್ಕೆ ಬರುವುದಿಲ್ಲ ಎಂದು ನೀವು ಹೇಗೆ ಹೇಳುತ್ತೀರಿ ?

ಶ್ರೀ ಸಿದ್ಧರಾಮಯ್ಯ : ಈ ರಾಜ್ಯದ ಜನರು ಯಾರ ಪರವಾಗಿ ಇದ್ದಾರೆ ಎಂಬುದು ನಮಗೆ ಗೊತ್ತಿದೆ. ಆದ್ದರಿಂದ ಮುಂದೆ ನಾವೇ ಅಧಿಕಾರಕ್ಕೆ ಬರುತ್ತೇವೆ. ಜನರಿಗೆ ನಮ್ಮ ಮೇಲೆ ವಿಶ್ವಾಸವಿದೆ.

ಶ್ರೀ ಡಿ. ವಿ. ಸದಾನಂದಗೌಡ : ರಾಮನಗರದಲ್ಲಿ ಚುನಾವಣೆಯಲ್ಲಿ ಯಾರು ಆರಿಸಿ ಬಂದರು ?

ಶ್ರೀ ಸಿದ್ಧರಾಮಯ್ಯ : ಅಲ್ಲಿ ಒಂದು ಕಡೆಯಲ್ಲಿ ಬೇರೆಯವರು ಆರಿಸಿ ಬಂದರೆ ಆಯಿತೇ?

ಶ್ರೀ ಎಂ. ಶ್ರೀನಿವಾಸ : ರಾಜ್ಯದಲ್ಲಿ ನಡೆದ ಐದು ಉಪಚುನಾವಣೆಗಳಲ್ಲಿ ನಿಮ್ಮ ಒಂದೂ ಸೀಟು ಬಂದಿಲ್ಲವಲ್ಲಾ?

Sri Siddaramaiah : your BJP candidates have lost thier deposits in all the three bye-elections. ನೀವು ಸ್ಪರ್ಧಿಸಿದಲ್ಲೆಲ್ಲಾ ಠೇವಣಿಯನ್ನು ಕಳೆದುಕೊಂಡಿದ್ದೀರಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಯಾವ ಘಳಿಗೆಯಲ್ಲಿ ಯಾರು ಅಧಿಕಾರಕ್ಕೆ ಬರುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ....

ಶ್ರೀ ಸಿ. ಬೈರೇಗೌಡ : ಗುಜರಾತ್‌ನಲ್ಲಿ ನಿಮ್ಮ ಸರಕಾರ ಏನಾಯಿತು ಎಂಬುದನ್ನು ಹೇಳಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ಸಲ ಮಾನ್ಯ ಮುಖ್ಯಮಂತ್ರಿಯವರು ಹಿಂದೆ ಜನತಾದಳ ಸರಕಾರ ಇದ್ದಾಗ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯವರಾಗಿದ್ದಾಗ ಮಾನ್ಯ ಜೆ. ಹೆಚ್. ಪಟೇಲ್‌ರವರು ಪವರ್ ಮತ್ತು ಅಬಕಾರಿ ಸಚಿವರಾಗಿ ಇದ್ದರು.

4.40.ಪಿ.ಎಂ

ಈಗಲೂ ಅವರು ಎಕ್ಸೈಸ್ ಅನ್ನು ಅವರು ಇಟ್ಟುಕೊಂಡಿದ್ದಾರೆ. ಮಾನ್ಯ ಶಾಣಪ್ಪನವರಿಂದ ಪುನಃ ಅವರಿಗೇ ಬಂದಿದೆ. ನಾವು ಅನೇಕ ಸಲ ಮಾತನಾಡುವಾಗ ವಿದ್ಯುತ್ ಕೊರತೆ ಇದೆ ಸರಿ ಇಲ್ಲ ಸಮರ್ಪಕವಾದ ಹಂಚಿಕೆ ಇಲ್ಲವೆಂದು ಹೇಳಿದಾಗ ಅವರು ಹೇಳುತ್ತಿದ್ದರು, ನೀವು ಪದೇ ಪದೇ ಪವರ್ ಬಗ್ಗೆ ಮಾತನಾಡಬೇಡಿ. ನೀವು ಪವರ್ ಅನ್ನು (ನನ್ನನ್ನು) ಮುಟ್ಟಿದರೆ ಶಾಕ್ ಹೊಡೆಯುತ್ತದೆ. ಇನ್ನೊಂದು ಎಕ್ಸೈಸ್ ಇದೆ ಅದನ್ನು ಮುಟ್ಟಿದರೆ ಅದು ಕಿಕ್ ಕೊಡುತ್ತದೆ. ನಿಮಗೆ ಶಾಕ್ ಬೇಕೋ ಕಿಕ್ ಬೇಕೋ ಎಂದು ಕೇಳಿದರು. ಈಗ ಅವರು ಜನರಿಗೆ ಶಾಕ್ ಕೊಟ್ಟಿದ್ದಾರೆ ಜನ ಅವರಿಗೆ ಕಿಕ್ ಕೂಡ ಕೊಡುತ್ತಾರೆ.

ಶ್ರೀ ಸಿದ್ಧರಾಮಯ್ಯ : ಕಳೆದ ಚುನಾವಣೆಯಲ್ಲಿ ಇದೆಲ್ಲಾ ಆಗಿರುವುದು. ಶಾಕ್ ಕಿಕ್ ಎಲ್ಲಾ ಆಗ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಅದು ರಿಪೀಟಾಗುತ್ತಿದೆ. ಚನ್ನಗಿರಿಯಲ್ಲಿ ನಿನ್ನೆ ಮೂರು ತಾಲ್ಲೂಕು ಪಂಚಾಯತಿಯ ಬೈ ಎಲೆಕ್ಷನ್ ಆಯಿತು ಮೂರರಲ್ಲಿ ಕೂಡ ಸೋತಿದ್ದಾರೆ. ಕೊನೆಗೆ ಕಾಂಗ್ರೆಸ್ ಬಂತು. ಈಗ ಕಿಕ್ ಕೊಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ರಾಮನಗರದ ಬಗ್ಗೆ ಹೇಳುತ್ತಿದ್ದಾರೆ. ಆಕಸ್ಮಿಕವಾಗಿ ರಾಮನಗರದ ಚುನಾವಣೆಯಲ್ಲಿ ಗೆದ್ದಿದ್ದು ಕರ್ನಾಟಕವೇ ತಮ್ಮ ಜೇಬಿಗೆ ಬಂತು ತಿಳಿದುಕೊಂಡಿದ್ದಾರೆ. ಅದೆಲ್ಲಾ ಆಗುವುದಿಲ್ಲ. ಜನರು ನೋಡುತ್ತಿದ್ದಾರೆ.

ಶ್ರೀ ಬಿ. ಬಿ. ಶಿವಪ್ಪ : ಮುಂದಿನ ಚುನಾವಣೆಗೆ ಇವೆರಡೂ ಇಲ್ಲದ ಹಾಗೆ ಜನ ಮಾಡಿ ಬಿಡುತ್ತಾರೆ. ಇವರು ಎಲ್ಲಿ ಅನುಭವಿಸುವುದು?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಿದ್ದರಾಮಯ್ಯನವರೇ ತಾವು ಏಕೆ ನಾವು ಅಧಿಕಾರಕ್ಕೆ ಬರುವುದಿಲ್ಲವೆಂದು ಜ್ಯೋತಿಷ್ಯ ನುಡಿಯುತ್ತಿದ್ದೀರಾ? ಇಲ್ಲ, ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ. ಯಾವುದೋ ಒಂದು ಯೋಚನೆಯಲ್ಲಿ ಹೇಳುವುದಕ್ಕೆ ಹೋಗಬೇಡಿ. ಬರುವುದಿಕ್ಕಾಗುವುದಿಲ್ಲವೆಂದು ಹೇಳಲೇಬೇಡಿ ನೀವು ಅದರ ಬಗ್ಗೆ ಚಿಂತನೆ ಮಾಡಬೇಡಿ.

ನನ್ನ ಪಕ್ಷದ ಬಗ್ಗೆ ಅಷ್ಟು ಸುಲಭವಾಗಿ ತಿಳಿಯಬೇಡಿ ಅಷ್ಟು ಲಘೂವಾಗಿ ನನ್ನ ಪಕ್ಷವನ್ನು ತಿಳಿಯಬೇಡಿ. ರಾಜ್ಯದ ಜನ ಸಮಗ್ರ ಕನ್ನಡಿಗರು ನೀವು ಮಾಡತಕ್ಕಂತಹ ಅನ್ಯಾಯಗಳ ಬಗ್ಗೆ ಒಂದು ನಿಮಿಷ ಚಿಂತನೆ ಮಾಡಿದರೆ ನನ್ನ ಪಕ್ಷ ಅಧಿಕಾರಕ್ಕೆ ಬರುತ್ತದೆ. ಅದರ ಬಗ್ಗೆ ಚಿಂತನೆ ಮಾಡಬೇಕಾಗಿಲ್ಲ. ಆದರ ಬಗ್ಗೆ ನಾನು ಛಲ ಬೇಕಾದರೂ ಮಾಡುತ್ತೇನೆ. ಮಾನ್ಯ ಯಡಿಯೂರಪ್ಪನವರು ಮುಖ್ಯ ಮಂತ್ರಿಯಾಗಬೇಕೆಂದು ಆಸೆ ಇಟ್ಟುಕೊಂಡಿದ್ದಾರೆ ಸಂತೋಷ ಮಾನ್ಯ ಖರ್ಗೆಯವರೂ ಕೂಡ ಆಸೆ ಇಟ್ಟುಕೊಂಡಿದ್ದಾರೆ ಸಂತೋಷ. ಮಾನ್ಯ ಧರ್ಮಸಿಂಗ್‌ರವರು ಇಟ್ಟುಕೊಂಡಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರೇ : ತಾವು ಆ ಆಸೆ ಇಟ್ಟುಕೊಂಡಿದ್ದೀರಿ ಸಂತೋಷ. ಅದೇ ರೀತಿ ನಾನೂ ಕೂಡ ಆಸೆ ಇಟ್ಟುಕೊಂಡಿದ್ದೇನೆ. ಅಥವಾ ನೀವು ಯಾರೂ ಮೆಜಾರಿಟಿ ಬರಲಿಲ್ಲವೆಂದು ಇಟ್ಟುಕೊಳ್ಳಿ ಆಗ ನೀವೆಲ್ಲಾ ಸೇರಿ ನನ್ನನ್ನೇ ಮುಖ್ಯ ಮಂತ್ರಿಯನ್ನಾಗಿ ಮಾಡಬಹುದು. ಅಂತಹ ಪರಿಸ್ಥಿತಿ ಬಂದರೂ ಬರಬಹುದು. ಇದನ್ನು ಯಾರೂ ಹೇಳುವುದಕ್ಕಾಗುವುದಿಲ್ಲ. ಯಾವ ಸಮಯದಲ್ಲಿ ಏನಾಗುತ್ತೇವೆಂದು ಲಘುವಾಗಿ ಏನೂ ಹೇಳುವುದಕ್ಕಾಗುವುದಿಲ್ಲ. ಎಷ್ಟು ರಾಜ್ಯಗಳಲ್ಲಿ ಏನೇನು ಆಗಿದೆ ವಿಚಾರ ಮಾಡಿ. ಎಲ್ಲರೂ ಒಪ್ಪತಕ್ಕಂತಹ ವಾಟಾಳ್ ನಾಗರಾಜ್‌ರವರೇ ಸರಿ ಎಂದು ಹೇಳಬಹುದು. ಇದನ್ನು ತಳ್ಳಿ ಹಾಕತಕ್ಕಂಥಾದ್ದಲ್ಲ. ಮಾನ್ಯ ಗುಜ್ರಾಲ್‌ರವರ ಪರಿಸ್ಥಿತಿ ಏನು? ಬೇರೆ ಬೇರೆ ರಾಜ್ಯಗಳಲ್ಲಿ ಏನು ಪರಿಸ್ಥಿತಿ ಇದೆ ಆದ್ದರಿಂದ ಇದನ್ನು ತಳ್ಳಿ ಹಾಕುವುದಕ್ಕಾಗುವುದಿಲ್ಲ. ಯಾವ ಘಳಿಗೆಯಲ್ಲಿ ಏನಾಗುತ್ತದೆಂದು ಯಾರೂ ಹೇಳಲಿಕ್ಕಾಗುವುದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾವು ಮಾನ್ಯ ವಾಟಾಳ್‌ರವರಿಗೆ ಅವಕಾಶ ಕೊಡುವುದಿಲ್ಲ. ಆಗ ಅಂತಹ ಸಂದರ್ಭ ಬಂದರೆ : ಶೇಕಡ 33 ಪರ್ಸೆಂಟ್ ಮೀಸಲಾತಿ ಇರುವ ಮಹಿಳೆಯರಾದ ನಾವು ಸಿದ್ಧವಾಗಿರುತ್ತೇವೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಸರಕಾರ ಬಂದರೆ ಮಹಿಳೆಯರನ್ನೇ ಉಪ ಮುಖ್ಯ ಮಂತ್ರಿಯನ್ನಾಗಿ ಮಾಡುತ್ತೇನೆ ಅದರೆ ಬಗ್ಗೆ ತಾವು ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಕೊನೆಯದಾಗಿ ಕೆಲವು ಮಾತನ್ನು ಹೇಳುತ್ತೇನೆ. ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಎಂಬ ಯೋಜನೆ ಅವರ ಕಾಲದಲ್ಲಿ ಬಂತು. ಮಾನ್ಯ ದೇವರಾಜ ಅರಸರಿಗೆ ಆ ಜನಾಂಗದ ಬಗ್ಗೆ ಬಡವರ ಬಗ್ಗೆ ದಲಿತರ ಬಗ್ಗೆ ಚಿಂತನೆ ನಡೆಸಿ ರಾಜ್ಯದಲ್ಲಿ ದೇಶದಲ್ಲಿ ಅವರನ್ನು ಎತ್ತರವಾಗಿ ಮೇಲಕ್ಕೆ ಎತ್ತಿದಂತಹ ಮಹಾನ್ ವ್ಯಕ್ತಿ. ಇದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ನಾವು ಇಂದು ಅವರನ್ನು ನೆನೆಸಿಕೊಳ್ಳಬೇಕಾಗಿದೆ. ಅವರು ಇದಕ್ಕೆ ಭಾಗ್ಯಜ್ಯೋತಿ ಹೆಸರು ಇಡಬೇಕಾದರೆ ಅನೇಕರನ್ನು ಕೇಳಿದರು. ಬಹಳ ಚಿಂತನೆ ಮಾಡಿ ಭಾಗ್ಯಜ್ಯೋತಿ, ಕುಟೀರ ಜ್ಯೋತಿ

ಎಂಬ ಹೆಸರನ್ನು ಇಟ್ಟಿದ್ದಾರೆ. ಇವತ್ತು ಈ ಭಾಗ್ಯಜ್ಯೋತಿ ಎನ್ನುವ ಪದಕ್ಕೆ ಅಪಚಾರವೆಸಗುವಂತಹ ರೀತಿಯಲ್ಲಿ ದರವನ್ನು ಏರಿಸಿರುವುದರಿಂದ ಅದು ಭಾಗ್ಯಜ್ಯೋತಿಯಾಗದೆ ನಿರ್ಭಾಗ್ಯಜ್ಯೋತಿಯಾಗಿದೆ. ಆ ರೀತಿಯಲ್ಲಿ ತಾವು ನಡೆದು ಕೊಂಡಿರತಕ್ಕಂಥದ್ದು ಅತ್ಯಂತ ಅವಹೇಳನಕರವಾಗಿದೆ. ರಾತ್ರಿ ದೀಪವನ್ನು ಹಚ್ಚುವಾಗ ಲೈಟ್ ಹಾಕುವಾಗ ನಮ್ಮಪ್ಪನ ಸರಕಾರ ನಮಗೆ ದೀಪ ಕೊಟ್ಟಿತು ಎಂದು ಅತ್ಯಂತ ಪ್ರೀತಿಯಿಂದ ಅವರನ್ನು ನೆನೆಯುತ್ತಿದ್ದರು. ಈಗ ನಿಮಗೆ ಕೆಟ್ಟ ಭಾಷೆಯಲ್ಲಿ ಶಾಪ ಹಾಕುತ್ತಾರೆ. ಆ ಜನರ ಶಾಪವೇ ಈ ಸರಕಾರ ತನ್ನ ಅಧಿಕಾರವನ್ನು ಕಳೆದುಕೊಳ್ಳತಕ್ಕಂಥ ದಾರಿಗೆ ಹೋಗುತ್ತೀರಿ ಇಡೀ ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ನೇರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನೇರವಾಗಿ ಹೇಳುತ್ತಿದ್ದೇನೆ, ದಿನಾಂಕ 30-6-97ರ ನಿಮ್ಮ ಆದೇಶವೇನು ಇದೆ ಅದನ್ನು ಹಿಂದಕ್ಕೆ ಪಡೆಯುವ ತೀರ್ಮಾನಕ್ಕೆ ತಾವು ಬರಬೇಕು. ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ತಾವು ಮಾಡಿಕೊಳ್ಳಬೇಡಿ. ಹಿಂದಕ್ಕೆ ಪಡೆಯುವುದಾದರೆ ನಾವು ನೀವು ಕುಳಿತು ಚರ್ಚೆ ಮಾಡಿ ತೀರ್ಮಾನ ಮಾಡೋಣ. ನಾವು ಹಿಂದಕ್ಕೆ ಪಡೆಯುವುದೇ ಇಲ್ಲವೆಂದಾದರೆ ನಮ್ಮ ದಾರಿ ನಮಗೆ ನಿಮ್ಮ ದಾರಿ ನಿಮಗೆ ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಬಿ. ಶಿವಕುಮಾರ್ : ನನ್ನ ಮನವಿ ಇಷ್ಟೆ. ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಬೆಳಿಗ್ಗೆಯಿಂದ ಮಾನ್ಯ ವಿರೋಧ ಪಕ್ಷದ ನಾಯಕರು, ಸದಸ್ಯರು ಮಾತನಾಡುತ್ತಿದ್ದಾರೆ ಮಧ್ಯೆ ಮಧ್ಯೆ ನಮ್ಮ ಸಚಿವರು ಕ್ಲಾರಿಫಿಕೇಷನ್ ಕೊಡುತ್ತಿದ್ದಾರೆ. ಇದರ ಬಗ್ಗೆ ಮತ್ತಷ್ಟು ಬೆಳಕು ಚೆಲ್ಲತಕ್ಕಂತಹ ವಿಚಾರಗಳನ್ನು ಹೇಳಿದರೆ ನಾವೂ ಕೂಡ ನಿಮ್ಮಿಂದ ಹೊಸ ವಿಚಾರಗಳನ್ನು ಕೇಳಿ ತಿಳಿಯಲು ಆಸಕ್ತಿ ಹೊಂದಿದ್ದೇವೆ. ಅದೇ ರಾಗ ಅದೇ ಹಾಡು ಬೇಡವೆಂದು ಹೇಳಲು ಇಷ್ಟಪಡುತ್ತೇನೆ.

+ ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ (ಬಾಗೆಪಲ್ಲಿ) : ಮಾನ್ಯ ಅಧ್ಯಕ್ಷರೇ ನಮ್ಮ ಸರಕಾರದವರು ರೇಟ್ ಜಾಸ್ತಿ ಮಾಡಿ ಕರ್ನಾಟಕ ರಾಜ್ಯಕ್ಕೆ ಬೆಳಕು ಕೊಡುತ್ತೇವೆಂದು ಹೇಳುತ್ತಿದ್ದಾರೆ ಅದು ಅವರ ಅಭಿಪ್ರಾಯ. ನಾವು ನಿಲುವಳಿ ಸೂಚನೆ ಮಂಡಿಸಿ ಅದಕ್ಕೆ ತಾವು ಒಪ್ಪಿಗೆ ಕೊಡಬೇಕು ಎಂಬುದಕ್ಕೆ ಏನು ಕಾರಣ ಎಂಬುದಕ್ಕೆ ಎರಡು ವಿಚಾರಗಳನ್ನು ಮಾತ್ರ ನಾನು ಇಲ್ಲಿ ಹೇಳಬಯಸುತ್ತೇನೆ. ದಿನಾಂಕ 30-6-97 ರಂದು ಸರಕಾರ ಆದೇಶ ಹೊರಡಿಸುತ್ತಾ ಕೆ.ಇ.ಬಿ. ಇಲಾಖೆ ಬಹಳ ನಷ್ಟ ಅನುಭವಿಸುತ್ತಿದೆ ಎಂದು ಸಮರ್ಥನೆ ಮಾಡಿದ್ದಾರೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ ಒಂದು ಹೆಚ್.ಪಿ.ಗೆ ಒಂದು ವರ್ಷಕ್ಕೆ ನೂರು ರೂಪಾಯಿ ಮಾಡಬೇಕೆಂಬ ಅಭಿಪ್ರಾಯ ಸಮಿತಿಗೆ ಇರಲಿಲ್ಲವೆಂದು ಹೇಳಿದ್ದಾರೆ. ಮತ್ತು ಇದು ನನ್ನ ವೈಯಕ್ತಿಕ ಅಭಿಪ್ರಾಯವೆಂದು ಕೂಡ ಹೇಳಿದ್ದಾರೆ. ನಾನು ಆ ವರದಿಯನ್ನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಇಷ್ಟಪಡುತ್ತೇನೆ.

"The joint committee of Karnataka Legislature on working of Karnataka Electricity Board and Karnataka Power Corporation Ltd. The report was presented on 31-3-1994.

94. ರಲ್ಲಿ ಈ ವರದಿ ಮಂಡನೆಯಾಗಿದೆ ಇದರಲ್ಲಿ ಪುಟ 127ರಲ್ಲಿ

"Chapter - 9-24 - The Committee has examined the entire problem in detail in many of the recent meetings and it felt that the K.E.B. Should not be as far as possible under the mercy of the World Bank....

ಇದರ ಹಿನ್ನೆಲೆ ಎಲ್ಲಾ ನಾನು ಹೇಳುವುದಕ್ಕೆ ಹೋಗುತ್ತಿಲ್ಲ.

".... or its subsidiary. But KEB is not in a position to take up power system developmental works in rural areas planned earlier under the World Bank assistance, for the reasons alredy explained. Howerver, the committee strongly feels that system improvement in rural areas should go on. Hence, in the best interest of the irrigation pumpsets consumers in the state majority of the Members of this Committee recommends to the State that to government to levy flat rate tariff of Rs. 100 per HP per year to the pumpsets operating up to 10 HP subject to following conditions.

ಎಂದು ಮುಂದುಗಡೆ ಕಂಡೀಷನ್ಸ್ ಹಾಕಿದ್ದಾರೆ. ಮಾನ್ಯ ಸದಸ್ಯರು ಅದು ನನ್ನ ವೈಯಕ್ತಿಕ ಅಭಿಪ್ರಾಯವಾಗಿತ್ತು ಎಂದು ಹೇಳುವುದು ಸರಿಯಲ್ಲ. ಸಮಿತಿಯಲ್ಲಿನ ಬಹುತೇಕ ಸದಸ್ಯರು ಒಪ್ಪಿ ಈ ವರದಿಯನ್ನು ಈಗಾಗಲೇ ಕೊಟ್ಟಿದ್ದಾರೆ. ಮಾನ್ಯಸದಸ್ಯರು ಹೇಳಿರುವುದು ರೆಕಾರ್ಡಿಗೆ ಹೋಗಿದೆ. ಆ ರೆಕಾರ್ಡಿನಲ್ಲಿ ಸರಿಯಾಗಿ ಹೋಗಬೇಕು ಎನ್ನುವ ಕಾರಣದಿಂದ ಇದನ್ನು ಸಭೆಯ ಮುಂದೆ ತಿಳಿಸಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಸಬ್ಜೆಕ್ಟ್ ಟು ಫಾಲೋಯಿಂಗ್ ಕಂಡೀಷನ್ಸ್‌ನಲ್ಲಿ ಕೂಡ ನಾವು ಏನೇನು ಹೇಳಿದ್ದೇವೆಂಬುದನ್ನು ತಾವು ಹೇಳಬೇಕು. Reading a paragraph of the committe report is not a sufficient matter before the House.

ಏನೇನು ಮಾಡಿದ ಮೇಲೆ ನೀವು ಟ್ಯಾರಿಫ್ ಹೆಚ್ಚು ಮಾಡಬಹುದೆಂದು ಚರ್ಚೆಯಾಗಿದೆ. I have got this in my memory. ನಾವು ಅವತ್ತು ಚರ್ಚೆ ಮಾಡಬೇಕಾದರೆ ಮೀಟರ್ ಹಾಕಿಸಬೇಕು ಫ್ಲಾಟ್ ರೇಟಿಂಗ್ ಅಗ್ರಿ ಮಾಡುವ ಕೆಲಸಕ್ಕೆ ಮೊದಲೇ ನಾವು ಹೇಳಿದ್ದೇವೆ. ಅಂಡರ್ ಎಲೆಕ್ಟ್ರೀಸಿಟಿ ಮ್ಯಾನ್ಯುಯಲ್ ನೀವು ಕ್ವಾಲಿಟಿ ಪವರ್ ಕೊಡುತ್ತಿಲ್ಲ Uninterrupted ಪವರ್ ಕೊಡುತ್ತಿಲ್ಲ ಅದೆಲ್ಲವನ್ನೂ ಮಾಡಿದ ಮೇಲೆ ತಾವು ನೂರು ರೂಪಾಯಿ ಚಾರ್ಜ್ ಮಾಡಬಹುದೆಂದು ನಾವು ಹೇಳಿದ್ದೇವೆ. ತಾವು 300 ರೂಪಾಯಿ ಮಾಡಿದ್ದೀರಿ ಅವರು ಒತ್ತಡ ತಂದ ಮೇಲೆ ನೂರು ರೂಪಾಯಿಗೆ ಇಳಿಸಿದ್ದೀರಿ. This government never marched on the report of that Committee. ನಿವೇನು ಆ ಸಮಿತಿಯ ವರದಿಯನ್ನು ಆಧಾರವಾಗಿಟ್ಟುಕೊಂಡು ಮುಂದುವರಿಯಲಿಲ್ಲ. 300 ರೂಪಾಯಿ ಮಾಡಿದಿರಿ ಒತ್ತಡ ಬಂದ ಮೇಲೆ ನೂರು ರೂಪಾಯಿಗೆ ತಂದಿರಿ. ಸಮಿತಿಯಲ್ಲಿ ನೂರು ರೂಪಾಯಿಯವರೆಗೆ ಮಾಡಬಹುದು, Provided ಎಂದು ನಾವು ಮುಂದೆಹಾಕಿರುವ ಕಂಡೀಷನ್ಸ್ ಎಲ್ಲಾ ಒಪ್ಪಿದ ಮೇಲೆ.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ) : ಕೆ.ಇ.ಬಿ. ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಇದೆ. ಈ ದರವನ್ನು ಹೆಚ್ಚಿಗೆ ಮಾಡತಕ್ಕಂಥ ಅನಿವಾರ್ಯವಾದ ಸಂದರ್ಭದಲ್ಲಿ ಇವರು ರೇಟನ್ನು ಹೆಚ್ಚಿಗೆ ಮಾಡಿದ್ದಾರೆ. ಯಾವರೀತಿ ಸಂಕಷ್ಟದಲ್ಲಿದೆ ಇವರು ಕೊಡತಕ್ಕಂಥ ಕಾರಣ ನಿಜವಾಗಿಯೂ ಸಮರ್ಥನಿಯವಾಗಿದೆಯೇ ಎನ್ನತಕ್ಕಂಥದ್ದು ನನ್ನ ಪ್ರಶ್ನೆ. ತಮ್ಮ ಗಮನಕ್ಕೆ ತರತಕ್ಕಂಥದ್ದು, ದಿನಾಂಕ : 22-5-1995ರಂದು ಕೆ. ಇ.ಬಿ.ಅಧ್ಯಕ್ಷರಾದ ಘೋರೆಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆಯಲ್ಲಿ ಎರಡು ಮುಖ್ಯವಾದಂಥ ಅಂಶಗಳು ಇವೆ. ಒಂದು, ಕೆಲವು ವರ್ಷಗಳ ಹಿಂದೆ ಪರಿಸ್ಥಿತಿ ಉತ್ತಮವಾಗಿತ್ತು. ಕೈಗಾರಿಕಾ ಘಟಕಗಳ ಹಳೆಯ ಬಾಕಿ ಪಾವತಿಸದೆ ಇರುವ ಕಾರಣ ಮಂಡಳಿ ಕಷ್ಟಕ್ಕೀಡಾಗಿದೆ. ಇಕ್ಕಟ್ಟಿನ ಪರಿಸ್ಥಿತಿಯಿಂದ ಹೊರಗೆ ಬರಲು ಬಾಕಿ ಹಣವನ್ನು ಪ್ರಾಮಾಣಿಕವಾಗಿ ಪಾವತಿಸಲು ಅವರು ಉದ್ಯಮಿಗಳಲ್ಲಿ ಮನವಿ ಮಾಡಿದ್ದಾರೆ. ಅಂದರೆ ಉದ್ಯಮಿಗಳು ಕೆ.ಇ.ಬಿ.ಗೆ. ಬಾಕಿ ಕೊಡತಕ್ಕಂಥದ್ದನ್ನು ಕಟ್ಟದೆ ಇರುವುದಕ್ಕೋಸ್ಕರ ಕೆ.ಇ.ಬಿ. ಸಂಕಷ್ಟದಲ್ಲಿದೆ. ಅದಕ್ಕೋಸ್ಕರ ಇದು ದಿವಾಳಿ ಆಗತಕ್ಕಂಥ ಪರಿಸ್ಥಿತಿ ಇದೆ. ಮಾನ್ಯ ಮಂತ್ರಿಯವರು ಇನ್ನೂ ಒಂದು ಕಡೆ ಹೇಳುತ್ತಾರೆ, ಈ ಬಿಲ್ಲಿನ ದೋಷ ಅವರು ಹೇಳತಕ್ಕಂಥದ್ದು. ಮಾನ್ಯ ಘೋರೆಯವರು

ವಿಧಾನಸೌಧದಲ್ಲಿ ದೋಷಪೂರಿತವಾದಂಥ ಮೀಟರ್‌ಗಳಿಂದ ಬಿಲ್ಲಿಂಗ್‌ನಲ್ಲಿ ವ್ಯತ್ಯಾಸವಾಗುತ್ತಿತ್ತು. ಹೊಸ ಮೀಟರ್‌ಗಳನ್ನು ಹಾಕಿದ ನಂತರ ಈಗ ಪ್ರತಿ ತಿಂಗಳು ಒಂದು ಲಕ್ಷದ ಮೊತ್ತದ ಬಿಲ್ಲು ಬರುತ್ತದೆ ಎನ್ನುವ ವಿವರವನ್ನು ಘೋರೆಯವರೇ ಹೇಳಿದ್ದಾರೆ. ಕೆ.ಇ.ಬಿ. ನಷ್ಟ ಆಗಲಿಕ್ಕೆ ಕೆ.ಇ.ಬಿ.ಯವರೇ ಕಾರಣ, ಸರ್ಕಾರವೇ ಕಾರಣ ಹೊರತು ಈ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೈತರು, ಮಧ್ಯಮ ವರ್ಗದವರು, ಭಾಗ್ಯಜ್ಯೋತಿಯನ್ನು ಉಪಯೋಗಿಸುವ ಬಡವರೇ ಆಗಲಿ ಕಾರಣ ಅಲ್ಲ. ಕೆ.ಇ.ಬಿ. ಯನ್ನು ಕಷ್ಟಕ್ಕೆ ಈಡುಮಾಡಲಿಕ್ಕೆ ಹೇಳತಕ್ಕಂಥ ಅಂಶವನ್ನು ಸ್ಪಷ್ಟವಾಗಿ ಅವರು ಒಪ್ಪಿಕೊಂಡಿರತಕ್ಕಂಥ ಕಾರಣಕ್ಕೋಸ್ಕರ ಇವತ್ತು ದರವನ್ನು ಹೆಚ್ಚು ಮಾಡಿ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೈತರು ವಿದ್ಯುತ್ ಬಾಳಿಕೆ ಮಾಡುವ ಮಧ್ಯಮ ಕುಟುಂಬದವರು ಬಡ ಜನರ ಮೇಲೆ ಹೊರೆ ಹಾಕಲಿಕ್ಕೆ ಅವರಿ ಯಾವ ರೀತಿಯಾದರೂ ನೈತಿಕ ಹಕ್ಕಿಲ್ಲ. ಮತ್ತು ಕಾನೂನು ಕುರುಡು ಇಲ್ಲ. ಏಕೆಂದರೆ ಇದು ಅವರು ಒಪ್ಪಿಕೊಂಡಿರತಕ್ಕಂಥ ಅಂಶ. ಎರಡನೇ ಅಂಶ ಸನ್ಮಾನ್ಯ ಅಧ್ಯಕ್ಷರೇ, ಇವರು ಏನು ಹೇಳುತ್ತಿದ್ದಾರೆಂದರೆ, ದಿನಾಂಕ : 30-7-1996ರಂದು ಕೊಟ್ಟಿರತಕ್ಕಂಥ ಸದನ ಸಮಿತಿ ವರದಿಯಲ್ಲಿ ಪ್ರತಿವರ್ಷ ದರವನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ ಆ ಹಿನ್ನೆಲೆಯಲ್ಲಿ ನಾವು ಮಾಡಿದ್ದೇವೆಂದು ಹೇಳತಕ್ಕಂಥದ್ದು ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ನಾನು ಮೊಟ್ಟಮೊದಲನೆಯದಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಸದನವನ್ನು ತಪ್ಪುದಾರಿಗೆ ಎಳೆಯತಕ್ಕಂಥ ಪ್ರಯತ್ನವನ್ನು ಮಾಡುತ್ತಿರತಕ್ಕಂಥ ಯಾರು ಅಧಿಕಾರಿಗಳಿದ್ದಾರೆ ಅವರ ಮೇಲೆ ಹಕ್ಕುಚ್ಯುತಿ ಮಂಡನೆ ಮಾಡಿ ಅವರನ್ನು ಈ ಸದನಕ್ಕೆ ಕರೆಯಿಸಿ ವಿಚಾರಣೆ ಮಾಡಬೇಕೆಂದು ನಾನು ಹೇಳುತ್ತೇನೆ. ಮೂರನೇ ಅಂಶ, ಈ ಸರ್ಕಾರ ದಿನಾಂಕ 30-6-1997ರಂದು ಒಂದು ಆದೇಶವನ್ನು ಹೊರಡಿಸಿ ಕೆ.ಇ.ಬಿ. ದರವನ್ನು ಹೆಚ್ಚು ಮಾಡಿ ಈ ಸದನಕ್ಕೆ ಹಕ್ಕುಚ್ಯುತಿ ಮಾಡಿದೆ ಎಂದು ನಾನು ಹೇಳುತ್ತೇನೆ. ಇನ್ನೂ ಪುಟ 28 ರಲ್ಲಿ ಎರಡನೆ ಪಾಯಿಂಟ್ ಏನು ಹೇಳುತ್ತದೆ ಎಂದರೆ "Government may release subsidy to the KEB every year for the subsidised power supply being given to the IP Sets and Bhagyjyothi and kutirjythi..." ಭಾಗ್ಯಜ್ಯೋತಿ, ಕುಟೀರಜ್ಯೋತಿ ಎಂದು ಹೇಳತಕ್ಕಂಥದ್ದನ್ನು ಸ್ಪಷ್ಟವಾಗಿ ನಮ್ಮ ವರದಿಯಲ್ಲಿ ಹೇಳಿದ್ದಾರೆ. ಆದರೆ ಇವರು ದಿನಾಂಕ 30-6-1996-97ರಲ್ಲಿ ಹೊರಡಿಸಿರತಕ್ಕಂಥ ಆದೇಶದಲ್ಲಿ ಏನು ಹೇಳಿದ್ದಾರೆಂದರೆ ಭಾಗ್ಯಜ್ಯೋತಿ, ಕುಟೀರಜ್ಯೋತಿ ಯೋಜನೆಯ ಫಲಾನುಭವಿಗಳ ಕುಟುಂಬಗಳಿಗೆ ಪ್ರತಿತಿಂಗಳು 3 ರೂ 50. ಪೈಸೆ. (3.5 ದರವನ್ನು) ಹಾಕಬೇಕೆಂದು ಹೇಳಿದ್ದಾರೆ.

ಇದು ಸ್ಪಷ್ಟವಾಗಿ ಸದನಕ್ಕೆ ಮಾಡಿರತಕ್ಕಂಥ ಅಪಮಾನ. ಸಮಿತಿಯ ವರದಿಗೆ ಮಾಡಿರತಕ್ಕಂಥ ಅಪಮಾನ ಆದ್ದರಿಂದ ಸರ್ಕಾರ ಈ ಸದನಕ್ಕೆ ಹಕ್ಕುಚ್ಯುತಿ ಮಾಡಿದೆ ಅಂತ ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ಇದಕ್ಕೆ ನಾನು ಸ್ಪಷ್ಟವಾಗಿ ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ ಇದು ಹಕ್ಕುಚ್ಯುತಿಯ ಪ್ರಶ್ನೆ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇನ್ನೂ ಮೂರನೇಯ ಅಂಶ. "Government may direct the KEB to conduct special drive to recover the outstanding revenue arrears within six months. the Government of Karnataka may clear dues outstanding against Urban Water Supply Boards, BWSSB and other Local bodies etc.

ಇದು ನಮ್ಮ ಸಮಿತಿಯ ರೆಕಮೆಂಡೆಷನ್ ಅಂದರೆ, ನಾವು ಇಷ್ಟು ದಿವಸಗಳ ಒಳಗಡೆ 6 ತಿಂಗಳ ಒಳಗಡೆ ಬಾಕಿ ಕಲೆಕ್ಟ್ ಮಾಡಬೇಕೆಂದು ಹೇಳಿ ಸ್ಪಷ್ಟವಾಗಿ ಸಮಿತಿಯ ರೆಕಮೆಂಡೆಷನ್ ಮಾಡಿದೆ. ಆದರೆ ಸಾನ್ಮಾನ್ಯ ಅಧ್ಯಕ್ಷರು ಏನು ಹೇಳಿಕೆ ಕೊಟ್ಟಿದ್ದಾರೆ ಎಂದರೆ ಅಧ್ಯಕ್ಷರೆ, ಈಗ ವಿದ್ಯುತ್ ಹಣ ದರದ ಏರಿಕೆಯಿಂದಾಗಿ ನಮಗೆ 600 ಕೋಟಿ ರೂಪಾಯಿ ಆದಾಯ ಬರುತ್ತದೆ. ದರದ ಟಿಏರಿಕೆಯಿಂದಾಗಿ 600 ಕೋಟಿ ರೂಪಾಯಿ ದರ ಏರಿಕೆಯಿಂದ ನಮಗೆ ಹಣ ಬರುತ್ತದೆಂದು ಹೇಳಿದ ಇವರು ಇವತ್ತು ಏನು ಹೇಳುತ್ತಿದ್ದಾರೆಂದರೆ 250 ಕೋಟಿ ರೂಪಾಯಿ ಮಾತ್ರ ನಮಗೆ ಬರುತ್ತಾ ಇದೆ ಎಂದು ಹೇಳಿದ್ದಾರೆ. ಅಂದರೆ ಕೆ.ಇ.ಬಿ. Clearly violates the direction of the Committee - recommendations of the Committee, which has told that within six months, all arrears has to be cleared. 6 ತಿಂಗಳು ಅಲ್ಲ, 6 ತಿಂಗಳಾದ ಒಂದು ವರ್ಷದ ನಂತರ ಕೂಡ ಬಾಕಿ ವಸೂಲಿ ಆಗಿಲ್ಲವೆಂದು ಹೇಳಿ ಬಹಿರಂಗವಾಗಿ ಕೆ.ಇ.ಬಿಯವರು ಹೇಳುತ್ತಾರೆ. ಆದ್ದರಿಂದ ಕಮೀಟಿ ಹೇಳಿರತಕ್ಕಂಥ ಎಲ್ಲಾ ಅಂಶಗಳನ್ನು ಉಲ್ಲಂಘನೆ ಮಾಡಿರತಕ್ಕಂಥ ಕೆ.ಇ.ಬಿ. ಅಧ್ಯಕ್ಷರಿಂದ ಹಕ್ಕುಚ್ಯುತಿ ಆಗುತ್ತದೆ, ಅವರನ್ನು ಈ ಸದನಕ್ಕೆ ಕರೆಸಬೇಕೆಂದು ನಾನು ಹೇಳುತ್ತೇನೆ. ಕೊನೆಯದಾಗಿ ಇವರು ಯಾವ ಕಾರಣವನ್ನು ಕೊಟ್ಟು ದರವನ್ನು ಏರಿಕೆ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೋ ಆ ಕಾರಣ ಸಂಪೂರ್ಣವಾಗಿ ಸಮರ್ಥನೆ ಆಗಿಲ್ಲ. ನನ್ನ ಪ್ರಕಾರ ಅಲ್ಲಲ್ಲಿ ಅವರ ಪ್ರಕಾರ ಸಮರ್ಥನೆ ಆಗಿಲ್ಲ. ಆದ್ದರಿಂದ ದರ ಏರಿಕೆಯನ್ನು ಮಾಡಲಿಕ್ಕೆ ಇವರು ಹೊರಡಿಸಿರತಕ್ಕಂಥ ಆದೇಶವನ್ನು ತಕ್ಷಣ ವಾಪಸ್ಸು ಪಡೆಯಬೇಕು. ಎರಡನೆಯ ಅಂಶ ನಾನು ಹೇಳತಕ್ಕಂಥದ್ದು ಸದನ ಮತ್ತು ಸದನ ಸಮಿತಿ ಎರಡು ಈ ಸಮಿತಿಯು ಕೊಟ್ಟಿರತಕ್ಕಂಥ ಎಲ್ಲಾ ಆದೇಶಗಳನ್ನು ಎಲ್ಲಾ ಸೂಚನೆಗಳನ್ನು ಸರ್ಕಾರ ಮತ್ತು

ಕೆ.ಇ.ಬಿ ಧಿಕ್ಕಾರ ಮಾಡಿರುವುದರಿಂದ ಇವರ ವಿರುದ್ಧ ಹಕ್ಕುಚ್ಯುತಿ ಆಗುತ್ತದೆ. ಸದನಕ್ಕೆ ಆ ಹಕ್ಕುಚ್ಯುತಿ ಅಡಿಯಲ್ಲಿ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಿಲುವಳಿ ಸೂಚನೆಯನ್ನು ತಾವು ಅಂಗೀಕಾರ ಮಾಡಬೇಕೆಂದು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಸಭಾಧ್ಯಕ್ಷರೆ, ಅತೀ ಮುಖ್ಯವಾದುದು ಇಂದಿನ ನಿಲುವಳಿ ಸೂಚನೆಯ ಜಂಟಿ ಸದನ ಸಮಿತಿ ವರದಿ ಕೊಟ್ಟು 4 ತಿಂಗಳಲ್ಲಿ ವಿದ್ಯುತ್ ದರವನ್ನು ಏರಿಸಿ ಅತಿ ಹೆಚ್ಚು ತೆರಿಗೆಯನ್ನು ವಿಧಿಸಿರತಕ್ಕಂಥ ಕೆಲಸ ಮಾಡಿದೆ ಈ ಸರ್ಕಾರ. ಹಿರಿಯರು ಬಹಳ ಬೆಳಕು ಚೆಲ್ಲುವಂಥಹ ಪ್ರಾಮಾಣಿಕ ಚರ್ಚೆಯನ್ನು ಇಲ್ಲಿ ಮಾಡಿದ್ದಾರೆ. ನಾನು ಮುಖ್ಯವಾಗಿ ಹೇಳುತ್ತಿದ್ದೇನೆ. ಅನಧಿಕೃತ ಪಂಪ್‌ಸೆಟ್ಟು ಅನಧಿಕೃತ ಪಂಪ್‌ಸೆಟ್ಟು ಎಂದು ಮಾತನಾಡುತ್ತಿದ್ದಾರೆ. ಸುಮಾರು 17 ಸಾವಿರ ಪಂಪ್‌ಸೆಟ್ಟುಗಳನ್ನು ರೆಗ್ಯುಲರೈಸೇಷನ್ ಮಾಡಿದ್ದಾರೆ. ಇನ್ನು 18 ಸಾವಿರ ಪಂಪ್‌ಸೆಟ್ಟುಗಳನ್ನು ರೆಗ್ಯುಲರೈಜೇಷನ್ ಮಾಡಿಲ್ಲ. 13 ರಿಂದ 20 ಸಾವಿರ ದಂಡ ವಿಧಿಸುತ್ತೇವೆಂದು ಮಾತನಾಡುತ್ತಾರೆ. ಮಾನ್ಯ ಸಭಾಧ್ಯಕ್ಷರೆ, ಇವತ್ತು ಒಂದು ಎಕರೆ ನೀರಾವರಿಗೆ ರೈತರು 40 ಸಾವಿರ ಖರ್ಚು ಮಾಡಿರುತ್ತಾರೆ. ಒಂದು ಎಕರೆ ಲಿಫ್ಟ್ ಇರಿಗೇಷನ್‌ಕ್ಕೆ 75 ಸಾವಿರ ರೂಪಾಯಿ ಖರ್ಚು ಮಾಡಿರುತ್ತಾರೆ. ಮೂರನೆಯ ಎರಡು ಭಾಗ ರೈತರು ಕರ್ನಾಟಕ ರಾಜ್ಯದಲ್ಲಿ ಮಳೆ ಆಧಾರಿತ ಪ್ರದೇಶದ ರೈತರು. ಅವರ ಪಂಪಸೆಟ್ಟಿಗೆ ಅತ್ಯಂತ ತೀವ್ರವಾಗಿ ಕನೇಕ್ಷನ್ ನಾವು ಕೊಟ್ಟಿಲ್ಲ. ಅರ್ಜಿಯನ್ನು ಕೊಟ್ಟು 2-3 ವರ್ಷ ಆಯಿತು. ಆದರೂ ಪಂಪ್‌ಸೆಟ್ಟಿಗೆ ಕನೆಕ್ಷನ್ ಕೊಟ್ಟಿಲ್ಲ ಎಂತಹ ಸಾಲದ ನೀತಿ ಇದೆ ಅಂದರೆ ರೈತ ಬೋರ್ ಹಾಕಿಸಬೇಕು. ಬೋರ್ ಹಾಕುವುದಕ್ಕೆ ಪಿ.ಎಲ್.ಡಿ. ಬ್ಯಾಂಕಿನವರು ಸಾಲವನ್ನು ಕೊಡುತ್ತಾರೆ ಹಾಗೆ ಸಾಲವನ್ನು ತೆಗೆದುಕೊಂಡ ಎರಡು ಮೂರು ವರ್ಷಗಳ ಮೇಲೆ ಕರೆಂಟ್ ಕನೆಕ್ಷನ್ ಕೊಡತಕ್ಕಂಥ ಕೆಲಸವನ್ನು ಇವರು ಮಾಡುತ್ತಾ ಇದ್ದಾರೆ. ನಾವು ಸಮಿತಿಯಲ್ಲಿ ಹೇಳಿದ್ದೇವೆ. ನಬಾರ್ಡಿಗೆ ತಿಳುವಳಿಕೆ ಕೊಡತಕ್ಕಂಥಹ ಕೆಲಸ ಆಗಬೇಕು. ಯಾವತ್ತು ರೈತ ಪಂಪ್‌ಸೆಟ್ ಮೂಲಕ ನೀರನ್ನು ತೆಗೆದು ಉತ್ಪಾದನೆ ಮಾಡುತ್ತಾನೆ ಅವತ್ತು ಅವನ ಸಾಲದ ಮೇಲೆ ಬಡ್ಡಿ ಹಾಕಿದರೆ ಪರವಾಗಿಲ್ಲ. ಆದರೆ ಮೋಟರ್ ಬೋರ್ ಎಲ್ಲಾ ಖರೀದಿಯಾದ ಮೇಲೆ ಎರಡು, ಎರಡುವರೆ ವರ್ಷ ಪಂಪಸೆಟ್ ಕೊಡದೇ ಇದ್ದರೆ ಅದು ಕೆ.ಇ.ಬಿ ಇಲಾಖೆ ಮತ್ತು ಅದು ಸರ್ಕಾರದ ತಪ್ಪು. ಕೆ.ಇ.ಬಿ ಮಂತ್ರಿಗಳನ್ನು ನಾನು ಕೇಳುವುದೇನೆಂದರೆ, ಒಂದು ರೂಲ್ಸ್ ಇದೆ. ಯಾವುದೇ ಕಾರಣಕ್ಕೂ ಮೊದಲು ಆದ್ಯತೆ ಇರಿಗೇಷನ್ ಪರಪಸ್‌ಗೆ. ಇರಿಗೇಷನ್ ಪರಪಸ್‌ಗೆ ಕೊಡದೆ ಇರುವುದು ಸರ್ಕಾರದ ತಪ್ಪೇ ಹೊರತು ಅನಧಿಕೃ ಪಂಪ್‌ಸೆಟ್ ಎಂದು ಘೋಷಣೆ ಮಾಡುವುದಕ್ಕೆ ಸರ್ಕಾರಕ್ಕೆ ಹಕ್ಕಿಲ್ಲ.

ರೈತನಿಗೆ ರೈಟ್ಸ್ ಇದೆ. ಸಾಲ ತೆಗೆದುಕೊಂಡು ಎರಡು ವರ್ಷವಾದರೂ ಕೆಇಬಿ ಇಲಾಖೆಯವರು ಕನೆಕ್ಷನ್ ಕೊಡದಿದ್ದರೆ ಅವನು ಆ ನೋವನ್ನು ತಡೆಯಲಾರದೆ ಅನಧಿಕೃತವಾಗಿ ತೆಗೆದುಕೊಂಡಿರಬಹುದು. ಆದರೆ ಅದು ಅಧಿಕೃತ ಎಂದು ನಾನು ಹೇಳುತ್ತೇನೆ. ತಾವು ಸರ್ಕಾರ ಹೇಳಬಹುದು. ಸರ್ಕಾರ ಅರ್ಜಿ ಕೊಟ್ಟ ಎರಡು ತಿಂಗಳಲ್ಲಿ ಕನೆಕ್ಷನ್ ಕೊಟ್ಟರೆ ಸಮಸ್ಯೆ ಇಲ್ಲ. ರೈತರಿಗೆ ಜೊತೆಗೆ ರಿಸ್ಟ್ರಿಕ್ಷನ್ಸ್ ಇರಬಾರದು. ಮಳೆ ಆಧಾರಿತ ಪ್ರದೇಶದ ರೈತರಿಗೆ ಕನಿಷ್ಟ ಈ ತರಹದ ಸೌಲಭ್ಯವನ್ನು ನಾವು ಒದಗಿಸಿಕೊಡದೇ ಅನಧಿಕೃತ ಪಂಪ್‌ಸೆಟ್ ಎಂದು ಹೇಳಿದ ಹಾಗೆ ಆಯಿತು. ನೀವು ಉಳುವವನೇ ಭೂಮಿಯ ಒಡೆಯ ಎಂದು ಹೇಳಿ ದರಖಾಸ್ತು ಕಮಿಟಿ ಅರೇಂಜ್ ಮಾಡಿದ್ದೀರಲ್ಲಾ, ಆ ರೀತಿ ಎಲ್ಲಾ ಜಿಲ್ಲೆಯಲ್ಲೂ ಸಮಿತಿಯನ್ನು ಮಾಡಿ ಅನಧಿಕೃತ ಪಂಪ್‌ಸೆಟ್ ಯಾವುದ್ಯಾವುದು ಇದೆ, ಅವೆಲ್ಲವನ್ನೂ ರೆಗ್ಯುಲರೈಸ್ ಮಾಡುವುದು ಒಳ್ಳೆಯದು. ಅದು ಅನಧಿಕೃತ ಅಲ್ಲ. ಆದದ್ದರಿಂದ ಅಧಿಕೃತವಾಗಿ ಈ ದೇಶದ ಉತ್ಪಾದನೆ ಮಾಡಿ ನ್ಷಷ್ಟವನ್ನು ಅನುಭವಿಸಿದ್ದಾನೆ. ಇದೇ ಬೈರೇಗೌಡರು ಒಂದು ಮಾತನ್ನು ಹೇಳಿದ್ದಾರೆ. "ಕೃಷಿ ಪಂಪ್‌ಸೆಟ್‌ಗಳಿಗೆ 24 ಗಂಟೆಯೊಳಗೆ ವಿದ್ಯುಚ್ಛಕ್ತಿ ನಮ್ಮ ಸರ್ಕಾರದಿಂದ ಕೊಡಲಾಗುತ್ತದೆ ಎರಡು ವರ್ಷಗಳವು ಹಿಂದೆ ಹೇಳಿದ್ದಾರೆ ಎಂದು 55 ಟನ್ ಕಬ್ಬು ಬೆಳೆದಂಥ ರೈತ ಇವತ್ತು 15 ಟನ್ ಕಬ್ಬು ಬೆಳೆದಿದ್ದಾನೆ. ಕೃಷಿ ಕ್ಷೇತ್ರಕ್ಕೆ ನೀರು ಸರಬರಾಜು ಮಾಡುವುದಕ್ಕೆ ವಿದ್ಯುಚ್ಛಕ್ತಿ ಒಂದು ತಿಂಗಳು ತಪ್ಪಾದರೆ 11 ತಿಂಗಳು ಪಟ್ಟಿರತಕ್ಕಂಥ ಎಲ್ಲಾ ಶ್ರಮ ವ್ಯರ್ಥವಾಗುತ್ತದೆ. ಆದ್ದರಿಂದ ಸರ್ಕಾರ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇನ್ನೊಂದು ಬಹಳ ಪ್ರಮುಖವಾದ ವಿಷಯ. ವಿಶೇಷವಾಗಿ ಸೀಮೆಎಣ್ಣೆಯಿಂದ ವಂಚಿತವಾಗಿ ಬೆಳಕನ್ನೇ ಕಾಣದೆ 10 ವರ್ಷ, 15, 20 ವರ್ಷಗಳಿಂದ ಬಡತನದ ರೇಖೆಯಲ್ಲಿರುವ ಜನತಾ ಕಾಲೋನಿಯ ಜನರಿಗೆ ಬೀದಿ ದೀಪವನ್ನು ಕೊಡಬೇಕಾದರೆ ತಾವು ರಿಸ್ಟ್ರಿಕ್ಷನ್ ಮಾಡಿದ್ದೀರಿ. ಅದೇ ಪಟ್ಟಣ ಪ್ರದೇಶದಲ್ಲಿರುವ ಯಾವುದೇ ವರ್ಗದ ಜನರು ಏನು ಮೊದಲೇ ಬೀದಿ ದೀಪವನ್ನು ಕೊಟ್ಟು ಲೇಔಟ್ ಮಾಡಿನಂತರ ಮನೆ ಕಟ್ಟುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೀರಿ. 15 ವರ್ಷ 20 ವರ್ಷ ಆಗಿದೆ. ಒಬ್ಬ ಕೃಷಿ ಕಾರ್ಮಿಕ ಜನತಾ ಮನೆಯಲ್ಲಿ ವಾಸ ಮಾಡಿ 15 ವರ್ಷದಿಂದ ಬೆಳಕು ಕಂಡಿಲ್ಲ. ಸರ್ಕಾರ ಏನು ರಿಸ್ಟ್ರಿಕ್ಷನ್ ಮಾಡಿದ್ದಾರೆ, ವರ್ಷಕ್ಕೆ ನಾಲ್ಕು ಜನತಾ ಕಾಲೋನಿಗೆ ಮಾತ್ರ ವಿದ್ಯುತ್ ಸರಬರಾಜು ಕೊಡುವುದು. ಅಂದರೆ ಒಂದೊಂದು ಕ್ಷೇತ್ರದಲ್ಲಿ 70-80 ಜನತಾ ಕಾಲೋನಿಗಳು ಖಾಲಿ ಇದ್ದು ಅವರಿಗೆ ಕನಿಷ್ಟ ಬೀದಿಯ ಬೆಳಕನ್ನು ಕೊಡದೇ ಇರುವ ಪರಿಸ್ಥಿತಿಯಲ್ಲಿ ನಾವು ಇದ್ದುಕೊಂಡು ಬಡತನದ ರೇಖೆಯಿಂದ ಮೇಲೆ ಎತ್ತುತ್ತೇವೆ ಎಂದು ಹೇಳುವ ಈ ಪೊಳ್ಳು ಮಾತನ್ನು ನಿಲ್ಲಿಸಬೇಕು. ಆದ್ದರಿಂದ ಆ ಒಂದು

ರಿಸ್ಟ್ರಿಕ್ಷನ್‌ನ್ನು ತೆಗೆದುಹಾಕಬೇಕು. ಎಷ್ಟು ಬಡತನದ ರೇಖೆಗಿಂತ ಕೆಳಗಿರುವ ಕಾಲೋನಿ ಇವೆ, ಅಷ್ಟಕ್ಕೂ ಆಯಾ ವರ್ಷವೇ ವಿದ್ಯುತ್ ಸರಬರಾಜು ಕೊಡುವ ಕೆಲಸವನ್ನು ಮಾಡಬೇಕು ಎಂದು ಹೇಳುತ್ತಾ ಸರ್ಕಾರ ಏನು ವಿದ್ಯುತ್ ದರವನ್ನು ಹೆಚ್ಚುಮಾಡಿದೆ, ಅದನ್ನು ತತ್‌ಕ್ಷಣ ವಾಪಸ್ ತೆಗೆದುಕೊಳ್ಳಿ. ಏನು ಜಂಟಿ ಸದನದ ಸಮಿತಿ ಮಾಡಿದರು, ಅದೇ ರೀತಿ ಸಮಿತಿ ಮಾಡಿ ಹಠವನ್ನು ಮಾಡದೆ ಅತ್ಯಂತ ಗಂಭೀರವಾಗಿ ಸಾರ್ವಜನಿಕವಾಗಿ ಚಿಂತನೆ ಮಾಡಬೇಕು. ನಾಲ್ಕು ತಿಂಗಳಲ್ಲಿ ಎರಡನೇಸಾರಿ ದರವನ್ನು ಹೆಚ್ಚಿಸಿರುವುದು ಅವೈಜ್ಞಾನಿಕ. ಸರ್ಕಾರ ಅತ್ಯಂತ ಗಂಭೀರವಾಗಿ ಚಿಂತನೆಮಾಡಿ ಜಂಟಿ ಸದನದ ಸಮಿತಿಯ ಮೂಲಕ ಸಮಸ್ಯೆಯನ್ನು ಬಗೆಹರಿಸಬೇಕು. ಇಲ್ಲದಿದ್ದರೆ ಮುಂದಿನ ಕಾರ್ಯಕ್ರಮ ಚಳುವಳಿ ಮಾಡಬೇಕಾದ ಪರಿಸ್ಥಿತಿಯನ್ನು ಸೃಷ್ಟಿ ಮಾಡಬಾರದು. ಸರ್ಕಾರ ಹಠ ಮಾಡದೆ ಸಮಸ್ಯೆಯನ್ನು ಬಗೆಹರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೇ ಇವತ್ತು ಒಂದು ಮಹತ್ವದ ವಿಚಾರವನ್ನು ನಿಲುವಳಿ ಸೂಚನೆ ಮುಖೇನ ಚರ್ಚೆ ಮಾಡುವುದಕ್ಕೆ ವಿರೋಧ ಪಕ್ಷಗಳ ಎಲ್ಲಾ ಮುಖಂಡರುಗಳಿಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸುವುದರ ಜೊತೆಗೆ ಬಹಳ ಪ್ರಮುಖ್ಯವಾಗಿ ಇಂಥ ಒಂದು ಸಂದರ್ಭಕ್ಕೆ ಕಾರಣರು ಯಾರು? ಸಾರ್ವಜನಿಕವಾಗಿ ಮಹತ್ವದ ಒಂದು ವಿಚಾರವನ್ನು ನಿಲುವಳಿ ಸೂಚನೆ ಮುಖೇನ ತರುವಂಥ ಸಂದರ್ಭಕ್ಕೆ ಒದಗಿಸಿಕೊಟ್ಟವರು ಯಾರು ? ಎಂದು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಒಂದು, ಬಹಳ ಪ್ರಾಮುಖ್ಯವಾಗಿ ಮೊನ್ನೆ ಜುಲೈತಿಂಗಳಲ್ಲಿ 1 ನೇ ತಾರೀಖು ನೋಟಿಫಿಕೇಷನನ್ನು ಹೊರಡಿಸಿ ದಿಢೀರ್‌ನೆ ವಿದ್ಯುತ್ತಿನ ದರವನ್ನು ಏರಿಸುವ ಮುಖೇನ ಒಂದು ದೊಡ್ಡ ಅಘಾತವನ್ನು ಮಾಡಿದ್ದೀರಿ, ಈ ಕರ್ನಾಟಕದ ಐದು ಕೋಟಿ ಜನರಿಗೂ ಕೂಡ ಒಂದು ಷಾಕನ್ನು ಕೊಟ್ಟಿದ್ದೀರಿ. ಈಗ ಕೇವಲ ಒಂದು ವರ್ಷದ ಹಿಂದೆ ಬೆಲೆಯನ್ನು ಏರಿಸುವಂಥ ತೀರ್ಮಾನವನ್ನು ಮಾಡಿದಿರಿ. ಹಾಗೆ ಮಾಡಿದಂಥ ಸಂದರ್ಭದಲ್ಲಿ ಈ ರಾಜ್ಯಾದ್ಯಂತ ಜನಗಳಿಂದ ಮತ್ತು ವಿರೋಧ ಪಕ್ಷಗಳ ಎಲ್ಲಾ ವತಿಯಿಂದ ವಿರೋಧ ಬಂದಂಥ ಸಮಯದಲ್ಲಿ ತಾವು ಒಂದು ಜಂಟಿ ಸದನದ ಸಮಿತಿಯನ್ನು ಕೂಡ ಮಾಡಿದಿರಿ. ಜಂಟಿ ಸದನ ಸಮಿತಿಯನ್ನು ಮಾಡಿ ಸಮಿತಿಯ ಮುಖೇನ ಇವತ್ತು ಕೂಲಂಕುಷವಾಗಿ ಕೆಇಬಿ ಅಧಿಕಾರಿಗಳು ಮತ್ತು ಸರ್ಕಾರದ ಎಲ್ಲಾ ಅಧಿಕಾರಿಗಳೂ ಕುಳಿತು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದೆವು. ಬಹುಶಃ ಆ ರೆಕಮೆಂಡೇಷನ್ ಬಗ್ಗೆ ಸಾಕಷ್ಟು ಪ್ರಸ್ತಾಪವಾಗಿರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಬಹುಶ ಜಂಟಿ

ಸದನದ ಸಮಿತಿ ಕೊಟ್ಟಿ ತೀರ್ಪು ಏನಿತ್ತು, ಕೊಟ್ಟಂಥ ಒಂದು ಸಲಹೆ ಏನಿತ್ತು, ಆ ಸಲಹೆಯನ್ನು ನೀವು ಅನುಷ್ಠಾನಕ್ಕೆ ತರುವ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇ ಆಗಿದ್ದರೆ ಬಹುಶಃ ಹೀಗೆ ಬೆಲೆಯನ್ನು ಏಕಾಏಕಿಯಾಗಿ ಏರಿಕೆ ಮಾಡುವ ಸಂದರ್ಭ ಒದಗುತ್ತಿರಲ್ಲಿ. ನಾನು ಸಂಕ್ಷಿಪ್ತವಾಗಿ ಕೆಲವೊಂದು ವಿಷಯವನ್ನಾದರೂ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. The Government should release the subsidy to KEB every year for the subsidised power supply to IP sets and Bhagyajyothi. ಸರ್ಕಾರದಿಂದ ಆ ಕೆಲಸ ಆಗಲಿಲ್ಲ. ಜಂಟಿ ಸಲಹಾ ಸಮಿತಿ ಕೊಟ್ಟಂಥ ಒಂದು ಸಲಹೆಯನ್ನು ನೀವು ಎಷ್ಟರಮಟ್ಟಿಗೆ ಪರಿಗಣಿಸಿದ್ದೀರಿ. ಜಂಟಿ ಸದನ ಸಮಿತಿಯನ್ನು ಮಾಡಿ ಪ್ರಯೋಜನವಾದರೂ ಏನು ಎನ್ನುವ ಮಾತನ್ನು ನಾವು ಕೇಳಬೇಕಾಗುತ್ತದೆ. ಆದರ ಜೊತೆಗೆ ತಾವು ಆರು ತಿಂಗಳೊಳಗಾಗಿ ಇವತ್ತು ಕೆಇಬಿ ಗೆ ಬರೇಬೇಕಾಗಿರುವ ಡ್ಯೂಸ್ ಏನಿದೆ, ಒಂದು ಸಾವಿರ ಕೋಟಿ ಡ್ಯೂಸ್ ಇರುವ ಸಂದರ್ಭದಲ್ಲಿ ಅದನ್ನು ವಸೂಲು ಮಾಡುವುದಕ್ಕೆ ಯಾವ ರೀತಿಯಾದ ಕಾರ್ಯಕ್ರಮವನ್ನು ನೀವು ಹಾಕಿದ್ದೀರಿ. ಏನೂ ಕಾರ್ಯಕ್ರಮ ಹಾಕಲಿಲ್ಲ. ಯಾವುದನ್ನು ವಸೂಲು ಮಾಡುವ ಪ್ರಯತ್ನ ತಮ್ಮಿಂದ ಆಗಲಿಲ್ಲ. ಕೆಇಬಿ ಯಿಂದಲೂ ಆಗಲಿಲ್ಲ. ಮತ್ತು ಇವತ್ತು ನೌಕರರಿಗೆ ಕೊಡುತ್ತಿರುವ 200 ರಿಂದ 400 ಯೂನಿಟ್ಸ್‌ನ್ನು ಪುಕ್ಕಟೆಯಾಗಿ ಕೊಡುತ್ತಿದ್ದೀರಿ, ಸುಮಾರು 48 ಸಾವಿರ ನೌಕರ ವರ್ಗದವರಿಗೆ ಕೊಡುತ್ತಿದ್ದೀರಿ, ಅದನ್ನು ಕಡಿತಗೊಳಿಸಬೇಕು, ಅದನ್ನು ತೆಗೆಯಬೇಕು ಎಂದು ಸಲಹೆ ಕೊಟ್ಟಿದ್ದಕ್ಕೆ ಅದಕ್ಕೂ ಸಹಾ ತಾವು ಯಾವುದೇ ಪ್ರಯತ್ನ ಮಾಡಲ್ಲ. ಇವತ್ತು ಕೆಇಬಿ ಎಂಪ್ಲಾಯಿಸ್‌ಗೆ ಕೊಡುತ್ತಿರುವ ಬಗ್ಗೆ ಅದರ ಮೊತ್ತವನ್ನು ನೀವು ಲೆಕ್ಕ ಹಾಕಿಕೊಂಡು ಹೋದರೆ ಬೇರೆ ವರ್ಗದ ನೌಕರರಿಗೆ ಹೋಲಿಸಿಕೊಂಡಾಗ ಬಹುಶಃ ಒಂದೂವರೆಯಷ್ಟು ಎರಡರಷ್ಟು ಜಾಸ್ತಿ ಇರುವುದನ್ನು ತಾವು ಮನಗಂಡಿರುತ್ತೀರಿ. ತಮಗೆ ಗೊತ್ತಿದೆ. ಇವತ್ತು ಅಷ್ಟೋಂದು ಸ್ಯಾಲರಿಯನ್ನು ಕೊಟ್ಟು ಇಂಥ ಒಂದು ಸವಲತ್ತನ್ನು ಕೊಟ್ಟಾಗ ಅದನ್ನು ಜಂಟಿ ಸಲಹಾ ಸಮಿತಿಯವರು ಕಡಿತಗೊಳಿಸಬೇಕು ಎನದು ಹೇಳಿದರೆ ಅದಕ್ಕೆ ಯಾವುದೇ ವಿಧವಾದಂಥ ಪ್ರಯತ್ನವನ್ನು ತಾವು ಮಾಡಲ್ಲ. ಅದೇ ರೀತಿಯಾಗಿ ಎನರ್ಜಿ ಮೀಟರ್ಸ್‌ನ್ನು ಎಲ್ಲಾ ಕಡೆ ಹಾಕಬೇಕು ಎಂದು ಹೇಳಿದರು. ಇವತ್ತು ಎನರ್ಜಿ ಮೀಟರ್ಸ್‌ನ್ನು ಹಾಕಬೇಕು ಎಂದು ಈ ಸಭೆಯಲ್ಲಿ ಚರ್ಚೆಯಾಗಿ ತೀರ್ಮಾನವಾದರೂ ಕೊಡ ಇವತ್ತು ಮೀಟರ್ಸ್ ಸೆಕ್ಯುರಿಟಿ ಡಿಪಾಸಿಟ್ಸ್‌ನ್ನು ಕಲೆಕ್ಟ್ ಮಾಡುತ್ತಿದ್ದೀರಿ. ಮಾಡಿದರೂ ನೀವು ಹಾಕುತ್ತಿರುವ ಎನರ್ಜಿ ಮೀಟರ್ಸ್ ಎಲ್ಲಾ ಹಳೆಯ ಮೀಟರ್ಸ್‌ನ್ನು ನೀವು ಹಾಕುತ್ತಿದ್ದೀರಿ. ಇದು ಏಕೆ? ಎನರ್ಜಿ ಮೀಟರ್ಸ್‌ನ್ನು ಹಾಕುವ ಪ್ರಯತ್ನ ಏಕೆ ಮಾಡಲಿಲ್ಲ? ಮತ್ತು ವಿಜಿಲೆನ್ಸ್‌ನ್ನು ಸ್ಟ್ರೆಂಥೆನ್

ಮಾಡಬೇಕು ಎನ್ನುವ ಒಂದು ಸಲಹೆ. ಇವತ್ತು ವಿಜಿಲೆನ್ಸ್ ಸ್ಟ್ರೆಂಥೆನ್ ಮಾಡುವ ಬಗ್ಗೆ ವಿಧಾನಸಭೆಯಲ್ಲಿ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೀರಿ. ಕೇವಲ ತಾವು ವಸೂಲು ಮಾಡಿರುವುದು ಕೇವಲ ಎಂಟು-ಹತ್ತು ಕೋಟಿ ರೂಪಾಯಿಗಳು ಮಾತ್ರ ಎನ್ನುವುದು. ಇವತ್ತು ನಾನು ಹೇಳುತ್ತೇನೆ, ಬೆಂಗಳೂರಿನಲ್ಲಿರುವ ಕೈಗಾರಿಕೆಗಳನ್ನು ಇವತ್ತು ವಿಜಿಲೆನ್ಸ್ ಆಕ್ಟಿವಿಟೀಸ್‌ನ್ನು ನೀವು ಆಕ್ಟಿವೇಟ್ ಮಾಡಬೇಕು ಇಡೀ ರಾಜ್ಯದಲ್ಲಿ ಎಂಟು-ಹತ್ತು ಕೋಟಿ ವಸೂಲೂ ಮಾಡುತ್ತೇವೆ ಎಂದರೆ ನೀವು ಆಕ್ಟಿವೇಟ್ ಮಾಡಿದ್ದೇವೆ ಎನ್ನುವುದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಬಹಳ ಮುಖ್ಯವಾಗಿ ಅನ್‌ಇಂಟರ್‌ಪ್ರೆಟೆಡ್ ಪವರ್ ಸಪ್ಲೈ ಕೊಡಬೇಕು, ಪ್ರಾಪರ್ ವೋಲ್ಟೇಜ್ ಕೊಡಬೇಕು ಎಂದು ಅನೇಕ ಸಲಹೆಗಳನ್ನು ಕೊಟ್ಟರೂ ಆ ಕೆಲಸವನ್ನೂ ಮಾಡಲಿಲ್ಲ. ಅದರಿಂದ ಪ್ರಯೋಜನವಾಗಲಿಲ್ಲ.

5.10 ಪಿ.ಎಂ

ನಿಮ್ಮ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಕಡಿಮೆ ಮಾಡಿ ಎಂದು ಸಲಹೆ ಕೊಟ್ಟರು, ಅದನ್ನೂ ಕೂಡ ಮಾಡಲಿಲ್ಲ. ಇಂತಹ ಅನೇಕ ತರವಾದಂತಹ ಬಹಳ ಅಮೂಲ್ಯವಾದಂತಹ ಸಲಹೆಗಳನ್ನು ಕೊಟ್ಟಂತಹ ಸಂದರ್ಭದಲ್ಲಿ ಸಹ ತಾವು ಯಾವುದನ್ನೂ ಕೂಡ ಗಣನೆಗೆ ತೆಗೆದುಕೊಳ್ಳದೇ ಇವತ್ತು ಏಕಾ-ಏಕಿ ವಿದ್ಯುತ್ ದರವನ್ನು ಏರಿಸುವಂತಹ ಮಟ್ಟಕ್ಕೆ ಹೋದಿರಿ. ಬೆಲೆಯನ್ನು ಏರಿಸಬೇಕಾದರೆ ನೀವು ಕೊಟ್ಟಂತಹ ಕಾರಣವಾದರೂ ಏನು? ಇವತ್ತು ನೀವು ಕಾರಣವನ್ನು ಕೊಡುತ್ತೀರಿ, ಏನೆಂದರೆ additional resource mobilisation of Rs. 420 crores which was expected is not fully realised. There is a shortfall of Rs. 70 Crores.

ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಅದರ ಜೊತೆಗೆ ನೀವು greater quantum of thermal power had to be purchased from KPCL.

ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಆಮೇಲೆ generating stations. central generating stations and MSEB due to failure of monsoon. ಎನ್ನತಕ್ಕ ಮಾತನ್ನು ಹೇಳಿ, ಕಾರಣಗಳನ್ನು ಕೊಟ್ಟು ಬೆಲೆಯನ್ನು ಏರಿಕೆ ಮಾಡಿದ್ದರ ಬಗ್ಗೆ ಸಮರ್ಥನೆ ಮಾಡುವುದಕ್ಕೆ ಹೊರಟಿದ್ದೀರಿ. ತಾವು ಯೋಚನೆ ಮಾಡಿ. ಈಗ ಮಳೆಗಾಲ ಪ್ರಾರಂಭ ಆಗಿದೆ. ನಮ್ಮೆಲ್ಲರ ಪುಣ್ಯಕ್ಕೆ ಇವತ್ತು ಶರಾವತಿ ತಂಬುವಂತಹ ಸಂದರ್ಭದಲ್ಲಿ ಇದೆ ಎಕ್ಸ್‌ಪೆಂಡಿಚರ್ ಆದರೂ ಕೆಇಬಿಗೆ ಏನು ಬರುತ್ತದೆ?

(ಮಾನ್ಯ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಾಮನಿಯವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನೀವು ಹೊರಗಡೆಯಿಂದ ರಾಜ್ಯದಲ್ಲಿ ಪವರ್ ಪರ್ಚೇಸ್ ಮಾಡುವುದಕ್ಕೆ ಹೋಗುವುದಿಲ್ಲ ಹೊರ ರಾಜ್ಯದಿಂದಗಾಗಿ ನೀವು ಥರ್ಮಲ್ ಪವರ್‌ನಿಂದಾಗಿ ಹೆಚ್ಚು ಜನರೇಷನ್ ಮಾಡಬೇಕಾಗಿಲ್ಲ. ಈಗಾಗಲೇ ಸಾಕಷ್ಟು ನೀರು ಇರುವಂತಹ ಸಂದರ್ಭದಲ್ಲಿ, ಮಳೆ ಚೆನ್ನಾಗಿ ಆಗುತ್ತಿರತಕ್ಕ ಸಂದರ್ಭದಲ್ಲಿ ಇವತ್ತು ವಿದ್ಯುತ್ ದರ ಏರಿಕೆಯನ್ನು ದಿಢೀರ್ ಮಾಡತಕ್ಕ ಸಂದರ್ಭವಾದರೂ ಇತ್ತೇ ಎನ್ನತಕ್ಕದ್ದನ್ನು ತಾವು ಚಿಂತನೆ ಮಾಡಬೇಕು. ತಾವು ಬೆಲೆಯನ್ನು ಏರಿಕೆ ಮಾಡಬೇಕಾದರೆ ಇವತ್ತು ಜಂಟಿ ಸಲಹಾ ಸಮಿತಿಯವರು ಕೊಟ್ಟಿರತಕ್ಕಂಥ ಶಿಫಾರಸ್ಸುಗಳನ್ನು ನೀವು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎನ್ನತಕ್ಕದ್ದನ್ನು ಕೂಡ ತಾವು ಚಿಂತನೆ ಮಾಡಬೇಕಾಗಿತ್ತು. ಅದು ಯಾವುದನ್ನೂ ಕೂಡ ಪರಿಗಣಿಸದೆ ಏಕಾ ಏಕಿ ಬೆಲೆಯನ್ನು ಏರಿಸುವಂತಹ ಕೆಲಸವನ್ನು ಮಾಡಿರಬೇಕಾದರೆ ಇದು ಎಷ್ಟರಮಟ್ಟಿಗೆ ಸಮಂಜಸ? ಎಷ್ಟರಮಟ್ಟಿಗೆ ಪ್ರಯೋಜನ ಆಗುತ್ತದೆ? ಎಷ್ಟರಮಟ್ಟಿಗೆ ನೀವು ಜನಗಳ ಹಿತವನ್ನು ಕಾಪಾಡುವುದಕ್ಕೆ ಸಮರ್ಥರಾಗಿದ್ದೀರಿ? ಎನ್ನತಕ್ಕದ್ದನ್ನು ಚಿಂತನೆ ಮಾಡಬೇಕು. ಮತ್ತೊಂದು ಬಹಳ ಮುಖ್ಯವಾಗಿ ಈ ಸಂದರ್ಭದಲ್ಲಿ ಹೇಳತಕ್ಕದ್ದು ನೀವು ಇದಲ್ಲದೇ ಅನೇಕ ತರವಾದಂತಹ ನಿಮ್ಮ ಬೋರ್ಡಿನ ಎಫಿಷೆನ್ಸಿಯನ್ನು ಇಂಪ್ರೂವ್ ಮಾಡುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿದ್ದರೆ ಬಹುಶಃ ನೀವು ಇವತ್ತು ಬೆಲೆ ಏರಿಕೆಯನ್ನು ತಡೆಯುವುದಕ್ಕೆ ಸಾಧ್ಯ ಇತ್ತು. ಇವತ್ತು ನಿಮ್ಮ ಬೋರ್ಡಿನ ಎಫಿಷಿಯೆನ್ಸಿಯನ್ನು ಯಾವುದೇ ರೀತಿಯಲ್ಲೂ ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನವನ್ನು ಮಾಡಲಿಲ್ಲ. ಒಂದು ಬಹಳ ದೊಡ್ಡದಾದಂತಹ ಅನ್ಯಾಯ ಇವತ್ತು ಕೆಇಬಿಯಲ್ಲಿ ಆಗಿದೆ ಎಂದು ಮಾನ್ಯ ಯಡಿಯೂರಪ್ಪನವರು ಮಾತನಾಡಬೇಕಾದರೆ ಹೇಳಿದರು. ಪರ್ಚೇಸ್‌ಸ್ ಬಗ್ಗೆ ಬಹಳ ಅವ್ಯವಹಾರ ಆಗಿದೆ ಎನ್ನತಕ್ಕ ಮಾತನ್ನು ಹೇಳಿದರು. ಇವತ್ತು ದುರ್ದೈವ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಏನಾಗಿದೆ ಎಂದರೆ ಹಿಂದೆ ಸುಮಾರು ಎಂಟು ಹತ್ತು ವರ್ಷಗಳ ಹಿಂದೆ ಯಾವ ಪರಿಪಾಠ ಇತ್ತು ಎಂದರೆ ಯಾವುದೇ ಒಂದು ಐಪಿ ಸೆಟ್ ಇನ್‌ಸ್ಟಾಲ್ ಮಾಡಬೇಕಾದರೆ, ಯಾವುದೇ ಒಂದು ವಿಲೇಜ್‌ನಲ್ಲಿ ಎಲೆಕ್ಟ್ರಿಫಿಕೇಷನ್ ಮಾಡಬೇಕಾದರೂ ಕೂಡ, ಯಾವುದೇ ಒಂದು ಸಬ್ ಸ್ಟೇಷನ್ಸ್ ಮಾಡಬೇಕಾದರೂ ಕೂಡ ಕೆಇಬಿ ಎಂಪ್ಲಾಯೀಸ್ ಮುಖೇನ ಮಾಡುವುದು ಇತ್ತು. ಎಸ್ಟಿಮೇಟ್ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ಒಂದು ಎಸ್ಟಿಮೇಟಿಗೆ ಹತ್ತು ಸಾವಿರ ರೂಪಾಯಿ ಆಗುತ್ತದೆ

ಅಥವಾ ಒಂದು ಲಕ್ಷ ರೂಪಾಯಿ ಆಗುತ್ತದೆ ಎಂದು ಹೇಳಿದರೆ ಅದನ್ನು ಬೋರ್ಡ್‌ನವರೇ ಮಾಡುತ್ತಿದ್ದರು. ಎಷ್ಟೋ ಸಂದರ್ಭದಲ್ಲಿ ಆ ಎಸ್ಟಿಮೇಟ್ ಕಾಸ್ಟ್‌ಗಿಂತ ಕಡಿಮೆ ಮಾಡತಕ್ಕದ್ದು ಕೂಡ ಇತ್ತು. ಆದರೆ ಇವತ್ತು ಏನಾಗಿದೆ ಎಂದರೆ ಆ ಎಸ್ಟಿಮೇಟ್ ಕಾಸ್ಟನ್ನು ಮೀರಿ ನೀವು ಕಂಟ್ರಾಕ್ಟರ್‌ಗಳಿಗೆ ಎಂಟ್ರಸ್ಟ್ ಮಾಡುವುದರಿಂದ ನಿಮ್ಮ ಬೋರ್ಡಿನಲ್ಲಿ ಅಕೌಂಟಬಲಿಟಿ ಇಲ್ಲ. ಅಕೌಂಟಬಲಿಟಿ ಇಲ್ಲದೇನೇ ಇವತ್ತು ಸಾಕಷ್ಟು ಫಿಲ್‌ಫರೇಜ್ ಆಗುತ್ತಿದೆ, ಸಾಕಷ್ಟು ಲಾಸ್ ಆಗುತ್ತಿದೆ. ಅದನ್ನು ಪ್ಲಗ್ ಮಾಡುವುದರ ಬಗ್ಗೆ ನೀವು ಯಾವುದೇ ಪ್ರಯತ್ನವನ್ನು ಮಾಡಲಿಲ್ಲ. ತಾವುಹೀಗೆ ಚಿಂತನೆ ಮಾಡಬೇಕು. ಒಂದು ವರ್ಷಕ್ಕೆ ಸುಮಾರು ನೂರಾರು, ಸಾವಿರಾರು ಕೋಟಿ ರೂಪಾಯಿಗಳನ್ನು ಇವತ್ತು ಪರ್ಚೇಸಸ್ ಮೇಲೆ ಹಾಕಬೇಕಾದರೆ ಅದನ್ನು ಸ್ಟೇಷನ್ ಮಾಡುವುದಕ್ಕೋಸ್ಕರ, ಎಲೆಕ್ಟ್ರಿಫಿಕೇಷ್‌ನ್‌ಗೆ ಹಾಕಬೇಕಾದರೆ ಅದರಲ್ಲಿ ಎಷ್ಟು ಪಿಲ್‌ಫರೇಜ್ ಆಗುತ್ತದೆ ಎನ್ನುವುದುನ್ನು ತಾವು ಉಳಿಸತಕ್ಕ ಪ್ರಯತ್ನವನ್ನು ಮಾಡಿದ್ದರೆ ಬಹುಶಃ 100,200 ಕೋಟಿ ರೂಪಾಯಿಗಳನ್ನು ಉಳಿಸುವಂತಹ ಕೆಲಸವನ್ನು ಮಾಡಬಹುದು. ಈ ಕೆಲಸವನ್ನು ಮಾಡುವುದಕ್ಕೆ ನಿಮಗೆ ಶಕ್ತಿ ಇರಲಿಲ್ಲವೇ ಬೋರ್ಡಿಗೆ ಅಧಿಕಾರ ಇರಲಿಲ್ಲವೇ,? ಅದನ್ನು ಯಾವುದಕ್ಕೋಸ್ಕರ ಮಾಡಲ್ಲ ಎನ್ನತಕ್ಕ ಪ್ರಶ್ನೆಯನ್ನೂ ಸಹ ಕೇಳುವುದಕ್ಕೆ ಇಚ್ಚೆಪಡುತ್ತೇನೆ. ಇವತ್ತು ಅದೆಲ್ಲಕ್ಕಿಂತಲೂ ಮುಖ್ಯವಾಗಿ ಅನ್ ಆಥರೈಸ್ಡ್ ಕನೆಕ್ಷನ್ಸ್ ಆಗಿದೆ.ರೈತನಿಂದ ಇವತ್ತು ಅನ್ ಆಥರೈಸ್ಡ್ ಕನೆಕ್ಷನ್ಸ್ ಆಗಿ ನಮ್ಮ ವಿದ್ಯುಚ್ಛಕ್ತಿಯನ್ನು ಅಪಹರಣ ಮಾಡುತ್ತಿದ್ದಾರೆ ಎನ್ನುವ ರೀತಿಯಲ್ಲಿ ಮಾಡುತ್ತಿದ್ದೀರಲ್ಲಾ? ಇವೆಲ್ಲಕ್ಕೂ ಪ್ರಚೋದನೆ ಆಗಿರತಕ್ಕದ್ದು, ನಮ್ಮ ಭಾಗದಲ್ಲಿರತಕ್ಕ ಎಲ್ಲ ಕೆಇಬಿಯಿಂದ ಅಥರೈಸ್ಡ್ ಕಂಟ್ರಾಕ್ಟರ್ಸ್ ಏನು ಇದ್ದಾರೆ, ಆ ಕಂಟ್ರಾಕ್ಟರ್ಸ್‌ನಿಂದ ಆಗಿರುವುದು. ಅವರ ಪ್ರಚೋದನೆಯಿಂದ ಆಗಿರತಕ್ಕದ್ದು. ಆ ಕಂಟ್ರಾಕ್ಟ್ ಸಿಸ್ಟಂ ಅನ್ನು ನೀವು ತೆಗೆಯದ ಹೊರತು ಕೆಇಬಿ ಇಂಪ್ರೂವ್ ಆಗುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ ಮತ್ತೊಂದು ಬಹಳ ಮುಖ್ಯವಾದ ವಿಚಾರ. ಇವತ್ತು ಸ್ಟೆಬಲೈಸೇಷನ್ ನಿಮಗೆ ಬೇಕು. ಪ್ರಾವರ್ ಸಪ್ಲೈ ಆಗಬೇಕು. ಟ್ರಾನ್ಸಫಾರರ್ಮ್ಸನ್ನು ಸಬ್ ಸ್ಟೇಷನ್‌ಗಳನ್ನು ನೀವು ಇನ್‌ಸ್ಟಾಲ್ ಮಾಡಬೇಕಾಗುತ್ತದೆ. ಆ ಕೆಲಸವನ್ನು ಮಾಡಿದ್ದೀರಾ? ನಿಮ್ಮ ಹೋದ ವರ್ಷದ ಬಜೆಟ್‌ನಲ್ಲಿದ್ದುದು ಒಂದು ವರ್ಷಕ್ಕೆ ಸುಮಾರು 45 ಸಬ್ ಸ್ಟೇಷನ್‌ಗಳನ್ನು ಮಾಡಬೇಕೆಂದು ತಮ್ಮ ಯೋಜನೆಯಲ್ಲಿತ್ತು. ಆದರೆ ತಾವು ಮಾಡಿದ್ದಾದರೂ ಏನು? ಕೇವಲ 10-12 ಸಬ್ ಸ್ಟೇಷನ್‌ಗಳನ್ನು ಮಾತ್ರ ಕಂಪ್ಲೀಟ್ ಮಾಡುವುದಕ್ಕೆ ಆಯಿತು. ನೀವು ಪೂರ್ತಿಯಾಗಿ ಯಾವುದೂ ಕೂಡ ಕೈಗೆತ್ತಿಕೊಳ್ಳುವುದಕ್ಕೆ ಆಗಲಿಲ್ಲ. ಈ ವರ್ಷ 1997-98ನೇ ಸಾಲಿಗೆ ನೀವು ಯಾವುದೇ ಒಂದು ಸಬ್ ಸ್ಟೇಷನ್‌ಗಳನ್ನು ಮಾಡುವುದಕ್ಕೆ ಕೂಡ ಯೋಜನೆ ಮಾಡಲಿಲ್ಲ. ಈ ರೀತಿಯಾಗಿ

ಯಾವುದೇ ಒಂದು ಕಡೆ ಸಹ ನೀವು ಸಬ್ ಸ್ಟೇಷನ್‌ಗಳನ್ನು ಮಾಡಿರತಕ್ಕದ್ದು ಇಲ್ಲ. ಇವತ್ತು ಟ್ರಾನ್ಸ್‌ಫಾರ್ಮರ್‌ನ್ನು ಇನ್‌ಸ್ಟಾಲ್ ಮಾಡತಕ್ಕ ಕೆಲಸವನ್ನು ಮಾಡಲಿಲ್ಲ. ಅಂದಾಗ ನಿಮಗೆ ಪವರ್ ಹೇಗೆ ಸೇವ್ ಮಾಡುವುದಕ್ಕೆ ಸಾದ್ಯ ಎನ್ನತಕ್ಕದ್ದನ್ನು ತಾವು ಚಿಂತನೆ ಮಾಡಬೇಕು. ಮತ್ತೊಂದು ಬಹಳ ಪ್ರಮುಖವಾಗಿ ಇವತ್ತು ನಿಮ್ಮ ಸಪ್ಲೈಸ್‌ನಲ್ಲಿ ಆಗುತ್ತಿರತಕ್ಕ ಅವ್ಯವಹಾರದ ಬಗ್ಗೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರುವುದರಿಂದ ಒಂದು ಮಾತನ್ನು ಹೇಳುತ್ತೇನೆ. ಅವರು ಉಪ ಮುಖ್ಯಮಂತ್ರಿಗಳು ಆಗಿದ್ದಂತಹ ಸಂದರ್ಭದಲ್ಲಿ ಸಹ ನಾನು ಒಂದು ವಿಷಯವನ್ನು ಅವರ ಗಮನಕ್ಕೆ ವೈಯಕ್ತಿಕವಾಗಿ ತಂದಿದ್ದೆ. ಇವತ್ತು ಯಾವುದೇ ಒಂದು ಪರ್ಚೇಸ್ ಕೆಇಬಿಯಲ್ಲಿ ಆಗ ಬೇಕಾದರೆ ಒಂದು ಕರ್ನಾಟಕ ಮಟ್ಟದಲ್ಲಿ ಈ ಭಾಗದಲ್ಲಿ ಹೊರ ರಾಜ್ಯದಿಂದ ಬಂದಿರತಕ್ಕ ಕೆಲವು ಟ್ರೇಡರ್ಸ್ ಒಂದು ಗ್ಯಾಂಗ್ ಇದೆ. ಇವತ್ತು ಯಾವುದೇ ಒಂದು ಜನೈನ್ ಪಾರ್ಟ್ಸ್‌ನ್ನು ಸಪ್ಲೈ ಮಾಡಬೇಕಾದರೆ, ಒಂದು ಟ್ರಾನ್ಸ್‌ಫಾರ್ಮ್ ಆಗಲೀ ಅಥವಾ ಇನ್ಸುಲೇಟರ್ಸ್ ಸಪ್ಲೈ ಮಾಡಬೇಕಾದರೂ ಕೂಡ ಅವರು ಇಲ್ಲಿ ಒಂದು ನೆಲೆಸುವುದಕ್ಕೆ ಸಾಧ್ಯವಿಲ್ಲ ಸಪ್ಲೈ ಮಾಡುವುದಕ್ಕೆ ಸಾಧ್ಯವಿಲ್ಲ. ಆ ರೀತಿಯಾಗಿ ನಮ್ಮ ಅಧಿಕಾರಿಗಳು ಇವತ್ತು ಕಿರುಕುಳ ಕೊಟ್ಟು ಓಡಿಸುತ್ತಿರತಕ್ಕ ಪ್ರಯತ್ನ ಈಗಾಗಲೇ ನಮ್ಮ ಕೆಇಬಿ ಮಟ್ಟದಲ್ಲಿ ಆಗಿದೆ. ಇದು ಅನೇಕ ಸಾರಿ ಅವರಿಗೆ ಗೊತ್ತಿದ್ದರೂ ಅವರು ಯಾವುದೇ ತರಹವಾದ ಕ್ರಮವನ್ನು ತೆಗೆದುಕೊಂಡಿಲ್ಲ. ಮತ್ತು ಟ್ರಾನ್ಸ್‌ಮಿಷನ್ ಲಾಸಸ್ ಅನ್ನು ನೀವು ಕಡಿಮೆ ಮಾಡಬೇಕು. ರೈತರಿಂದ ಸುಮಾರು 35 ರಿಂದ 40 ಪರ್ಸೆಂಟ್, 45 ಪರ್ಸೆಂಟ್ ವಿದ್ಯುತ್ ಶಕ್ತಿ ಉಪಯೋಗ ಆಗುತ್ತಿದೆ ಎಂದು ಹೇಳುತ್ತೀರಿ. ಟ್ರಾನ್ಸ್‌ಮಿಷನ್ ಲಾಸ್ ಬಗ್ಗೆ ತಾವು ಕೊಟ್ಟಿರತಕ್ಕ ಅಂಕಿ ಅಂಶದಲ್ಲಿ ಕೇವಲ 18 ಪರ್ಸೆಂಟ್ ನಮ್ಮ ರಾಜ್ಯದಲ್ಲಿ ಲಾಸ್ ಆಗತಕ್ಕದ್ದು ಅದರಲ್ಲೂ ಕೂಡ ರೈತರಿಂದ ಎಷ್ಟು ಬಳಕೆ ಆಗುತ್ತಿದೆ ಎಂದು ಒಂದು ಮಾತು ಹೇಳುವುದಾದರೆ, ಒಂದು ವಿಷಯದಲ್ಲಿ ರೈತರಿಂದ ಬಳಕೆ ಆಗತಕ್ಕದ್ದು ಮತ್ತು ಹಾಕತಕ್ಕ ಪ್ರೈಸಸ್ ಅನ್ನು ಕೂಡ ತಾವು ಲೆಕ್ಕ ಹಾಕಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಇರತಕ್ಕ 11 ಲಕ್ಷ ಪಂಪುಸೆಟ್‌ಗಳ ಲೆಕ್ಕದಲ್ಲಿ ಪಂಪುಸೆಟ್‌ಗಳಿಗೆ ಕನಿಷ್ಟ ಎರಡು ಅಥವಾ ಮೂರು ಎಕರೆ ಎಂದು ಹೇಳಿದರೆ ಸುಮಾರು 25 ರಿಂದ 30 ಲಕ್ಷ ಎಕರೆಗೆ ನೀರು ಹಾಯಿಸಿತಕ್ಕಂಥ ಅದರ ನೆರಳಲ್ಲೇ ರೈತರು ಬದುಕತ್ತಿರುವಂತಹ ಸಂದರ್ಭದಲ್ಲಿ ಏಕಾ ಏಕಿ ಐಪಿ ಸೆಟ್‌ಗಳಿಗೆ ತೆರಿಗೆಯನ್ನು ಹಾಕುವುದರ ಮುಖೇಣ ರಾಜ್ಯದಲ್ಲಿ ಒಂದು ಪ್ರೊಡಕ್ಷನ್ ಆಗಬಹುದು ಅಥವಾ ಇನ್ನೊಂದು ಆಗಬಹುದು. ಅದರ ಮೇಲೆ ಎಂತಹ ಒಂದು ಪರಿಣಾಮ ಆಗುತ್ತದೆ ಎನ್ನತಕ್ಕದ್ದನ್ನು ಮುಖ್ಯಮಂತ್ರಿಗಳು ತಾವು ಚಿಂತನೆ ಮಾಡಬೇಕಾಗುತ್ತದೆ. ಇವತ್ತು ಆಗತಕ್ಕ ಲಾಸಸ್ ಎಲ್ಲಾ ಕೂಡ ರೈತರಿಂದಲೇ ಆಯಿತು ಎನ್ನತಕ್ಕ ಭಾವನೆ ಏನು

ಇದೆ, ಅದನ್ನು ತಪ್ಪಿಸಬೇಕಾಗುತ್ತದೆ. ನಮಗೆ ಮೀಟರ್ಸ್ ಇಲ್ಲ., ಮೀಟರ್ ಹಾಕುತ್ತಿಲ್ಲ ಎನರ್ಜಿ ಮೀಟರ್ಸ್ ಇಲ್ಲದೇ ಇರುವಂತಹ ಸಂದರ್ಭದಲ್ಲಿ ಹಾಗೂ ವಿದ್ಯುಚ್ಛಕ್ತಿ ಕಳ್ಳತನ ಇವೆಲ್ಲವನ್ನೂ ರೈತರ ಮೇಲೆ ಹಾಕತಕ್ಕ ಪ್ರಯತ್ನ ಏನಾಗಿದೆ ಅದು ತಪ್ಪು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಿಮಗೆ ಕ್ವಾಲಿಟಿ ಸಪ್ಲೈಸ್ ಅನ್ನು ಮಾಡುವುದಕ್ಕೆ ಯಾವುದೇ ತರಹದ ಸ್ಟೆಪ್ಸ್ ಅನ್ನು ಸರ್ಕಾರದ ಮಟ್ಟದಲ್ಲಿ ತೆಗೆದುಕೊಂಡಿಲ್ಲ ಎನ್ನತಕ್ಕ ಒಂದು ಮಾತನ್ನು ಹೇಳುತ್ತೇನೆ. ಮತ್ತೆ ಬಹಳ ಮುಖ್ಯವಾದ ವಿಚಾರ. ಎನರ್ಜಿ ಮೀಟರ್ಸ್ ಬಗ್ಗೆ. ಇವತ್ತು ಎನರ್ಜಿ ಅಡಿಟ್ ಎನ್ನುವ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಎನರ್ಜಿಆಡಿಟ್ ಮಾಡುತ್ತೇವೆ ಎಂದು. ಎನರ್ಜಿ ಅಡಿಟ್ ಎಂದರೆ ಏನು ? ನಾನು ಒಂದು ಸಲಹೆ ಕೊಡಲು ಇಚ್ಛಿಪಡುತ್ತೇನೆ. ನಿಮ್ಮ ಸಬ್‌ಸ್ಟೇಷನ್ ನಿಮ್ಮ ಡಿಸ್ಟ್ರಿಬ್ಯೂಷನ್ ಸೆಂಟರ್ಸ್ ಇದೆ. ಸಬ್ ಸ್ಟೇಷನ್ಸ್‌ನಲ್ಲಿ ಡಿಸ್ಟ್ರಿಬ್ಯೂಷನ್ ಸೆಂಟರ್ಸ್‌ನಲ್ಲಿ ಕಂಪಲ್ಸರಿಯಾಗಿ ನೀವು ಎನರ್ಜಿ ಮೀಟರ್ಸ್ ಅನ್ನು ಹಾಕಿ. ಎನರ್ಜಿ ಮೀಟರ್ಸ್ ಹಾಕಿ ಆ ಸಬ್ ಸ್ಟೇಷನ್, ಅಥವಾ ಡಿಸ್ಟ್ರಿಬ್ಯೂಷನ್ ಏನು ಅಕೌಂಟಿಂಗ್ ಇದೆ, ಆ ವ್ಯಾಪ್ತಿಯಲ್ಲಿಯೇ ಒಂದು ಅಕೌಂಟಿಂಗ್ ಸಿಸ್ಟಂ ಮಾಡಿ. ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಿ. ಆ ಅಕೌಂಟಿಂಗ್‌ನಲ್ಲಿ ನೀವು ಯಾವುದೋ ಒಂದು ಸಬ್ ಸ್ಟೇಷನ್ ವ್ಯಾಪ್ತಿಯಲ್ಲಿ, ಡಿಸ್ಟ್ರಿಬ್ಯುಷನ್ ಸೆಂಟರ್ಸ್‌ನಲ್ಲಿ ಇವತ್ತು ಖರ್ಚಾಗತಕ್ಕ ವಿದ್ಯುಚ್ಛಕ್ತಿ ಪ್ರಮಾಣ ನಿಮಗೆ ಗೊತ್ತಾಗುತ್ತದೆ. ಇವತ್ತು ಆ ವ್ಯಾಪ್ತಿಯಲ್ಲಿ ನಿಮ್ಮ ಅಕೌಂಟಿಂಗ್‌ನಿಂದ ಬರತಕ್ಕ ರೆವಿನ್ಯೂ ಏನು ಎನ್ನುವುದು ಗೊತ್ತಾಗುತ್ತದೆ. ನೀವು ಇವತ್ತು ಎನರ್ಜಿ ಅಡಿಟ್‌ಗೋಸ್ಕರ ಪ್ರತಿ ಮನೆಗೂ ಎನರ್ಜಿ ಮೀಟರ್ಸನ್ನು ಹಾಕಬೇಕು. ಎನ್ನುವುದಕ್ಕಿಂತ ಹೆಚ್ಚಾಗಿ ಇವತ್ತು ನಿಮಗೆ ಬೈ ಅಂಡ್ ಲಾರ್ಜ್ ಎಲ್ಲಿ ಪವರ್ ಕದಿಯುತ್ತಿದ್ದಾರೆ, ಯಾವ ಸೆಕ್ಟಾರ್‌ನಲ್ಲಿ ಕಳ್ಳತನ ಆಗುತ್ತಿದೆ, ಯಾವ ಭಾಗದಲ್ಲಿ ಆಗುತ್ತಿದೆ ಎಂದ ಗೊತ್ತಾಗಬೇಕಾದರೆ ಎನರ್ಜಿ ಮೀಟರ್ಸ್‌ನ್ನು ಡಿಸ್ಟ್ರಿಬ್ಯೂಷನ್ ಸೆಂಟರ್ಸ್‌ನಲ್ಲಿ ಹಾಕುವುದಕ್ಕೆ ನೀವು ಮಾಡಿದರೆ ಇವತ್ತು ಅದನ್ನು ತಪ್ಪಿಸಬಹುದು ಮತ್ತು ಯಾರಿಂದ ಇವತ್ತು ವಿದ್ಯುಚ್ಛಕ್ತಿ ಕಳ್ಳತನ ಆಗುತ್ತಿದೆ ಎಂದು ಕೂಡ ಗೊತ್ತಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಮತ್ತೊಂದು ಬಹಳ ಮುಖ್ಯವಾದ ವಿಚಾರ. ಇವತ್ತು ನಿಮ್ಮ ಎಫಿಷಿಯೆನ್ಸಿ ಇಂಪ್ರೂವ್ ಆಗಬೇಕಾದರೆ 35 ಪರ್ಸೆಂಟ್ 40 ಪರ್ಸೆಂಟ್ ಸ್ಯಾಲರಿ ಮುಖೇಣ ರೆವಿನ್ಯೂ ಅನ್ನು ಖರ್ಚು ಮಾಡುತ್ತಿದ್ದೀರಿ. ಆ ಸ್ಯಾಲರಿಯನ್ನು ಇವತ್ತು ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ ಎಂದು ನನಗೆ ಗೊತ್ತಿದೆ. ಇವತ್ತು ಎಫಿಷಿಯೆನ್ಸಿ ಇಂಪ್ರೂವ್ ಮಾಡುವ ದೃಷ್ಟಿಯಿಂದ ಮಾಡಿ. ಯಾವುದೇ ತರಹವಾದಂತಹ ಹೊಸದಾಗಿ ಅಪಾಯಿಂಟ್ ಮಾಡುವ ರೀತಿಯಲ್ಲಿ ಮಾಡಿ. ಇವತ್ತು ಲಾಸಸ್ ಅನ್ನು ಎಕ್ಸ್‌ಪೆಂಡಿಚರ್ ಅನ್ನು ಕಡಿಮೆ ಮಾಡಬೇಕು. ಎನ್ನುವಂತಹ ಒಂದು

ಮಾತನ್ನು ಹೇಳುತ್ತೇನೆ. ಮತ್ತೊಂದು ಬಹಳ ಮುಖ್ಯವಾಗಿ ಇವತ್ತು ನನ್ನ ಜಿಲ್ಲೆಯ ಮಟ್ಟಿಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಇಡೀ ತುಮಕೂರು ಜಿಲ್ಲೆಯ ಸುಮಾರು 3 ಕ್ಷೇತ್ರ 10 ತಾಲ್ಲೂಕು ಇರತಕ್ಕಂತಹದರಲ್ಲಿ ಎರಡು ತಾಲ್ಲೂಕನ್ನು ಹೊರತು ಪಡಿಸಿ ಬ್ಲಾಕ್ ಏರಿಯಾ ಎಂದು ಮಾಡಿದ್ದಾರೆ. ನಾನು ಕೇಳುತ್ತೇನೆ ಬ್ಲಾಕ್ ಏರಿಯಾ ಎಂದು ಹೇಳಿ ಅದನ್ನು ತೀರ್ಮಾನ ತೆಗೆದುಕೊಂಡವರು ಯಾರು? ಕೇವಲ ಒಂದು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನವರು ಅಂಡರ್‌ಗ್ರೌಂಡ್ ಎಕ್ಸ್‌ಪ್ಲಾಯ್‌ಟೇಷನ್ ಆಗುತ್ತದೆ ಎಂದು ಹೇಳಿ ಒಂದು ವರದಿ ಕೊಟ್ಟ ತಕ್ಷಣ ಅದು ಬ್ಲಾಕ್ ಏರಿಯಾ ಎಂದು ಹೇಳಿ ಬೋರ್ಡ್ ಮಟ್ಟದಲ್ಲಿ ಒಂದು ಆರ್ಡರನ್ನು ಇಷ್ಯೂ ಮಾಡಿ, ಸರ್ಕಾರದ ಮಟ್ಟದಲ್ಲಿ ಆರ್ಡರ್ಸ್ ಇಷ್ಯೂ ಮಾಡಿಸಿಬಿಟ್ಟು ಇವತ್ತು ಯಾವ ರೈತರಿಗೂ ಸರ್ವೀಸ್ ಕೊಡುತ್ತಿಲ್ಲ. ಇವತ್ತು ನಮ್ಮಲ್ಲಿ ಸಾಲವನ್ನು ತೆಗೆದುಕೊಂಡು ರೈತರುಗಳು ಸಾವಿರಾರು ಬಾವಿಗಳನ್ನು ತೆಗೆದುಕೊಂಡು ಕುಳಿತಿರುವಂತಹ ಸಂದರ್ಭದಲ್ಲಿ ಈ ವರ್ಷದಲ್ಲೂ ನಮಗೆ ಟಾರ್ಗೆಟ್ ಕೊಡಲಿಲ್ಲ, ಈ ವರ್ಷವೂ ನಮಗೆ ಟಾರ್ಗೆಟ್ಟೂಕೊಡಲಿಲ್ಲ. ಯಾವುದೇ ಐಪಿ ಸೆಟ್‌ಗೆ ಸರ್ವೀಸ್ ಕೊಡದೇ ಇರುವಂತಹ ಸಂದರ್ಭದಲ್ಲಿ ತುಮಕೂರು ಜಿಲ್ಲೆಗೆ ಬಹಳ ದೊಡ್ಡ ಆಘಾತ ಆಗಿದೆ, ಬಹಳ ದೊಡ್ಡ ತೊಂದರೆ ಆಗಿದೆ ಈ ಒಂದು ಕೆಇಬಿಯಿಂದ ಎನ್ನತಕ್ಕದ್ದನ್ನು ಹೇಳುತ್ತೇನೆ. ಆ ಬ್ಲಾಕ್ ಏರಿಯಾ ಎನ್ನುವುದನ್ನು ಲಿಫ್ಟ್ ಮಾಡಿಸಬೇಕು.

ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿರುವಂಥದ್ದು ನಮ್ಮ ತುಮಕೂರು ವಿಭಾಗಕ್ಕೆ ಈಗಾಗಲೇ ಹೇಮಾವತಿ ನೀರು ಬರುವುದಕ್ಕೆ ಪ್ರಾರಂಭವಾಗಿದೆ. ತಿಪಟೂರು, ತುರುವೆಕೆರೆ, ಗುಬ್ಬಿ ಮತ್ತು ತುಮಕೂರಿನ ಅನೇಕ ಭಾಗಗಳಲ್ಲಿ ಇವೊತ್ತು ಅಂತರ್ಜಲ ಜಾಸ್ತಿಯಾಗಿರುವ ಸಂದರ್ಭದಲ್ಲಿ ಆ ಬ್ಲಾಕ್ ಏರಿಯಾ ಎನ್ನುವ ನಾರ್ಮ್ಸ್ ನಮಗೆ ವರ್ಕ್‌ಔಟ್ ಆಗುವುದಿಲ್ಲ, ಅದಕ್ಕೆ ಅರ್ಥ ಇಲ್ಲ. ಅದನ್ನು ಲಿಫ್ಟ್ ಮಾಡಿ: ಇವೊತ್ತು ಏನು ಕೊಳವೆಬಾವಿಗಳನ್ನು ಈಗಾಗಲೇ ಕೊರೆದು ರೈತರು ಕಾದು ಕುಳಿತಿದ್ದಾರೆ ಅವರೆಲ್ಲರಿಗೂ ಸರ್ವಿಸ್ ಕೊಡಿಸತಕ್ಕಂಥದ್ದು. ಮತ್ತೊಂದು ಬಹಳ ಮುಖ್ಯವಾದುದು 825 ಅಡಿ ಇರತಕ್ಕಂಥ ಒಂದು ಅಂತರ ಫಿಕ್ಸ್‌ಮಾಡಿದ್ದಾರೆ. ಅಧ್ಯಕ್ಷರೇ ಆ ನೋಷನ್ ಅರ್ಥ ಅಷ್ಟು ಸರಿಯಲ್ಲ. ನಿಮಗೆ ಸಾಕಷ್ಟು ಅಂಡರ್‌ಗ್ರೌಂಡ್ ವಾಟರ್ ಸಪ್ಲೈ ಇರತಕ್ಕಂಥ ಸಂದರ್ಭದಲ್ಲಿ ಈ 825 ಮೀಟರ್ ಅಂತರದಲ್ಲಿ ಯಾರೂ ಕೊಳವೆಬಾವಿಗಳನ್ನು ಕೊರೆಸಬಾರದು, ಎನರ್ಜೈಜೇಷನ್ ಮಾಡಬಾರದು ಎಂದು ಏನು ತೀರ್ಮಾನವನ್ನು ತಾವು ತೆಗೆದುಕೊಂಡಿದ್ದೀರಿ ಅದನ್ನು ವಾಪಸ್ ತೆಗೆದುಕೊಳ್ಳುವಂಥ ಒಂದು ಕೆಲಸವನ್ನು ಮಾಡಬೇಕೆಂಬ ಮಾತನ್ನು ನಾನು ಈ

ಸಂದರ್ಭದಲ್ಲಿ ಹೇಳಿ ಈಗಾಗಲೇ ಅಧ್ಯಕ್ಷರೆ ನಿಲುವಳಿ ಸೂಚನೆ ಮುಖೇನ ತಮ್ಮ ಗಮನವನ್ನು ಸೆಳೆದಿದ್ದೇವೆ. ಸಾಕಷ್ಟು ಮಳೆ ಆಗುತ್ತಿರುವ ಸಂದರ್ಭದಲ್ಲಿ ನಿಮಗೆ ಯಾವುದೇ ರೀತಿಯ ಎಕ್ಸ್‌ಪೆಂಡೀಚರ್ ಬೀಳದೆ ಇರತಕ್ಕಂಥ ಸಂದರ್ಭದಲ್ಲಿ ಇವೊತ್ತು ನೀವು ಬೆಲೆಗಳನ್ನು ಏರಿಕೆ ಮಾಡತಕ್ಕಂಥ ಮತ್ತು ವಿದ್ಯುಚ್ಛಕ್ತಿಯ ದರವನ್ನು ಏರಿಕೆ ಮಾಡಿರತಕ್ಕಂಥ ನೋಟಿಫಿಕೇಷನ್ ಏನಿದೆ ಅದನ್ನು ವಿತ್‌ಡ್ರಾ ಮಾಡಬೇಕು. ವಿತ್‌ಡ್ರಾ ಮಾಡದಿದ್ದರೆ ನಿಜವಾಗಿಯೂ ಕೂಡ ಯಾವ ಜನ ನಿಮ್ಮನ್ನು ಅಧಿಕಾರಕ್ಕೆ ತಂದು ಕೂರಿಸಿದರು ಅವರಿಗೆ ದೊಡ್ಡ ದ್ರೋಹ ಮಾಡಿದಂತಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೆ, ಈ ವಿಷಯದ ಬಗ್ಗೆ ಸಾಕಷ್ಟು ಸಾರಿ ಈ ಸದನದಲ್ಲಿ ಚರ್ಚೆಯಾಗಿ ಮಾನ್ಯ ವಿರೋಧ ಪಕ್ಷದ ನಾಯಕರುಗಳು, ವಿರೋಧ ಪಕ್ಷದ ಮುಖಂಡರುಗಳು ಸೇರಿ ರಚಿಸಲಾದ ಜಾಯಿಂಟ್ ಸೆಲೆಕ್ಟ್ ಕಮಿಟಿ ತೀರ್ಮಾನವನ್ನು ಹೋದ ಸಲ ನಾನು ಏತಕ್ಕೆ ಒಪ್ಪಿದೆ ಎಂದರೆ ಈ ವಿಷಯದ ಬಗ್ಗೆ ಚೆನ್ನಾಗಿ ನಾವು ವಿಚಾರ ಮಾಡಬೇಕು, ಸುಮ್ಮನೆ ಜನರನ್ನು ಮೆಚ್ಚಿಸುವುದಕ್ಕೋಸ್ಕರ ಹೇಳಿಕೆ ಕೊಡಲಿಕ್ಕೆ ಹೋಗಿ ಇವೊತ್ತು ಇಂಥ ಒಂದು ದುಸ್ಥಿತಿಗೆ ಬಂದಿದ್ದೇವೆ. ಎಲ್ಲಾದರೂ ಒಂದು ಕಡೆ ಸತ್ಯ ಹೇಳಬೇಕು. ರೈತರಿಗೆ, ಕಾರ್ಖಾನೆ ನಡೆಸುವವರಿಗೆ ಹಾಗೂ ವಿದ್ಯುತ್ ಉಪಯೋಗಿಸುವ ಎಲ್ಲರಿಗೂ ಹೇಳಬೇಕು. ನಾವು ಏನು ಮಾಡಿದ್ದೇವೆ ಮಾನ್ಯ ಉಪಾಧ್ಯಕ್ಷರೇ? ನೋಡಿ ಕೊಡುತ್ತೇವೆ, ಉಚಿತವಾಗಿ ಕೊಡುತ್ತೇವೆ ನೀರು ಕೊಡುತ್ತೇವೆ ಎಲೆಕ್ಟ್ರಿಸಿಟಿ ಕೊಡುತ್ತೇವೆ ಎಂದು ಹೇಳುತ್ತಾ ಹೇಳುತ್ತಾ ಎಲ್ಲಿಗೆ ಬಂದಿದ್ದೇವೆ ಎಂದರೆ ಇವೊತ್ತು ರೈತರು ಕಣ್ಣೀರು ಹಾಕುತ್ತಿದ್ದಾರೆ. ನನ್ನವೂ 3 ಪಂಪ್‌ಸೆಟ್‌ಗಳಿವೆ. ನನ್ನ ಮಕ್ಕಳೂ ವ್ಯವಸಾಯ ಮಾಡುತ್ತಾರೆ. ಅವರು ಏನು ಹೇಳುತ್ತಾರೆ ಎಂದರೆ ನೀವು ಕ್ವಾಲಿಟಿ ಮತ್ತು ಕ್ವಾಂಟಿಟಿ ಸರಿಯಾಗಿರುವ ವಿದ್ಯುತ್ ಕೊಡಿ ನಾವು 300 ರೂಪಾಯಿ ಅಲ್ಲ 500 ರೂಪಾಯಿಗಳನ್ನು ಒಂದು ಹೆಚ್‌ಪಿಗೆ ಕೊಡುತ್ತೇವೆ ಎಂದು ರೈತರು ಹೇಳುತ್ತಿದ್ದಾರೆ. ರೈತರ ಹೆಸರಿನಲ್ಲಿ ಮಾತನಾಡತಕ್ಕಂಥ ಮುಖಂಡರ ಮಾತು ಬೇರೆ. ನಿಜವಾಗಿ ರೈತರು ಏನು ಹೇಳುತ್ತಾರೆ ಎಂದರೆ ನಮಗೆ ಎಲಕ್ಟ್ರಿಸಿಟಿ ಕೊಡಿ, ಸಾಕಷ್ಟು ಎಲೆಕ್ಟ್ರಿಸಿಟಿ ಕೊಡಿ ಇದು ಒಂದು. ನಾವು ಹೆಚ್ಚಿನ ಕಾಮನ್‌ಸೆನ್ಸ್ ಎವ್ಯಾಲ್ಯುಯೇಷನ್ ಮಾಡಿ ಡ್ಯಾಮ್ಸ್ ಕಟ್ಟಿ ನೀರು ಕೊಡುವುದಕ್ಕೆ ಒಂದು ಎಕರೆಗೆ 75 ರಿಂದ 80 ಸಾವಿರ ರೂಪಾಯಿ ಖರ್ಚು ಮಾಡುತ್ತೇವೆ. ಅವನು ಪಂಪ್‌ಸೆಟ್ ಹಾಕಬೇಕೆಂದು 5 ಎಕರೆಗೆ 10 ಹೆಚ್.ಪಿ.ಪಂಪ್‌ಸೆಟ್ ಹಾಕುವುದಕ್ಕೆ 45 ರಿಂದ 50 ಸಾವಿರ ರೂಪಾಯಿವರೆಗೂ ಖರ್ಚು ಮಾಡುತ್ತಾನೆ. ಅವನ

ವಿದ್ಯುಚ್ಛಕ್ತಿ ಖರ್ಚನ್ನು ಕೊಟ್ಟರೂ ಇನ್ನೂ ಈಗ 300 ರೂಪಾಯಿ ಏನು ಮಾಡಿದ್ದೇವೆ ಅದನ್ನು 500 ರೂಪಾಯಿ ಮಾಡಿದರೂ ಅವನು ಕೊಡುವುದಕ್ಕೆ ತಯಾರಿದ್ದಾನೆ. ನಾನು ಏನು ಹೇಳುತ್ತೇನೆ ಎಂದರೆ ಕೆ. ಇ. ಬಿ. ಯವರಿಗೆ ನೀವು ಯಾವುದೇ ಟ್ಯಾರಿಫ್ ಹೈಕ್ ಮಾಡುವುದಕ್ಕೆ ಮುಂಚೆ ನಿಮ್ಮ ಮಾರ್ಯಾದೆ ಉಳಿಸಿ ಕೊಳ್ಳುವುದಕ್ಕೆ ಪವರ್‌ಕಟ್ ಅನ್ನು ರೆಡ್ಯೂಸ್ ಮಾಡಿ ಇಂಡಸ್ಟ್ರೀಸ್ ಡೆವಲಪ್‌ಆಗಲಿ, ಸಣ್ಣ ಕೈಗಾರಿಕೆಗಳು ಬದುಕಿಕೊಳ್ಳಲಿ. ನೀವು ಚೆನ್ನಾಗಿದ್ದು ನನಗೆ 4 ಕಾಸು ಜಾಸ್ತಿ ಕೊಡಿ ಎಂದು ಹೇಳಿದರೆ ಕೊಡುತ್ತಾರೆ. ನೀವು ಪವರ್‌ಕಟ್ ಮಾಡಿಕೊಂಡು ಅವರಿಗೆ ಎಲ್ಲಾ ರೀತಿಯಿಂದ ತೊಂದರೆ ಅದಾಗ ನಾವು ಟ್ಯಾರಿಫ್ ಹೈಕ್ ಮಾಡಿದರೆ ಯಾರೂ ಒಪ್ಪುವುದಿಲ್ಲ. ರೈತರೂ ಒಪ್ಪುವುದಿಲ್ಲ, ಸಣ್ಣ ಕೈಗಾರಿಕೆಗಳವರೂ ಒಪ್ಪುವುದಿಲ್ಲ. ರೈತರೂ ಒಪ್ಪುವುದಿಲ್ಲ, ಸಣ್ಣ ಕೈಗಾರಿಕೆಗಳವರೂ ಒಪ್ಪುವುದಿಲ್ಲ. ಹಾಗಾಗಿ ಇವೊತ್ತು ಇವೆರೆಲ್ಲರ ಆಶೀರ್ವಾದದಿಂದ ಒಳ್ಳೆಯ ಮಳೆ ಬಂದಿದೆ. ಇವೊತ್ತು ಹೋದ ವರ್ಷಕ್ಕಿಂತ ಜಲಾಶಯಗಳಲ್ಲಿ ಶೇಕಡ 50 ಭಾಗ ನೀರು ಜಾಸ್ತಿ ಇದೆ. ಲಿಂಗನಮಕ್ಕಿಯಲ್ಲಿ ಇನ್ನು 10 ಅಡಿ ನೀರು ಬಂದರೆ ಈಗ ಏನು 1790 ವರೆಗೆ ಹೋಗಿದೆ ಅದು 1800, 1805ಕ್ಕೆ ಬಂದರೆ ನಾವು ಸಮಾಧಾನಕರವಾಗಿರಬಹುದು. ಸೂಫಾದಲ್ಲೂ ಮತ್ತು ಬೇರೆ ಡ್ಯಾಮ್‌ಗಳಲ್ಲೂ ಅಷ್ಟೇ. ನಮಗೆ ಕಳೆದ 3 ವರ್ಷಗಳು ಅತ್ಯಂತ ದುಸ್ಥರವಾದ ಸ್ಥಿತಿ. ನಾವು ರೈತರಿಗೆ ಮಾತ್ರವಲ್ಲ ಮನೆ ಉಪಯೋಗಕ್ಕೂ ಕೂಡ ಸರಿಯಾಗಿ ದಿನಕ್ಕೆ 8 ಗಂಟೆ, 10 ಗಂಟೆ ವಿದ್ಯುತ್ ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಏತಕ್ಕೆ ಆಗಲಿಲ್ಲ? ಏನು ನಮ್ಮ ಸರ್ಕಾರ ಬಂದ ತಕ್ಷಣ ಈ ಬರ ಬಂತೇ? ಕಳೆದ 10 ವರ್ಷಗಳ ಹಿಂದೆ ಯಾವ ಯೋಜನೆಗಳನ್ನು ನಾವು ಮಾಡಿದ್ದೇವೆ ಆ ಯೋಜನೆಗಳು ಕಾರ್ಯಗತವಾಗಿ ಅವು ವಿದ್ಯುಚ್ಛಕ್ತಿ ಜನರೇಟ್ ಮಾಡುವ ಸ್ಥಿತಿಗೆ ಬಂದರೆ ನಾವು ಇವೊತ್ತಿನ ದಿವಸ ವಿದ್ಯುಚ್ಛಕ್ತಿ ಕೊಡಲಿಕ್ಕೆ ಸಾಧ್ಯ. ವಿದ್ಯುಚ್ಛಕ್ತಿ ಎಂದರೆ ಅದು ಜಾದೂ ಅಲ್ಲ. ನಾವು ಟಾರ್ಚ್ ಉಪಯೋಗಿಸುತ್ತೇವಲ್ಲಾ ಅದರ ಮೆಕ್ಯಾನಿಸಂ ಏನು ಗೋತ್ತೇ? ಅಲ್ಲಿ ವಿದ್ಯುಚ್ಛಕ್ತಿ ಸ್ಟಾಕ್ ಆಗಿರುವುದಿಲ್ಲ, ನಾವು ಎಲೆಕ್ಟ್ರಿಸಿಟಿ ಸ್ಟಾಕ್ ಮಾಡುವುದಕ್ಕೆ ಆಗುವುದೂ ಇಲ್ಲ, ಪ್ರಪಂಚದಲ್ಲಿ ಎಲ್ಲೂ ಸಹ ಮಾಡಿಲ್ಲ. ಅದು ಅಲ್ಲಿ ಜನರೇಟ್ ಆಗಬೇಕು. 3,400 ಮೆಗಾವ್ಯಾಟ್ ಇಲ್ಲಿ ಜನರೇಟ್ ಮಾಡಿದರೆ ಅದು ಕನ್‌ಸ್ಯೂಮ್ ಆಗಬೇಕಾದರೆ ಹೆಚ್ಚಿಗೆ ಕನ್‌ಸಂಮ್‌ಷನ್ ಡಿಮಾಂಡ್ ಇದ್ದರೆ ಇದು ಬ್ರೇಕ್‌ಡೌನ್ ಆಗುತ್ತದೆ. ಜನರೇಷನ್ ಕೆಪ್ಯಾಸಿಟಿ ಜಾಸ್ತಿ ಇದ್ದು ಕನ್‌ಸಂಮ್‌ಷನ್ ಕಡಿಮೆ ಇದ್ದರೆ ಅಮೆರಿಕಾ, ಸಿಂಗಪೂರ್, ಮಲೇಶಿಯಾ ರೀತಿ ನಾವು ಉಳಿಸಿಕೊಳ್ಳಬಹುದು. ಇದು ಎಳೆದ ತಕ್ಷಣ ಹರಿದುಕೊಂಡು ಬಿಡುತ್ತದೆ, ತಡೆದುಕೊಳ್ಳುವುದಿಲ್ಲ. ನಾವು ಇವೊತ್ತು ವಿದ್ಯುಚ್ಛಕ್ತಿ ಎಂದರೆ ಏನು ಎಂದು ಆಲೋಚನೆ ಮಾಡಬೇಕು. ಜನರೇಷನ್ ಇಂಪ್ರೂವ್

ಮಾಡುವುದಕ್ಕೆ ಏನು ಬೇಕು ಅದನ್ನೆಲ್ಲಾ ಮಾಡುತ್ತಿದ್ದೇವೆ. ಅವರು ನಮ್ಮನ್ನು ಈ ವಿಷಯದ ಮೇಲೆ ಏತಕ್ಕೆ ಟ್ಯಾರಿಫ್ ಹೈಕ್ ಮಾಡಿದಿರಿ ಎಂದು ಹೇಳುತ್ತಿದ್ದಾರೆ. ಯಾವುದರ ಬೆಲೆ ಕಡಿಮೆ ಇದೆ ಸ್ವಾಮಿ? ಎಲ್ಲಾ ವಸ್ತುಗಳ ಬೆಲೆ ಹಲವಾರು ಕಾರಣಗಳಿಗೋಸ್ಕರ ಜಾಸ್ತಿಯಾಗುತ್ತಿದೆ. ಅದೇ ವಿದ್ಯುಚ್ಛಕ್ತಿ ಬೆಲೆ ಏತಕ್ಕೆ ಜಾಸ್ತಿಯಾಗಬೇಕು, ಅದರ ಇನ್‌ಪುಟ್ಸ್ ಏನು? What is the factor which makes us to hike the tariff?

ಇದನ್ನೆಲ್ಲಾ ತಾವೆಲ್ಲಾ ತಿಳಿದು ಕೊಂಡಿರುವವರು. ನಾನು ಏನು ತಿಳಿದುಕೊಂಡಿದ್ದೆ ಎಂದರೆ ಈ ಎಲ್ಲಾ ವಿಷಯ ಗೊತ್ತಿರತಕ್ಕಂಥವರು, ಸರ್ಕಾರ ನಡೆಸಿದಂಥವರು. ಜಯಚಂದ್ರ ಅವರು ನೀವೇ ಒಂದು ಸಲ ಒಂದು ಹೇಳಲಿಲ್ಲವೆ? ಕೆಲವು ತಪ್ಪುಗಳನ್ನು ಪಾಯಿಂಟ್ ಜಾಬ್ ಮಾಡಿದಿರಿ, ನಾವು ಸರಿಪಡಿಸುತ್ತೇವೆ ಎಂದು ಹೇಳಿದೆ. Are you convinced that we can run this show without hiking the tariff? Are you convinced? Can you do that?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಜಾರಿಕೆ ಮಾತನ್ನು ಹೇಳಬಾರದು.

ಶ್ರೀ ಜೆ. ಹೆಚ್. ಪಟೇಲ್ : ಇದನ್ನು ಇನ್ನು ಯಾವ ಭಾಷೆಯಲ್ಲಿ ಹೇಳುವುದು? ಇಂಗ್ಲೀಷ್‌ನಲ್ಲಿ ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಟ್ಯಾಕ್ಸ್ ಹಾಕುತ್ತಾರೆ. ಯಾರೂ ಟ್ಯಾಕ್ಸ್ ಹಾಕಬೇಡಿ, ಟ್ಯಾರಿಫ್ ಹಾಕಬೇಡಿ ಹಾಗೆಯೇ ಮುಫತ್ತಾಗಿ ಧರ್ಮಶಾಲೆಯ ಹಾಗೆ ನಡೆಸಿ ಎಂದು ಯಾರೂ ಹೇಳುವುದಿಲ್ಲ. ಆದರೆ ಅದಕ್ಕೆ ಒಂದು ನೀತಿ ಇದೆ, ನಿಯಮ ಇದೆ. ಹೋದ ಸಲ ಎಷ್ಟು ಪರ್ಸೆಂಟೇಜ್ ಹೈಕ್ ಮಾಡಿದ್ದೀರಿ ಅದನ್ನೇ ಸರಿಯಲ್ಲ ಎಂದು ಹೇಳಿ ಎಲ್ಲರೂ ಜಯಿಂಟ್ ಸದನ ಸಮಿತಿ ಸೇರಿ ಅದು ಸರಿಯಲ್ಲ ಈ 12 ರೆಕಮೆಂಡೇಷನ್‌ಗಳನ್ನು ತಾವು ಒಪ್ಪಿಕೊಳ್ಳಿ, ಆಮೇಲೆ ನಿಮಗೆ ಏನಾದರೂ ಇಂಪ್ರೂವ್‌ಮೆಂಟ್ಸ್ ಕಂಡಮೇಲೆ, ನ್ಯೂನ್ಯತೆಗಳು ಕಂಡುಬಂದರೆ ಅದನ್ನು ಸರಿಪಡಿಸಿಕೊಂಡು ಮುಂದೆ ಇದಕ್ಕೆ ವಿಚಾರ ಮಾಡಬೇಕೆಂದು ಹೇಳಿ ಮತ್ತೆ ತಾವೆಲ್ಲರೂ ಇಲ್ಲಿ ಕೂಡ ಸೇರಿ ಸರ್ಕಾರಕ್ಕೆ ಒಂದು ನೋಟಿಫಿಕೇಷನ್ ಇಷ್ಯೂ ಮಾಡಿದಿರಿ. ಪುನಃ ನಾಲ್ಕೈದು ತಿಂಗಳಲ್ಲೇ ರೈಸ್ ಮಾಡಿದ್ದೀರಿ. What made you to increase the tariff? ನಿಮ್ಮ ಧಾಟಿ ನೋಡಿದರೆ....

(ಗೋಂದಲ)

ಉಪಾಧ್ಯಕ್ಷರು : ತಾವು ಮಾತನಾಡುವಾಗ ಅವರು ಕುಳಿತುಕೊಂಡು ಕೇಳಿದ್ದಾರೆ. ಅವರು ಹೇಳುವುದನ್ನು ನೀವು ಕೇಳಬೇಕಾಗುತ್ತದೆ. ಆಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟಾದ ಮೇಲೆ ತಾವು ಕ್ಲಾರಿಫಿಕೇಷನ್ ಇದ್ದರೆ ಕೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಹೇಳಿದ್ದು ರೆಕಮೆಂಡೇಷನ್ ಮೇಲೆ ಹೇಳಿದ್ದೇವೆ. 13 ವರ್ಷಗಳಿಂದ ಏನೂ ಆಗಿಲ್ಲ. ಈ ರೀತಿ ಎಲ್ಲಾ ಏತಕ್ಕೆ ಹೇಳಬೇಕು? ಯಾವ ಸರ್ಕಾರ ಬಂದರೂ....

(ಗೊಂದಲ)

ಉಪಾಧ್ಯಕ್ಷರು : ಮೊದಲು ಮಾನ್ಯ ಮುಖ್ಯ ಮಂತ್ರಿಗಳು ಮಾತನ್ನು ಮುಗಿಸಲಿ, ನಂತರ ನೀವು ಬೇಕಾದರೆ ಕ್ಲಾರಿಪಿಕೇಷನ್ ಕೇಳಿ.

ಶ್ರೀ ಜೆ. ಹೆಚ್. ಪಟೇಲ್ : ಗ್ರಾಮೀಣ ಭಾಷೆಯಲ್ಲಿ ಒಂದು ಗಾದೆ ಇದೆ....

When the reason fails, emotions rise;

Sri M. Mallikarjuna Kharge : With reason I am speaking, not philosophy or with emotion.

ಶ್ರೀ ಜೆ. ಹೆಚ್. ಪಟೇಲ್: ಈಗ ಹೇಳಿದ್ದು ಏನು, ಮೋಷನ್ನೋ ಎಮೋಷನ್ನೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮದು ಮೋಷನ್ನು, ನಮ್ಮದು ಎಮೋಷನ್ನು.

Sri J. H. Patel : I am not trying to square a point. I am trying to explain the situation to-day in the State. 10, 11 ಸಾವಿರ ಮೆಗಾವ್ಯಾಟ್‌ಗೂ ಡಿಮಾಂಡ್ ಇಟ್ಟುಕೊಂಡು 3400 ಮೆಗಾವ್ಯಾಟ್ ಉತ್ಪಾದನೆಯಾಗುತ್ತಿರುವಾಗ ಎಕ್‌ದಂ ನಮ್ಮ ಸರ್ಕಾರ ಬಂದ ತಕ್ಷಣ ಬರ ಬಂತು. ಅದಕ್ಕೇ ಮಾನ್ಯ ವಿರೋಧಪಕ್ಷದ ನಾಯಕರಿಗೆ, ಮಾನ್ಯ ಯಡಿಯೂರಪ್ಪನವರಿಗೆ ನಾನು ಇಷ್ಟೇ ಹೇಳುವುದು ಇದನ್ನು ನೀವು ರಾಜ್ಯದ, ರೈತರ, ಕೈಗಾರಿಕೆಗಳ ಹಿತದೃಷ್ಟಿಯಿಂದ ನೋಡಿ. ನಾವುಏನು ಮಾಡಬೇಕು? ನನ್ನ ಸ್ಥಾನದಲ್ಲಿ ಅವರೇ ಇದ್ದರೆ ಏನು ಮಾಡುತ್ತಾರೆ? ನಾವು ಹೇಗೆ ಪುಕ್ಕಟೆ ಕೊಡುವುದಕ್ಕೆ ಆಗುತ್ತದೆಯೇ?

ನಮ್ಮ Power generation cost at different level, ಹೈಡಲ್ಸ್ ಬೇರೆ, ಥರ್ಮಲ್ ಬೇರೆ, ಅಟಾಮಿಕ್ ಬೇರೆ, ವಾಯುವಿನಿಂದ ಬೇರೆ, ನಾನ್ ಕನ್‌ವೆನ್‌ಷನಲ್ ಎನರ್ಜಿ ಕಾಸ್ಟ್‌ಗಳನ್ನೆಲ್ಲಾ ಲೆಕ್ಕಹಾಕಿಬಿಟ್ಟು ನಾವು ಬೇರೆ ರಾಜ್ಯದಿಂದ 2.50 ಕ್ಕೆ ಕೊಂಡುಕೊಳ್ಳುತ್ತಿದ್ದೇವೆ. ಅದನ್ನು ಒಂದುಕಾಲು ರೂಪಾಯಿಗೆ ಮಾರಿದರೆ ಅದು ಎಂತಹ ವ್ಯವಹಾರ ಇರಬಹುದು ಯಡಿಯೂರಪ್ಪನವರೇ? ಎಷ್ಟು ಬುದ್ಧಿವಂತಿಕೆ ಇರಬಹುದು? ಅಂದರೆ ಈ ಲುಕ್ಸಾನು ಏತಕ್ಕೆ ಆಗುತ್ತದೆ? ಕೆಲವು ಸಲ ಸಂದರ್ಭದ ಗಂಭೀರತೆ ತಿಳಿದುಕೊಂಡು ನಾವು ಸ್ವಲ್ಪ ದುಡ್ಡು ಖರ್ಚಾದರೂ ಚಿಂತೆಯಿಲ್ಲ ಎಂದು ಕೊಡುತ್ತೇವೆ. ಇನ್ನೂ 5 ವರ್ಷಕ್ಕೆ 10 ವರ್ಷಕ್ಕೆ ನಮ್ಮ ರಾಜ್ಯದ ಸ್ಥಿತಿಗತಿ ಏನಾಗಬೇಕು? ತಾನೇ ಹೇಳಿದಿರಿ. ಅಲ್ಲಿ ಇಂಗ್ಲೆಂಡ್ ಜಪಾನ್‌ಗಳಿಗೆ ಹೋಗಿ ಅವರಿಗೆ ಬಂದು ಬಂಡವಾಳ ಹಾಕಿ ಎಂದು ಏಕೆ ಹೇಳುತ್ತೀರಿ? ನಿಮ್ಮಲ್ಲಿ ವಿದ್ಯುತ್ತೇ ಇಲ್ಲ ಹಾಗಾದರೆ ನೀವೇನು ಮಾಡುತ್ತಿದ್ದಿರಿ? ವಿದ್ಯುತ್ ಉತ್ಪಾದನೆಗೆ, ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಏನು ಬೇಕೋ ಅಷ್ಟುಹೆಚ್ಚು ಬಂಡವಾಳ ಏನೂ ಹಾಕುತ್ತಿದ್ದಿರಿ ಈಗ ಕೊಜೆಂಟ್ರಿಕ್ಸ್ ಬಗ್ಗೆ ಏಕೆ ಹೇಳಿದೆವು ನಾಗಾರ್ಜುನ್‌ಗೆ ಯಾಕೆ ಹೇಳಿದೆವು, ಬಾರ್ಜ್‌ಮೌಂಟ್‌ಗೆ ಯಾಕೆ ಹೇಳಿದೆವು 28 ಸಣ್ಣ ಪ್ರಾಜೆಕ್ಟ್ಸ್, 25-40 ಮೆಗಾವ್ಯಾಟ್ಸ್‌ದು ನಾವು ಕ್ಲಿಯರ್‌ಮಾಡಿದ್ದೇವಲ್ಲಾ ಕೆಲಸ ಶುರು ಮಾಡಿದ್ದಾರೆ, ಇವನ್ನು ಯಾರೆ ಮಾಡಿದೆವು? ತಾವು ಹೇಳಿದ ರೀತಿಯನ್ನು ಅನುಸರಿಸಿ ಅವರೆಲ್ಲಾ ಬರುವಷ್ಟು ಹೊತ್ತಿಗೇ‌ಇಲ್ಲಿ ಸಜ್ಜಿರಬೇಕೆಂದು ಮಾಡಿದ್ದು. 2 ವರ್ಷದಲ್ಲಾಗಬಹುದು 18 ತಿಂಗಳಲ್ಲಾಗಬಹುದು 3 ವರ್ಷದಲ್ಲಾಗಬಹುದು ಹೀಗೆ ವಿವಿಧ ಹಂತಗಳಲ್ಲಿ ನಾವು ಜನರೇಷನ್ ಇಂಪ್ರೂ ಮಾಡಿಕೊಳ್ಳಬೇಕು ಈ ರೀತಿ ಮಾಡುವಾಗ ನಮ್ಮ ರೈತರಿಗೆ ನಾವು ಹೇಳಬೇಕು, ನಿಮ್ಮ ಒಂದು ಮಾತು ಒಪ್ಪುತ್ತೇನೆ ನಮಗೆ ಇಂಡಸ್ಟ್ರೀಗಳಿಂದ ಬೇರೆ ಮಾರ್ಗಗಳಿಂದ ನಮ್ಮ ಎಲ್ಲಾ ಖರ್ಚು ಬರುವುದಾದರೆ ಬೇಕಾದರೆ ರೈತರಿಗೆ ಫ್ರೀಯಾಗಿ ಕೊಟ್ಟುಬಿಡೋಣ. 10 ಲಕ್ಷ ಪಂಪ್‌ಸೆಟ್ ಕೆಲಸ ಮಾಡಿ 50 ಲಕ್ಷ ಎಕರೆಗೆ ಆಗುವುದಾದರೆ ಅದರಿಂದ ಬರುವ ಫಸಲನ್ನು If we add it to the economic progress, if we can spare, I agree with you. ಆದರೆ ಈಗ ಆ ಸ್ಥಿತಿ ಇಲ್ಲ. ನಾವು ಇವತ್ತು ಅವರಿಗೆ ಹೇಳಬೇಕು. ಈ ಭಾರ ಹೊರುವುದು ನಮ್ಮ ಕೈಲಿ ಆಗುವುದಿಲ್ಲ ಅರೆ ನಾವು ರೈತರ ವಿರೋಧಿಗಳಾ? ಇವರೇ ರೈತರ ಮಕ್ಕಳು, ನಾವೆಲ್ಲಾ ಮಾರ್ವಾಡಿಗಳ ಮಕ್ಕಳಾ ಏನಿದು? ಅದೇನೇ ಇರಲಿ, ಆದ್ದರಿಂದ ಮತ್ತೊಮ್ಮೆ ನಿಮಗೆ ಕೈಮುಗಿದು ಕೇಳುತ್ತೇನೆ, ನೀವು ವಯಸ್ಸಿನಲ್ಲಿ ಚಿಕ್ಕವರು ಆದರೂ ವಿನಂತಿಮಾಡಿ ಕೊಳ್ಳುತ್ತೇನೆ. ಈ ವಿಷಯದಲ್ಲಿ ನೀವು ಇಲ್ಲದ ಹಠ ಮಾಡಲು ಹೋಗಬೇಡಿ. ನಾನು ಈ ವಿಷಯವನ್ನು ಸಾಕಷ್ಟು ಅಭ್ಯಾಸ ಹಾಗೂ ಅಧ್ಯಯನ ಮಾಡಿದ್ದೇನೆ. ನಿಜವಾಗಲೂ ನಮ್ಮ ಜನರಿಗೆ ಸವಲತ್ತು

ಕೊಡುವುದಕ್ಕೆ ಸಾಧ್ಯವಿದ್ದರೆ ನಾವು ಏತಕ್ಕೆ ಕೊಡುವುದಿಲ್ಲ. We really want them to grow. ಆದರೆ ಆಗುತ್ತಾ ಇಲ್ಲ ಇವತ್ತು ನಾವು ಅವಾಸ್ತವಿಕವಾಗಿ, ತಮ್ಮಾ ನೀನು ಚೆನ್ನಾಗಿ ಬೆಳೆಯ ಬೇಕಪ್ಪ ಅನ್ನುವುದು ಬರೀ ಶಹಬಾಶ್‌ಗಿರಿ ಅಲ್ಲ, ಇಂಡಸ್ಟ್ರೀ ಬೆಳೆಯುವುದಕ್ಕೆ ಕೃಷಿ ಬೆಳೆಯುವುದಕ್ಕೆ ಬೇರೆ ಮಲ್ಟಿನ್ಯಾಷನಲ್ಸ್‌ಏನು ಇವತ್ತು ಬರುತ್ತಿವೆ, Mr. Leader of the opposition, we have told most of them to have captive generation. ಸಕ್ಕರೆ ಫ್ಯಾಕ್ಟರಿಗಳಿಗೂ ಹೇಳುತ್ತಿದ್ದೇವೆ, ನಿಮ್ಮದೇ ಕ್ಯಾಪ್ಟೀವ್‌ಜನರೇಷನ್ ಹಾಕಿಕೊಳ್ಳಿರಿ ಎಂದು ಈ ರೀತಿ ಹೇಳಿದೆ, ಸತ್ಯಾಂಶ ಹೇಳದೆ ಹೇಳದೆ ಸುಮ್ಮನೆ ಮುಚ್ಚಿಟ್ಟುಕೊಂಡು ರಾಜ್ಯ ಈ ಸ್ಥಿತಿಗೆ ಬಂದಿದೆ. ಮಾನ್ಯ ಉಪಾಧ್ಯಕ್ಷರೇ, We were the pioneers. 1902 ನೇ ಇಸವಿಯಲ್ಲಿ ವಿದ್ಯುತ್ ಉತ್ಪಾದಿಸಿದ ರಾಜ್ಯ ಇಡೀ ಏಷ್ಯಾದಲ್ಲೇ ನಮ್ಮದು. 1902ನೇ ಇಸವಿಯಲ್ಲಿ ದೊಡ್ಡ ಉಕ್ಕಿನ ಕಾರ್ಖಾನೆ ಪ್ರಾರಂಭ ಮಾಡಿದ್ದು ವಿಶ್ವೇಶ್ವರಯ್ಯನವರು ನಾವು ಗತಕಾಲದ ವೈಭವಗಳನ್ನು ಹೇಳಿಕೊಳ್ಳುತ್ತಾ ಈಗ ಏನಪ್ಪ ನಿಮ್ಮ ಕೆಲಸ ಏನು ಅಂದರೆ, ಹೊದ್ದುಕೊಳ್ಳುವುದಕ್ಕೆ ಒಂದು ಹಚಡಾ ಇಲ್ಲ ಅಂದರೆ ಏಕಿಲ್ಲ ಏನಿಲ್ಲ ಎಂದು ಹೇಳುತ್ತೇವೆ. ವಾಟಾಳ್‌ರವರೇ ಜನರಿಗೆ ಸಾಧ್ಯವಾದಷ್ಟೂ ಅನುಕೂಲತೆ ಮಾಡಬೇಕು ಎಂಬ ಉದ್ದೇಶ ನಮಗೂ ಇದೆ. ಆದರೆ ಮಾಡುವುದಕ್ಕಾಗುವುದಿಲ್ಲ ಎಂದು ತಿಳಿದಾಗ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಬೇಕು. ನಿನ್ನ ಮನೆಯಲ್ಲಿ ಎರಡು ಕೆಜಿ ಅಕ್ಕಿ ಇಟ್ಟುಕೊಂಡು ಸಾವಿರ ಜನರನ್ನು ಇನ್‌ವೈಟ್ ಮಾಡಿದರೆ. how can you feed them? ಇಲ್ಲಪ್ಪ, ನನ್ನ ಹತ್ತಿರ ಇರುವುದು ಎರಡು ಕೆಜಿ ಅಕ್ಕಿ, ಹತ್ತು ಜನ ಇದ್ದರೆ ಹಾಕುತ್ತೇನೆ ಇಲ್ಲದಿದ್ದರೆ ದಯವಿಟ್ಟು ಹೋಗಿ ಎಂದು ಆ ತರಹ ನಿಷ್ಠೂರವಾಗಿ ಹೇಳುವ ಸರ್ಕಾರ ಬಂದಿದ್ದರಿಂದ ನಿಮಗಿಷ್ಟು ಸಿಟ್ಟಾದರೆ ಹೇಗೆ? ನಿಜ, ಜನರು ಕೋಪಗೊಂಡಿಲ್ಲ; ಅದಕ್ಕೆ ನಾನು ಸಿದ್ಧರಾಮಣ್ಣನನ್ನು ಕೇಳಿದೆ : ಇಲ್ಲ ಎಲ್ಲೆಲ್ಲಾ ಜನ ಕೋಪಗೊಂಡಿಲ್ಲ, ಇವರೇ ಕೋಪಗೊಂಡಿರುವುದು ಅಂದರು.

ಶ್ರೀ ವಾಟಾಳ್ ನಾಗರಾಜ್ : ನೀವೇನು ಜನರ ಹತ್ತಿರ ಹೋಗಿದ್ದರೋ ಇಲ್ಲವೊ ಎಂಬ ಅನುಮಾನ ಬಂದುಬಿಟ್ಟಿದೆ ನಮಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಇಲ್ಲ, ವಿಧಾನಸೌಧಕ್ಕೆ ನುಗ್ಗಿ ನಿಮಗೆ ಹೊಡೆದರೆ ಮಾತ್ರ ಕೋಪಗೊಂಡಿದ್ದಾರೆ ಅಂತಾನಾ? ಈಗ ಮಾಡಿ ತೋರಿಸಿದ್ದಾರಲ್ಲಾ, ಸಣ್ಣಪುಟ್ಟ ಚುನಾವಣೆಗಳಲ್ಲಿ ಗೊತ್ತಾಗಿದೆ.

ಶ್ರೀ ಜೆ. ಎಚ್. ಪಟೇಲ್ : ಆಗಲಿ ಖರ್ಗೇಯವರೇ, ರಣರಂಗಕ್ಕೆ ಯಾವತ್ತೂ ಸಿದ್ಧ. ತಿರುಗಿ ಯಾರೂ ಹಾಗೆಯೇ ತಿರುಗಿ ಓಡಿಹೋಗುವವರು ಅಲ್ಲಿ ಯಾರೂ ಇಲ್ಲ, ಇಷ್ಟು ವರ್ಷ ನೋಡಿದ್ದೇವೆ ಇನ್ನು ನೋಡುವುದೇನು ಬಾಕಿ ಇದೆ? ಈ ಗಂಗಾ ಕಲ್ಯಾಣ ಡೊಮೆಸ್ಟಿಕ್ ಲೈಟ್ಸ್ ಎಚ್‌ಟಿ ಯೂಸರ್, ಬಹಳ ದೊಡ್ಡ ಕಾರ್ಖಾನೆಯವರು, ಅವರು ತೆಗೆದುಕೊಳ್ಳುತ್ತಿರುವುದು ಕೇವಲ ಶೇಕಡ 23 ಆದರೆ ಅವರಿದಂ ರೆವಿನ್ಯೂ ಶೇಕಡ 68 ಹೀಗಾದರೆ ಕರ್ನಾಟಕದಲ್ಲಿ ಹೇಗೆ ಉಳಿಯುತ್ತಾರೆ? ಇಲ್ಲ ಆಂದ್ರಕ್ಕೆ ಹೋಗುತ್ತಾರೆ ಅಲ್ಲಿ ಇಲ್ಲಿ ಹೋಗುತ್ತಾರೆ. ನಾವಾಗಿ ನಾವು ಕೈಗಾರಿಕೆಗಳನ್ನು ಹೊರಗೆದಬ್ಬುವಂತಹ ಕೆಲಸ ಮಾಡಬಾರದು. ಅದಕ್ಕೆ ಇವತ್ತು ಕೃಷಿಗೋಸ್ಕರ ಉಪಯೋಗವಾಗುವುದನ್ನು ಲೆಕ್ಕಹಾಕೋಣ ಹೋದ ಸಾರೀನೇ ನಾನು ಹೇಳಿದೆ, ಮೀಟರ್‌ಹಾಕೋಣ, ಅಟ್‌ಲೀಸ್ಟ್ ರರೈತರುಎಷ್ಟು ಉಪಯೋಗಿಸುತ್ತಾರೆ ಎನ್ನುವುದಾದರೂ ಗೊತ್ತಾಗಬೇಕಲ್ಲಾ ಅದಿಲ್ಲದೆ ಕದ್ದವನದ್ದು ಸತ್ತುವನದ್ದು ಎಲ್ಲಾವನ್ನೂ ಅವರ ಅಕೌಂಟ್‌ಗೆ ಹಾಕುವುದು ಬೇಡ ಪುಟ್ಟಣ್ಣಯ್ಯನವರೆ ರೈತ ಎಷ್ಟು ಉಪಯೋಗಿಸಿದ್ದಾನೆ ಅನ್ನುವೂದಾದರೂ ಗೊತ್ತಾಗಲಿ, ಅವನಿಗೆ ನಾವು ಚಾರ್ಜು ಎರಡೇ ಪೈಸೆ ಮಾಡೋಣ. ತಮಿಳುನಾಡಿನಲ್ಲಿ ಒಂದು ಯೂನಿಟ್‌ಗೆ 50 ಪೈಸೆ ಚಾರ್ಜ್ ಮಾಡುತ್ತಾರೆ. ನಮ್ಮಲ್ಲಿ ಬರೀ ಅಂದಾಜಿನ ಮೇಲೆ ಇವನದ್ದು ಎರಡು ಸಾವಿರರ ಯೂನಿಟ್ ಎಂದು ಲೆಕ್ಕಾಚಾರ ಹಾಕಿದ್ದೇವೆ. ಅದರ ಆಧಾರದ ಮೇಲೆ ಇವತ್ತು 21 ಪೈಸೆ. ಏಕ್‌ದಂ ರೈತರಿಗೆ 50 ಪೈಸೆ ಮಾಡಿ ತಲೆಮೇಲೆ ಹೇರಬೇಕೆಂದು ಅಲ್ಲ ನಾನು ಹೇಳುತ್ತಿರುವುದು. ಯಾವನು ಎಷ್ಟು ಕದ್ದಿದ್ದಾನೆ ಎಷ್ಟು ಉಪಯೋಗ ಮಾಡಿದ್ದಾನೆ ಎಂಬುದಾದರೂ ಗೊತ್ತಾಗ ಬೇಕೋ? ಈಗ ಹೇಗಿದೆ ಅಂದರೆಹ ಮೀಟರ್ ಹಾಕುತ್ತಾರೆ ಅಂದ ಕೂಡಲೇ ಈ ಸರ್ಕಾರ ರೈತರವಿರೋಧ್ಧಿ....

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ಯಾವುದೇ ವಿಷಯಕ್ಕೂ ಚಾಕಚಕ್ಯತೆಯಿಂದ ನಿಮ್ಮದೇ ಆದ ರೀತಿಯಲ್ಲಿ ಉತ್ತರ ಕೊಡುವುದರಲ್ಲಿ ಪರಿಣತರಿದ್ದೀರಿ. ನನ್ನದೇನು ಪಾಯಿಂಟ್ ಅಂದರೆ.... ಪ್ರತಿ ದಿವಸ ಮಂಡಳಿಯಿಂದ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಸರಬರಾಜಾಗುತ್ತಿದೆ ಹಾಗೂ ಯಾವ್ಯಾವ ಕ್ಷೇತ್ರಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ನೀಡಲಾಗುತ್ತಿದೆಯೆಂಬುದರ ಬಗ್ಗೆ ನಮ್ಮಲ್ಲಿ ಇವೊತ್ತು ಲೆಕ್ಕ ಸಿಗುತ್ತಿಲ್ಲ. ಏಕೆಂದರೆ, ಶೇಕಡಾ 42 ರಷ್ಟಕ್ಕೆ ಮಾತ್ರ ವಿದ್ಯುತ್ ಸೌಲಭ್ಯ ಬೇಕೆನ್ನುವಂಥ ಗ್ರಾಹಕರುಗಳಿಗೆ ಮೀಟರೀಕರಣದ ವ್ಯವಸ್ಥೆ ಇದೆ. ಇಂತಹ ಸಂದರ್ಭದಲ್ಲಿ ಶೇಕಡಾ 23 ರಷ್ಟು ಪ್ರಮಾಣದಲ್ಲಿ ವಿದ್ಯುತ್ ಅನ್ನು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಸರಬರಾಜು ಮಾಡುತ್ತೇವೆಂದು ಹೇಳಿದರೆ ನಿಮಗೆ ಎಲ್ಲಿ ಲೆಕ್ಕ ಸಿಕ್ಕಿತು? ಉತ್ಪಾದನೆಯಾದ ವಿದ್ಯುತ್ ಎಲ್ಲೆಲ್ಲಿಗೆ ವಿತರಣೆಯಾಗುತ್ತದೆ ಎನ್ನುವುದರ

ಬಗ್ಗೆ ಲೆಕ್ಕವಾಗಲೀ, ಪುಸ್ತಕವಾಗಲೀ ಇಲ್ಲದೇ ಸಮ್ಮನೆ ವೇಗ್ ಆಗಿ ಶೇಕಡಾ 23ರಷ್ಟು ವಿದ್ಯುತ್ ವಿತರಣೆಯಾಗುತ್ತಿದೆಯೆಂದರೆ ಏನರ್ಥ? ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಎಲ್ಲೆಲ್ಲಿಗೆ ಎಷ್ಟೆಷ್ಟು ವಿತರಣೆಯಾಗುತ್ತಿದೆಯೆಂದರೆ ಏನರ್ಥ? ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಎಲ್ಲೆಲ್ಲಿಗೆ ಎಷ್ಟೆಷ್ಟು ವಿತರಣೆಯಾಗುತ್ತಿದೆಯೆಂಬ ಬಗ್ಗೆ ಲೆಕ್ಕವಾಗಲೀ, ಲೆಕ್ಕದ ಪುಸ್ತಕವಾಗಲೀ ನನಗೆ ಸಿಗುತ್ತಿಲ್ಲ.

Sri J. H. Patel : All H. P. Connections are metered.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಲ್ಲಿ ನಿಮಗೆ ಸಿಗುತ್ತದೆ. ಆದರೆ, ಟ್ರಾನ್ಸ್‌ಮಿಷನ್ ಲಾಸ್ ಥೆಫ್ಟ್ ಮತ್ತು ಸಾಮಗ್ರಿಗಳನ್ನು ಖರೀದಿಸುವಾಗ ಖರ್ಚಿನಲ್ಲಿ ಆಗುವಂಥ ಲೂಟಿಯನ್ನು ನಿಲ್ಲಿಸಿದರೆ ಸರ್ಕಾರಕ್ಕೆಸುಮಾರು 400 ರಿಂದ 500 ಕೋಟಿ ರೂಪಾಯಿಗಳಷ್ಟು ಹಣ ಉಳಿಯುತ್ತದೆ. ಇದರ ಬಗ್ಗೆ ನಾವು ಸಲಹೆ ಕೊಟ್ಟಿದ್ದೇವೆ. ನಾವು ಸರ್ಕಾರಕ್ಕೆ ಸಲಹೆ ಕೊಡಬಹುದಷ್ಟೆ. ನಾವು ಸಲಹೆ ಕೊಟ್ಟಿದ್ದೇನೆಂದರೆ, ಒಂದು ಸದನ ಸಮಿತಿ ರಚಿಸಿ ತಜ್ಞರ ಸಹಾಯ ನಮಗೆ ಕೊಡಿ, ಸಾಮಗ್ರಿಗಳನ್ನು ಖರೀದಿಸುವುದರಲ್ಲಿ ಲೂಟಿಯಾಗುತ್ತಿದೆ, ಇದನ್ನು ಸರಿಪಡಿಸಿಕೊಡಂರೆ ಸರ್ಕಾರಕ್ಕೆ 400-500 ಕೋಟಿ ರೂಪಾಯಿಗಳಷ್ಟು ಹಣ ಬರುತ್ತದೆ. ಅಲ್ಲದೆ, ಥೆಫ್ಟ್ ಸರಿಪಡಿಸಬೇಕು. ಥೆಫ್ಟ್ ಆಗುವುದನ್ನು ಪತ್ತೆ ಹಚ್ಚಲು ನಿಮ್ಮ ಮಂಡಳಿಅಧಿಕಾರಿಗಳಿಗೆ ಪೋಲೀಸ್ ಸಹಾಯ ಬೇಕು. ಆದರೆ, ಸಿ.ಓ.ಡಿ. ಯವರಿಗೆ ಅಧಿಕಾರ ಕೊಟ್ಟಿರುವಂತೆ ಜಾಗೃತ ದಳದವರಿಗೆ ಅಧಿಕಾರ ಕೊಟ್ಟಿಲ್ಲ, ಪೋಲೀಸಿನವರು ಬರಬೇಕು, ಹೇಳಬೇಕು. ಪಕ್ಕದ ರಾಜ್ಯವಾದ ಆಂದ್ರಪ್ರದೇಶದಲ್ಲಿ ಇದು ಪ್ರಾಕ್ಟೀಸ್‌ನಲ್ಲಿ ಬಂದಿದೆ . ನೀವು ಯಾವುದೂ ಬಿಗಿ ಮಾಡಲಿಲ್ಲ, ವಿದ್ಯುತ್ ಉತ್ಪಾದನೆಯನ್ನು ನಾವು ಮಾಡಬೇಕೇ? ನೀವು ಆ ಸ್ಥಾನದಲ್ಲಿ ಕುಳಿತು ಪ್ರತಿ ವರ್ಷ ಹೇಳಿಕೆ ಕೊಡುತ್ತಿದ್ದೀರಿ, ಉತ್ಪಾದನೆಯಾಗುತ್ತಿದೆ, ಅಮೆರಿಕಾದಿಂದ ಬರುತ್ತಾರೆ, ರಷ್ಯಾದಿಂದ ಬರುತ್ತಾರೆ ಎಂದಿರಿ. ಯಾರೂ ಬರಲಿಲ್ಲ ಯಾರೂ ಸರಿಪಡಿಸಲಿಲ್ಲ, ನಾವೇನಾದರೂ ಅಡ್ಡಿಪಡಿಸಿದ್ದೇವೆಯೇ?

ಶ್ರೀ ಜೆ. ಹೆಚ್. ಪಟೇಲ್ : ಯಾರ‍್ಯಾರು ಬಂದಿದ್ದಾರೋ ಅವನ್ನೆಲ್ಲಾ ನಿಮ್ಮ ಮನೆಗ ಕರೆದುಕೊಂಡು ಬರುತ್ತೇನೆ, ಅವರುಗಳನ್ನು ಪರಿಚಯ ಮಾಡಿಸುತ್ತೇನೆ, ಯಾರೂ ಬಂದಿಲ್ಲವೆಂದು ದಯಮಾಡಿ ಆ ರೀತಿ ಹೇಳಬೇಡಿ.

ಶ್ರೀ ಎಂ. ಶ್ರೀನಿವಾಸ್ : ಅವರನ್ನು ಯಡಿಯೂರಪ್ಪನವರ ಮನೆಗೆ ನೀವೇನೂ ಕರೆದುಕೊಂಡು ಬರಬೇಕಾಗಿಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಅವರು ಮನೆಗೆ ಕರೆದುಕೊಂಡು ಹೋದರೆ ನಿಮಗ್ಯಾಕೆ ಸಂಕಟ? ಅವರುಗಳ ಪರಿಚಯ ಮಾಡಿಸಿಕೊಡುತ್ತೇವೆಂದು ಹೇಳಿದೆ ಅಷ್ಟೆ.

ಶ್ರೀ ಕೆ. ಎಸ್. ಈಶ್ವರಪ್ಪ : ಇದು ಮುಖ್ಯಮಂತ್ರಿಗಳ ಬಾಯಿಂದ ಬರವಂಥ ಮಾತೇ? ದಯವಿಟ್ಟು ಸರಿಯಾಗಿ ಮಾತನಾಡುವುದನ್ನು ನೀವು ಕಲಿತುಕೊಳ್ಳಿ.

ಶ್ರೀ ವಿ. ಸೋಮಣ್ಣ : ಏನು ತಪ್ಪಾಗಿದೆ?

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಅವರು ನಮ್ಮ ನಾಯಕರು, ಅವರ ಬಗ್ಗೆ ಈ ಸದನದಲ್ಲಿ ಇಷ್ಟು ಹಗುರವಾಗಿ ಮಾತನಾಡಬೇಡಿ. ಹೀಗೇಯೇ ಮಾತನಾಡುವುದು? ಇದು ಒಳ್ಳೆಯದಲ್ಲ.

(ಗೊಂದಲ)

ಮಾನ್ಯ ಸದಸ್ಯರು : ಸಾಕು, ಕುಳಿತುಕೊಳ್ಳಿ.

ಉಪಾಧ್ಯಕ್ಷರು : ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ : ಅವರು ಮಾತನಾಡಿದ್ದು ಸರಿಯೆಂದು ಹೇಳಿದರೆ ಅವರು ತಮ್ಮ ಮಾತು ಮುಂದುವರಿಸಲಿ ನಾನು ಬೇಡವೆಂದು ಹೇಳುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಯಡಿಯೂರಪ್ಪನವರು ಒಂದು ಪಕ್ಷದ ಗೌರವಾನ್ವಿತ ನಾಯಕರೆಂದು ನಾನು ಹೇಳಿದ್ದು. ಇಲ್ಲದಿದ್ದರೆ, ನಾನು ಹೇಳುವುದಕ್ಕೆ ಹೋಗುತ್ತಿರಲಿಲ್ಲ. ವಿಶ್ವಾಸವಿದ್ದಾಗ ಮನೆಗೆ ಬರುತ್ತೇವೆ. ಇಲ್ಲದಿದ್ದರೆ ನಾನ್ಯಕೆ ನಿಮಗೆ ಹೇಳಲಿಲ್ಲ?

ಶ್ರೀ ಬಿ. ಎಸ್. ಯಡಿಯೂರಪ್ಪ : ನಿಮ್ಮ ಕಂದಾಯ ಸಚಿವರು ಹೇಳುತ್ತಿದ್ದಾರೆ, ಅವರನ್ಯಾಕೆ ನಾಯಕರೆಂದು ಹೇಳುತ್ತಿದ್ದೀರಿ ಎಂದು. ನಾನು ಸಾಮಾನ್ಯ ಕಾರ್ಯಕರ್ತನಾಗಿದ್ದು ಜನ ಸೇವಕನಾಗಿದ್ದೇನೆ. ನನಗೆ ಯಾವುದೇ ನಾಯಕತ್ವ ಬೇಡ. ನಾವು ಇಲ್ಲಿ ಗುಡ್ ಸ್ಪಿರಿಟ್‌ನಿಂದ ಹಾಗೂ ಜನರ ಹಿತದೃಷ್ಟಿಯಿಂದ ಚರ್ಚಿಸೋಣ.

ಶ್ರೀ ಹೆಚ್. ಶಿವಪ್ಪ : ಅದನ್ನು ಅಪಾರ್ಥ ಮಾಡಿಕೊಳ್ಳಬಾರದು.

Sri J. H. Patel : Coming to the subject proper, ಈಗ ವಿಷಯವೇನೆಂದರೆ, ನೋಟಿಫಿಕೇಷನ್ ಅನ್ನು ವಿತ್‌ಡ್ರಾ ಮಾಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರನ್ನೊಳಗೊಂಡಂತೆ ಎಲ್ಲಾ ವಿರೋಧ ಪಕ್ಷದವರೂ ನಿಲುವಳಿ ಸೂಚನೆಗಳನ್ನು

ಕಳುಹಿಸಿದ್ದಾರೆ. ನೋಟಿಫಿಕೇಷನ್‌ನಲ್ಲಿ ಇರುವುದಾದರೂ ಏನು? ಹಿಂದಿನ ಎಲ್ಲಾ ರೆಕಾರ್ಡ್‌ಗಳನ್ನು ನೋಡಿ, ಟ್ರಾನ್ಸ್‌ಮಿಷನ್ ಲಾಸ್, ಪವರ್ ಥೆಫ್ಟ್, Energy Audit first time we have introduced in our State.... ಅಮೂಲ್ಯರೆಡ್ಡಿಯವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಅವರು ಪ್ಲಾನಿಂಗ್ ಕಮೀಷನ್‌ನಲ್ಲಿದ್ದು ಎನರ್ಜಿ ವಿಷಯದ ಮೇಲೆ ಸಾಕಷ್ಟು ತಿಳಿದ ತಜ್ಞರೆನಿಸಿದ್ದಾರೆ. ಎನರ್ಜಿ ಆಡಿಟ್ ಅನ್ನು ಮೊದಲ ಬಾರಿ ಕೆ.ಇ.ಬಿ.ಯಲ್ಲಿ ಇಂಟ್ರಡ್ಯೂಸ್‌ಮಾಡಿದ್ದೇವೆ. ಈಗ ನಾವು ತುಮಕೂರು ಕಡೆ ಕಳುಹಿಸುತ್ತೇವೆ. ಆಗ ಬಿಲ್ಲಿಂಗ್‌ಎಷ್ಟಾಗಿದೆ? ಎಷ್ಟು ಯೂನಿಟ್‌ಗಳಿಗೆ ಬಿಲ್ಲಿಂಗ್ ಆಗಿದೆ ಇಂತಿಷ್ಟು ಕಳುವಾಗಿದೆ ಅಥವಾ ಸೋರಿಹೋಗಿದೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಈ ಕೆಲಸವನ್ನು ನಾವು ಶುರು ಮಾಡಿದ್ದೇವೆ. ಈಗ ಇಂಪ್ರೂವ್ಡ್ ಮೀಟರ್ಸ್ ಹಾಕುವುದು ಬೇರೆ, ಎನರ್ಜಿ ಆಡಿಟ್ ಬೇರೆ. ಇಂಪ್ರೂವ್ಡ್ ಮೀಟರ್‌ಗಳನ್ನು ಅಳವಡಿಸುತ್ತಿರುವುದರಿಂದ ಬರೀ ಒಂದು ಕಂಪನಿಯ ಬಗ್ಗೆಮಾತ್ರ ನಾನು ನೋಡಿದೆ. ಆ ಕಂಪನಿಯದು ಒಂದು ತಿಂಗಳಿನಲ್ಲಿ ಇಪ್ಪತ್ತು ಲಕ್ಷ ರೂಪಾಯಿಗಳಷ್ಟು ಜಾಸ್ತಿ ಬಿಲ್ ಆಯಿತು. ಅವರು ಇಷ್ಟೊಂದು ಹಣವನ್ನು ಮರು ಮಾತಿಲ್ಲದೆ ಪೇ ಮಾಡಿದ್ದಾರೆ. ಕನಿಷ್ಟ ಪಕ್ಷ ಅವರು ಕೋರ್ಟಿಗಾದರೂ ಹೋಗಿ ಛಾಲೇಂಜ್ ಮಾಡಬಹುದಿತ್ತು. ಅಂದರೆ, ಇನ್ನೆಷ್ಟು ಆತ ಕದ್ದಿರಬೇಕು. ಇಂತಹ ಉದಾಹರಣೆಗಳೂ ಇವೆ. ಇಂತಹುದನ್ನೆಲ್ಲಾ ತೆಗೆದು ಹೊರಗೆ ಹಾಕಿ ಎಂಟೈರ್ ಸಿಸ್ಟಮ್ ಅನ್ನು ಇಂಪ್ರೂವ್ ಮಾಡಿ ಟ್ರಾನ್ಸ್‌ಮಿಷನ್ ಲಾಸ್ ಇದೆ. except in japan, entire world, The transmission loss ranges from 50 to 21% a State like Bihar.... ಶೇಕಡಾ 26 ರಷ್ಟಿದೆ. ಅದಕ್ಕೋಸ್ಕರ, ಇವೊತ್ತು ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ, ಸಬ್ ಸ್ಟೇಷನ್‌ಗಳ ಬಗ್ಗೆ ಹೇಳುತ್ತಿದ್ದೇವೆ. ಈ ವರ್ಷ ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಏನು ಖರ್ಚು ಮಾಡಿದ್ದೇವೆ? ಕಳೆದ ವರ್ಷ ಎಷ್ಟು ಖರ್ಚು ಮಾಡಿದ್ದೇವೆ? ಟ್ರಾನ್ಸ್‌ಮಿಷನ್ ಲೈನ್ಸ್ ಎಷ್ಟು ಹಾಕಿದ್ದೇವೆ? ಇದನ್ನೆಲ್ಲವನ್ನೂ ನೀವು ದಯವಿಟ್ಟು ನೋಡಬಾರದೇ? ನಾವು ಮಾಡಿರುವ ಕೆಲಸವನ್ನು ನೋಡಿಯಾದರೂ ಹೌದು, ಕೆಲಸ ಮಾಡಿದ್ದಾರೆ. ಎಂಬ ಒಳ್ಳೆಯ ಮಾತು ಸಹ ನಿಮ್ಮಿಂದ ಬರದಿದ್ದರೆ ಹೇಗೆ? ಬದಲಾಗಿ ಸದನದಲ್ಲಿ ಎಲ್ಲವನ್ನೂ ಕ್ರಾಸ್ ಎಕ್ಸಾಮಿನೇಷನ್ ಮಾಡುವುದು, ನಾವೆಲ್ಲಾ ಅಪರಾಧಿಗಳು!

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ ರೆಕಾರ್ಡ್ ಸರಿಯಾಗಬೇಕು.

ಶ್ರೀ ಜೆ. ಹೆಚ್. ಪಟೇಲ್ : ಹೇಳಿ ತಪ್ಪಿದ್ದರೆ ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಒಂದು ಸಂತೋಷದ ವಿಷಯವೇನೆಂದರೆ, ಸದನದಲ್ಲಿ ಆಡಳಿತ ಪಕ್ಷದ ಎಲ್ಲಾ ಸದಸ್ಯರುಗಳಿದ್ದು ಇಲ್ಲಿ ಎಲ್ಲರೂ ಒಗ್ಗಟ್ಟು ಪ್ರದರ್ಶನ ಮಾಡುವಂತೆ ವರ್ತಿಸುತ್ತಾರೆ, ನಾವು ನಿಮ್ಮ ಜೊತೆಗಿದ್ದೇವೆಂದು ಹೇಳಿ ಹೊರಗಡೆ ಹೋದಾಗ ಏನೋ ಮಾಡುತ್ತಾರೆ ಆದುದರಿಂದ ಪ್ರದರ್ಶನದಿಂದ ಏನೂ ಉಪಯೋಗವಾಗುವುದಿಲ್ಲ. ಪ್ರಾಮಾಣಿಕವಾಗಿ ಪಟೇಲರ ಪರವಾಗಿರುವವರು ಎದ್ದು ನಿಂತುಕೊಳ್ಳಿ.

(ಗೊಂದಲ)

ಮಾನ್ಯ ಸದಸ್ಯರು : ನಮ್ಮ ನಾಯಕರು ಎದ್ದು ನಿಲ್ಲು ಅಂದರೆ ಎಲ್ಲರೂ ಎದ್ದು ನಿಲ್ಲುತ್ತೇವೆ. ತಾವೇಕೆ ತಾಪತ್ರಯ ಪಡುತ್ತೀರಿ?

ಶ್ರೀ ಜೆ. ಹೆಚ್. ಪಟೇಲ್ : ಇನ್ನೊಂದು ದೊಡ್ಡ ರಹಸ್ಯ ನಿಮಗೆ ಗೊತ್ತಿಲ್ಲ. ಅವರ್‍ಯಾರಿಗೂ ನನ್ನ ಮೇಲೆ ಸಿಟ್ಟಿಲ್ಲ, ಮಲ್ಲಿಕಾರ್ಜುನ ಖರ್ಗೆಯವರಿಗೂ ಸಿಟ್ಟಿಲ್ಲ ; ಯಡಿಯೂರಪ್ಪನವರಿಗೂ ಸಿಟ್ಟಿಲ್ಲ. ಸುಮ್ಮನೆ ಮಾತನಾಡುತ್ತಾರಷ್ಟೆ. ಇವರಿಗೆ ಯಾರು ಬೇಡ ಅನ್ನುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವೈಯಕ್ತಿಕವಾಗಿ ನಿಮ್ಮ ಮೇಲೆ ಸಿಟ್ಟಿಲ್ಲ. ಆದರೆ, ನಿಮ್ಮ ಸರ್ಕಾರದ ಮೇಲೆ, ಮುಖ್ಯಮಂತ್ರಿಗಳು ಮೇಲೆ ನಮಗೆ ಸಿಟ್ಟಿದೆ. ನೀವು ಹೊರಡಿಸಿರುವ ನೋಟಿಫಿಕೇಷನ್ ಅನ್ನು ನೋಡಿದರೆ ನಿಮಗೇ ಸಿಟ್ಟು ಬರುತ್ತಿತ್ತು. ಆದರೆ ಆ ಕಡೆ ಕುಳಿತು ಇಷ್ಯೂ ಮಾಡಿದ್ದೀರಿ, ಅದಕ್ಕೆ ಸಿಟ್ಟು ಬರುತ್ತಿಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಇದರ ಮೇಲೆ ಹಿಂದೆ ಬೇಡಿಕೆಗಳು ಬಂದಿದ್ದು ದಿವಸಗಟ್ಟಲೆ ಮಾತನಾಡಿದ್ದೇವೆ. ನಾನು ನಿಮ್ಮಲ್ಲಿ ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತಿದ್ದೇನೆ. ನೀವು ಇದಕ್ಕೆ ಸಹಕರಿಸಬೇಕು. ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾಭಿವೃದ್ಧಿ ಆಗಬೇಕೆಂದರೆ ನಾವು ಇವೊತ್ತು ಟಾರಿಫ್ ಹೈಕ್ ಮಾಡದೆ ಮಾರ್ಗವಿಲ್ಲ. ಉದಾಹರಣೆಗೆ, ಮಹಾರಾಷ್ಟ್ರಕ್ಕಿಂತ ನಮ್ಮಲ್ಲಿ ಕಡಿಮೆ ಇದೆ, ತಮಿಳುನಾಡಿನಲ್ಲಿ ನಮಗಿಂತಲೂ ಕಡಿಮೆ ಇದೆ, ರಾಜಸ್ತಾನದಲ್ಲಿ ನಮಗಿಂತಲೂ ಎರಡು ಪಟ್ಟು ಜಾಸ್ತಿ ಇದೆ, ಆಂಧ್ರಪ್ರದೇಶ ಮತ್ತು ನಮ್ಮ ರಾಜ್ಯದ್ದೂ ಹೆಚ್ಚು ಕಡಿಮೆ ಇದೆ. After this hike, we are equal to Andhra Pradesh. ಆದುದರಿಂದ, ಇವೊತ್ತು ರಾಜ್ಯದ ಹಿತದೃಷ್ಟಿಯಿಂದ ಸಮಗ್ರವಾಗಿ ಪ್ರಗತಿಯಾಗಬೇಕು, ಔದ್ಯೋಗಿಕ, ಕೃಷಿ ಹಾಗೂ ತೋಟಗಾರಿಕೆ ಕ್ಷೇತ್ರಗಳಲ್ಲಿ ಪ್ರಗತಿಯಾಗಬೇಕು. ಬಹು ರಾಷ್ಟ್ರೀಯ ಸಂಸ್ಥೆಗಳವರು ಏನು ಬರುತ್ತಾರೆ ಅವರ ಕಾರಣದಿಂದ ಆಗಬೇಕೆಂದರೆ ಸಹಕರಿಸಿ. ಸುಮ್ಮನೆ ನೋಟಿಫಿಕೇಷನ್ ಅನ್ನು ವಿತ್‌ಡ್ರಾ ಮಾಡಿ ಎಂದರೆ ಏನರ್ಥ? ನಾನು ಇನ್ನೊಮ್ಮೆ ಅತ್ಯಂತ ವಿನಯದಿಂದ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದೇನೆಂದರೆ, ನಾವು ನೋಟಿಫಿಕೇಷನ್ ಅನ್ನು ವಿತ್‌ಡ್ರಾ ಮಾಡುವುದಕ್ಕಾಗುವುದಿಲ್ಲ, ದಯವಿಟ್ಟು ಸಹಕರಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ನಾವು ಹಠ ಹಿಡಯಬೇಕೆಂದಲ್ಲ. ಅಥವಾ ಇದರ ಬಗ್ಗೆ ಪದೇ ಪದೇ ಚಳುವಳಿ ಮಾಡಿ, ಧರಣಿ ಕುಳಿತು ನಿಮ್ಮನ್ನು ಬಗ್ಗಿಸಬೇಕೆನ್ನುವ ದೃಷ್ಟಿಯಿಂದಲ್ಲ. ತಾರು ಯೋಚಿಸಬೇಕು. 1993ರಲ್ಲಿ ರೈತರು ಪಂಪುಸೆಟ್ಟುಗಳಿಗೆ ಎಷ್ಟು ದರ ಕೊಡುತ್ತಿದ್ದರು? ಆಲ್ ಎಲೆಕ್ಟ್ರಿಕ್ ಹೋಮ್ಸ್‌ಗೆ ಎಷ್ಟು ದರ ಕೊಡುತ್ತಿದ್ದರು? ಸಣ್ಣ ಪ್ರಮಾಣದ ಕೈಗಾರಿಕೆಗಳವರು ಎಷ್ಟು ದರ ಕೊಡುತ್ತಿದ್ದರು? ಉಳಿದ ಕೈಗಾರಿಕೆಗಳವರು ಯಾವ ರೀತಿಯಾಗಿ ಎಲೆಕ್ಟ್ರಿಸಿಟಿ ಬಿಲ್‌ಕೊಡುತ್ತಿದ್ದರು? ತಾವೇ ಹೇಳಿದಂತೆ ಮೂರು ವರ್ಷಗಳ ಕಾಲ ಇದು ಅನೌನ್ಸ್ ಆಗಲ್ಲಿಲ್ಲ. ಅನೌನ್ಸ್ ಆದನಂತರ ತಾವೇನು ಮಾಡಿದಿರಿ?

(ಈ ಹಂತದಲ್ಲಿ ಸಭಾಧ್ಯಕ್ಷರು ಶ್ರೀ ರಮೇಶ್ ಕುಮಾರ್ ರವರು ಪೀಠವನ್ನಲಂಕರಿಸಿದರು)

ಸಾರಾಸಗಾಟಾಗಿ ಶೇಕಡ 15 ರಿಂದ 150ರ ವರೆಗೆ ಅನೌನ್ಸ್ ಮಾಡಿದಿರಿ. ಇದು ಸರಿಯಿಲ್ಲವೆಂದು ನಾವು ಹೇಳಿದ್ದೇವೆ. ಏಕೆಂದರೆ, ಹಿಂದಿನಿಂದಲೂ ವಿದ್ಯುತ್ ದರ ಏರಿಸಿಲ್ಲವೆಂದು ಈಗ ಏಕಾಏಕಿ ಶೇಕಡಾ 250, 300 ರಷ್ಟು ಏರಿಸಿದರೆ ಇದ್ಯಾವ ನ್ಯಾಯ? ಯಾವುದಕ್ಕಾದರೂ ಒಂದು ಕ್ರಮ ಬೇಕಲ್ಲಾ ಸೇಲ್ಸ್ ಟ್ಯಾಕ್ಸ್‌ನ್ನು ನೀವು ಏರಿಸಿದಿರಿ. ಪ್ರತಿ ಸಲವೂ ಶೇಕಡಾ 1ರಷ್ಟು, ಎರಡರಷ್ಟು ಒಂದೂವರೆಯಷ್ಟು, ಕೆಲವು ಸಲ 0.5 ಶೇಕಡಾದಷ್ಟು ಏರಿಸುತ್ತೀರಿ. ಆದರಲ್ಲೂ ಎಲೆಕ್ಟ್ರಿಕ್ ದರದಲ್ಲಿ ಮಾತ್ರ ಸುಮಾರು ಒಂದೇ ವರ್ಷದಲ್ಲಿ ವಿಶೇಷವಾಗಿ 6-7 ತಿಂಗಳುಗಳಲ್ಲಿ ಒಂದೇ ಸಲ ಶೇಕಡ 150 ರಷ್ಟು ಏರಿಸಿ ಈಗ ಶೇಕಡ 250 ರಷ್ಟೆಂದರೆ 400 ಶೇಕಡಾದಷ್ಟಾಯಿತು. ಕೆಲವು ಐಟಂಗಳಿಗಂತೂ ಶೇಕಡ 30 ರಿಂದ 40 ರಷ್ಟಕ್ಕೆ ಏರಿಸಿದ್ದೀರಿ. ಇದ್ಯಾವ ನ್ಯಾಯ? ಇದರ ಬಗ್ಗೆ ನೀವು ಉಳಿದಂತಹುದನ್ನು ಹೇಳಿಕೊಂಡಿರಿ, ಅದು ಎಲ್ಲರಿಗೂ ಗೊತ್ತಿದೆ. ಎಲ್ಲಾ ಸರ್ಕಾರಗಳೂ ಇವೊತ್ತಿನವರೆವಿಗೆ ಮಾಡಿಕೊಂಡು ಬಂದಿರುವುದಕ್ಕೆ 3,470 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಿರುವುದು. ನಿಮ್ಮ ಸರ್ಕಾರ ಹಿಂದೆ ನಾಲ್ಕು ವರ್ಷಗಳ ಕಾಲ ಆಡಳಿತ ನಡೆಸಿದ್ದಾಗ ಈ ಉತ್ಪಾದನೆ ಮಾಡಿದ್ದಲ್ಲ. ಇದು ಅಕ್ಯುಮಲೇಟೆಡ್, ಎಲ್ಲರ ಎಫರ್ಟ್‌ನಿಂದ

ಇವತ್ತಿನ ದಿವಸ 3,470 ಮೆ. ವ್ಯಾ ವಿದ್ಯುತ್ ಉತ್ಪತ್ತಿ ಇದೆ. ಆದರೆ ಇನ್ನು ಎಷ್ಟು ಹೆಚ್ಚು ಉತ್ಪತ್ತಿ ಮಾಡಬೇಕು ಎನ್ನತಕ್ಕಂಥ ಬಗ್ಗೆ ಜಂಟಿ ಸಮಿತಿಯವರು ವರದಿ ಕೊಟ್ಟಿದ್ದಾರೆ. ಆದರ ಬಗ್ಗೆ ತಾವು ಏನು ಕ್ರಮ ಹಾಕಿಕೊಳ್ಳುತ್ತೇವೆ ಎನ್ನತಕ್ಕಂಥದ್ದನ್ನು ಹೇಳಿದಿರಿ. ಆದರೆ ಇಲ್ಲಿ ನಾವು ಕೇಳುವುದು, ಇವತ್ತಿನ ದಿವಸ ರೈತರಿಗೆ ಇಷ್ಟೊಂದು ಭಾರ ಹಾಕಿದ್ದೀರಿ, ಅದು ಯಾವುದೆಂದರೆ, ಭಾಗ್ಯ ಜ್ಯೋತಿ ಆಶ್ರಯದಲ್ಲಿ ಅವರು ಒಂದು ಸಣ್ಣ ದೀಪ

ಹಾಕಿಕೊಂಡಿದ್ದಾರೆ. ಅವರಿಗೂ ಕೂಡ ಇವತ್ತು 3.50 ಪೈಸೆ ಚಾರ್ಜ್ ಫಿಕ್ಸ್ ಮಾಡಿ, ಪುನಃ ಅದರ ಮೇಲೆ 10 ರೂಪಾಯಿ ಕೊಡತಕ್ಕಂತಹ ವ್ಯವಸ್ಥೆ ತಾವು ಏನು ಮಾಡಿದ್ದೀರಿ ಮತ್ತು ಅದೇ ರೀತಿ ಪಂಪ್‌ಸೆಟ್ ಮೇಲೆ 300 ರೂ. ಮಾಡಿ ಪರ್ ಯುನಿಟ್‌ಗೆ 50 ಪೈಸೆ ಅದರ ಮೇಲೆ ಕನ್‌ಸ್ಯೂಮ್ ಮಾಡತಕ್ಕಂತದ್ದು ಅಫ್ಟರ್ 10 ಹೆಚ್.ಪಿ.ಗೆ ಇದು ಸರಿ ಇಲ್ಲ. ಅದುದರಿಂದ ತಮಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ಹಿರಿಯರಿದ್ದೀರಿ, ನಾನೂ ತಮಗೆ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ಈ ನೋಟಿಫಿಕೇಷನ್ ವಿತ್‌ಡ್ರಾ ಮಾಡಿ. ಕಳೆದ ಸಲ ತಮಗೆ ಹೇಗೆ ಸಹಕಾರ ನೀಡಿದ್ದೆವು, ಅದೇ ರೀತಿಯಾಗಿ ಈ ಸಲವೂ ಸಹಕಾರ ನೀಡುತ್ತೇವೆ. ಅದಕ್ಕೋಸ್ಕರ, ನಾವು ಕುಳಿತುಕೊಂಡು ಅದರ ಬಗ್ಗೆ ಯೋಚನೆ ಮಾಡಿ, ಚಿಂತನೆ ಮಾಡಿ ಏನು ಮಾಡಬೇಕು ಎನ್ನತಕ್ಕಂತದ್ದನ್ನು ಮಾಡೋಣ. ಅದು ಬಿಟ್ಟು ನೀವು, ಇಲ್ಲ, ನಾನು ವಿತ್‌ಡ್ರಾ ಮಾಡಿಕೊಳ್ಳುವುದಿಲ್ಲ ಎಂದರೆ, ಅನಿವಾರ್ಯವಾಗಿ ನಾವು ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

(ಮಾನ್ಯ ಶ್ರೀ ಮಲ್ಲಿಕಾರ್ಜುನ್ ಖರ್ಗೆ ಅವರು ಈ ಹಂತದಲ್ಲಿ ಧರಣಿ ಕುಳಿತುಕೊಳ್ಳಲು ಹೊರಟರು)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಖರ್ಗೆ ಅವರೇ, ನಾವು ಒಟ್ಟಿಗೆ ಹೋಗೋಣ ಬನ್ನಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳೇ, ಪ್ರಮಾಣ ಮಾಡಿ ಹೇಳುತ್ತೇನೆ. ನಿಮ್ಮ ಪಕ್ಷದವರೇ ಆದ ಸುಮಾರು 50 ಜನ ಶಾಸಕರು ನಮ್ಮಲ್ಲಿಗೆ ಬಂದು ಏನು ಹೇಳಿದ್ದಾರೆ ಎಂದರೆ, ಈ ವಿದ್ಯುತ್ ದರ ಜಾಸ್ತಿಯಾಗಿದೆ, ಇದು ಮಾಡಿರುವುದು ಸರಿ ಇಲ್ಲ. ಇದನ್ನು ಕಡಿಮೆ ಮಾಡಲು ಏನಾದರೂ ಮಾಡಿ, ನಾವು ನಿಮಗೆ ಸಹಕಾರ ಕೊಡುತ್ತೇವೆ. ಮತ್ತು ನಮ್ಮ ಪಕ್ಷದಲ್ಲಿ ಮುಖ್ಯ ಮಂತ್ರಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ನಿಮ್ಮ ಪಕ್ಷದ 10 ಜನ ಶಾಸಕರು ನಮ್ಮ ಹತ್ತಿರ ಬಂದು ಖರ್ಗೆ ಅವರು ಅಂತಾದ್ದೇನಾದರೂ ಮಾಡಿದರೆ, ನಾವು ನಿಮ್ಮ ಜೊತೆ ಬರುತ್ತೇವೆಂದು ಹೇಳಿದ್ದಾರೆ.

+ ಶ್ರೀ ಬಿ. ಎಸ್. ಯಡಿಯೂರಪ್ಪ : ಇದುವರೆವಿಗೂ ಅಂದರೆ ಕಳೆದ ಒಂದು, ಒಂದೂಕಾಲು ವರ್ಷ ನಡೆದಂತಹ ಕಾರ್ಯ ಕಲಾಪಗಳಲ್ಲಿ ರಾಜ್ಯದ ಜನರ ಹಿತದೃಷ್ಟಿಯಿಂದ ನಾವು ತಮಗೆ ಗಂಭೀರವಾದ ಸಲಹೆಗಳನ್ನು ಕೊಡುತ್ತಾ ಇದ್ದೆವು ಆಗ ತಾವು ವಿರೋಧಪಕ್ಷದ ನಾಯಕರು ಕೊಟ್ಟಂತಹ ಸಲಹೆಗಳನ್ನು ಪೂರ್ಣವಾಗಿ ಕೇಳದಿದ್ದರೂ ಅಲ್ಪಸ್ವಲ್ಪವಾದರೂ ಕೇಳುತ್ತಿದ್ದೀರಿ. ಆದರೆ ಈಗ ನಿಮ್ಮ ಸುತ್ತಮುತ್ತಲಿನ ಜನ ನಿಮಗೆ ಹೇಳಿ ಕೊಡುತ್ತಿದ್ದಾರೆ. ಏನೆಂದರೆ ವಿರೋಧ ಪಕ್ಷದವರು ಕೇಳಿದ ತಕ್ಷಣ ನೀವು ಒಪ್ಪಿಕೊಳ್ಳುತ್ತೀರಾ ಅದರಿಂದ ಅವರಿಗೆ ಲಾಭವಾಗುತ್ತದೆ, ಎಂಬ ಅವರ ಮಾತು ಕೇಳಿದರೆ ನಿಮ್ಮ ತಲೆ ಮೇಲೆ ನೀವೇ ಕಲ್ಲು ಹಾಕಿಕೊಂಡು ಹಾಗೆ ಹಾಗುತ್ತದೆ. ರಾಜ್ಯದ ಜನರು ಬೀದಿ ಪಾಲಾಗುತ್ತಾರೆ, ಆದ ಕಾರಣ ಅವರ ಮಾತನ್ನು ಕೇಳಬೇಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಎದೆ ಮುಟ್ಟಿಕೊಂಡು ಹೇಳಿ. ಕಳೆದ ವರ್ಷ ಜಂಟಿ ಸದನ ಸಮಿತಿ ಮಾಡಿದಾಗ ನಾವೇನಾದರೂ ನಿಮಗೆ ತೊಂದರೆ ಕೊಟ್ಟೆವಾ? ಎಲ್ಲರೂ ಒಂದಾಗಿ ಎಲ್ಲರೂ ಒಪ್ಪುವ ರೀತಿಯಲ್ಲಿ ವರದಿಯನ್ನು ಕೊಟ್ಟೆವು. ನಾನು ಹೇಳುವುದೇನೆಂದರೆ, 8 ತಿಂಗಳಲ್ಲಿ 1 1/2 ಸಾವಿರ ಕೋಟಿ ರೆವಿನ್ಯೂ ಬರುತ್ತಿದ್ದಂತಹ ಇಲಾಖೆಯಲ್ಲಿ ಒಂದು ಸಾವಿರ ಕೋಟಿ ಜಾಸ್ತಿ ಮಾಡಿದರೆ ಅದನ್ನು ತಡೆದುಕೊಳ್ಳುವಂತಹ ಶಕ್ತಿ ಸಾಮಾನ್ಯ ಗ್ರಾಹಕರಿಗೆ, ರೈತರಿಗೆ ಇಲ್ಲಾ. ತಾವು ಇದರ ಬಗ್ಗೆ ಯೋಚನೆ ಮಾಡಿ. ನನ್ನ ಸರ್ಕಾರ ಗಟ್ಟಿ ಮಾಡಬೇಕು, ಹಣಕಾಸಿನ ಪರಿಸ್ಥಿತಿ ಜನರ ದೃಷ್ಟಿಯಿಂದ ಸರಿಯಾಗಬೇಕು ಎಂದು, ಯಾವುದೋ ಕಾರಣಕ್ಕೆ ಸುಳ್ಳು ಘೋಷಣೆ ಮಾಡಿಕೊಂಡು ಬಂದು ಕುಡಿಯುವ ನೀರಿನ ದರ ಜಾಸ್ತಿ ಮಾಡಿದಿರಿ, ಮನೆ ತೆರಿಗೆ ಜಾಸ್ತಿಮಾಡಿದಿರಿ, ಕೆಎಸ್‌ಆರ್‌ಟಿಸಿ ದರ ಜಾಸ್ತಿ ಮಾಡಿದಿರಿ. ಮನ ಬಂದಂತೆ ಸ್ಟ್ಯಾಂಪ್ ಡ್ಯೂಟಿ ಜಾಸ್ತಿ ಮಾಡಿದಿರಿ, ಸದನದ ಸಮಿತಿ ಮಾಡುವುದಕ್ಕೆ ತಾವು ಏತಕ್ಕೆ ಒಪ್ಪಿಕೊಳ್ಳುವುದಿಲ್ಲ? ತಾವೇನೋ ಪ್ರಚಾರಕ್ಕಾಗಿ ನಾವು ಮಾಡುತ್ತೇವೆಂದು ಹೇಳಿದಿರಿ. ನಾವು ಏನು ಹೇಳುವುದಕ್ಕೆ ಹೊರಟಿದ್ದೇವೆಂದರೆ, ಇವತ್ತು ಒಂದು ಸದನ ಸಮಿತಿ ಮಾಡಿ, ಎಕ್ಸ್‌ಪರ್ಟ್ಸ್‌ಗಳನ್ನು ನಮ್ಮ ಸಹಾಯಕ್ಕೆ ಕೊಡಿ. ಮೂರು ನೂರು ಕೋಟಿ ರೂಪಾಯಿ ಏನು ಏರಿಸಿದ್ದೀರಿ, ಅದರಲ್ಲಿ ಪರ್‌ಚೇಸ್ ಮಾಡುವಂತಹ ಕಾಲದಲ್ಲಿ ವಿದ್ಯುತ್ ಕಳತನ ಆಗತಕ್ಕಂಥದ್ದು ಮುಂತಾದವು ಲೂಪ್ ಹೋಲ್ಸ್ ಇದೆ. ಅದರಲ್ಲಿ ನೂರರಲ್ಲಿ ಒಂದನೇ ಭಾಗ ಮಾತ್ರ ನೀವು ಹಿಡಿಯುತ್ತಾ ಇದ್ದೀರಿ ನಮ್ಮ ಕಣ್ಣು ಎದುರಿಗೆ ಇನ್ನೂ 99 ಭಾಗ ಲೂಟಿ ನಡೆಯುತ್ತಾ ಇದೆ. ನೀವು ಜಂಟಿ ಸದನ ಸಮಿತಿ ಮಾಡಿ. ಈ ಮೂರು ನೂರು ಕೋಟಿ ರೂಪಾಯಿಗಳನ್ನು ಈಗ ಇರುವಂತಹ ತೆರಿಗೆಯಲ್ಲೇ ಉಳಿಸಿಕೊಟ್ಟರೆ ಅದನ್ನು ನೀವು ಒಪ್ಪಿಕೊಳ್ಳಬೇಕಾಲ್ಲಾ? ನಮಗೆ ಮೂರು ತಿಂಗಳು ಟೈಂ ಕೊಡಿ, ನಾವು ಅದನ್ನು

ಮಾಡಿ ತೋರಿಸದಿದ್ದರೆ ನೀವು ಇನ್ನೂ 13 ಪರ್ಸೆಂಟ್ ಜಾಸ್ತಿ ಮಾಡಿಕೊಂಡು ಹೋಗಿ. ಎರಡನೆಯದಾಗಿ, ವಿನಾಕಾರಣ ಜಂಟಿ ಸದನ ಸಮಿತಿಯನ್ನು ಒಪ್ಪಿಕೊಂಡು, ಜಂಟಿ ಸದನದ ಸಮಿತಿ ಹೇಳದಿರುವುದನ್ನು ಪ್ರತಿ ವರ್ಷ 13 ಪರ್ಸೆಂಟ್ ಹೆಚ್ಚು ಮಾಡಲು ಎಲ್ಲರೂ ಒಪ್ಪಿದ್ದಾರೆಂದು ನಿಮ್ಮ ಅಧಿಕಾರಿಗಳು ಹೇಳುತ್ತಾರೆಂದರೆ ಸರ್ಕಾರದವರು ಹೇಳುತ್ತಾರೆಂದರೆ, ನಾವು ಯಾರ ಹತ್ತಿರ ಹೇಳಬೇಕು? ಈಗ ಜಂಟಿ ಸದನದ ಸಮಿತಿ ಮಾಡುವುದು ಅನಿವಾರ್ಯ ಅದನ್ನು ಒಪ್ಪುವುದು, ಬಿಡುವುದು ಬೇರೆ ವಿಚಾರ. ರಾಜ್ಯದ ಜನರ ಹಿತದೃಷ್ಟಿಯಿಂದ ಈ ರೀತಿ ಕಪಿ ಮುಷ್ಠಿಗೆ ನೀವು ಹೋಗುವುದು ನಿಮ್ಮ ದೃಷ್ಟಿಯಿಂದ ಒಳ್ಳೆಯದು ಅಲ್ಲ. ಈಗ ಪರಿಸ್ಥಿತಿ ಹದಗೆಟ್ಟಿದೆ, ನೀವು ಏನು ಹೇಳಿದ್ದಿರಿ ಜನ ಒಪ್ಪಿದ್ದಾರೆ ಎಂದು ಆಗಲಿ ಅದಕ್ಕೆ ಏನಾದರೂ ಮಾಡಿ, ಈ ನೋಟಿಫಿಕೇಷನ್ ತಡೆ ಹಿಡಿಯಿರಿ. ಜನರ ಅಭಿಪ್ರಾಯ ಕೇಳಿ, ನೀವು ನಮ್ಮ ಜೊತೆ ಬನ್ನಿ ಹೋಗೋಣ. ಜನ ಪ್ರತಿನಿಧಿಗಳಿದ್ದಾರೆ, ಅವರು ನಮ್ಮ ಮಾಲೀಕರು. ನಾವು ರೆಡಿ ಇದ್ದೇವೆ.

ಶ್ರೀ ಜೆ. ಹೆಚ್. ಪಟೇಲ್ : ಈಗ ನೋಟಿಫಿಕೇಷನ್ ಇಷ್ಯ ಮಾಡಿದ್ದೇವಲ್ಲಾ, ಅದನ್ನು ಜಾರಿಗೆ ಕೊಡುತ್ತೇವೆ. ನಂತರ, ಮಾನ್ಯ ಖರ್ಗೆ ಅವರು, ತಾವು, ಕೆಲವು ಸ್ಥಳಗಳನ್ನು ಆರಿಸಿ, ಆ ಸ್ಥಳಕ್ಕೆ ನಾವೆಲ್ಲಾ ಹೋಗೋಣ, ಅಲ್ಲಿಯ ಜನರಿಗೆ ನಮ್ಮ ಕಷ್ಟ, ಸುಖ, ಏನು ಇದೆ, ನಮ್ಮ ಪರಿಸ್ಥಿತಿ ಏನು ಇದೆ, ಅದನ್ನು ನಾನು ಜನರಿಗೆ ವಿವರಿಸುತ್ತೇನೆ, ತಾವು, ಹೇಳಿ, ಆದರೆ ಈಗ ಮಾತ್ರ ನಮ್ಮೊಂದಿಗೆ ತಾವುಗಳು ಸಹಕರಿಸಿ.

(ಗೊಂದಲ)

ಶ್ರೀ ಬಿ. ಎಸ್. ಯುಡಿಯೂರಪ್ಪ : ಸ್ವಾಮಿ ಈಗ ನಾವು ಧರಣಿ ಮಾಡುವುದಿಲ್ಲ, ನಾಳೆಯಿಂದ ನಾವೆಲ್ಲಾ ಒಪ್ಪಿಕೊಳ್ಳುತ್ತೇವೆ, ಆದರೆ ಈಗ ಸದನವನ್ನು ಮೂರು ದಿವಸ ಮುಂದೂಡಿ, ನೀವು ಹೇಳಿದ ಕಡೆ ನಾವು ಬರುತ್ತೇವೆ, ಜನರ ಅಭಿಪ್ರಾಯ ಒಪ್ಪಿಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ನಾವು ತಲೆ ಬಾಗುತ್ತೇವೆ. ಈ ಸದನದ ಕಾರ್ಯಕಲಾಪ ಜನರ ಹಿತದೃಷ್ಟಿಯಿಂದ, ನಾವು ತಯಾರು ಇದ್ದೇವೆ. ನಾವು ಹೇಳಿದ ಊರಿಗೆ ನೀವು ಬರಬೇಡಿ, ನೀವು ಹೇಳಿದಂತಹ ಊರಿಗೆ ಬರುತ್ತೇವೆ. ಎಲ್ಲಾ ರೀತಿಯ ಗ್ರಾಹಕರನ್ನು ಭೇಟಿ ಮಾಡೋಣ. ಅವರ ಅಭಿಪ್ರಾಯ ತಿಳಿದುಕೊಳ್ಳೋಣ. ಆದರೆ ಇಲ್ಲಿ. ನಿಮಗೆ ಬಹುಮತ ಇದೆಯೆಂದು ಏನು ಬೇಕಾದರೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್ : ನಾವು ಇದರ ಬಗ್ಗೆ ಪೂರ್ವಾಪರ ಆಲೋಚನೆ ಮಾಡಿ, ಹಿಂದೆ ಜಂಟಿ ಸಮಿತಿ ಏನು ರೆಕಮೆಂಡ್ ಮಾಡಿತ್ತು ಆ ಜಂಟಿ ಸಮಿತಿಯು ರೆಕಮೆಂಡ್ ಮಾಡಿದ ಆಧಾರದ ಮೇಲೆ ನಾವು ನೋಟಿಫಿಕೇಷನ್ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಜಂಟಿ ಸಮಿತಿ ಶಿಫಾರಸ್ಸು ಮಾಡಿಲ್ಲ. ನಾವು ಇತ್ತೀಚಿನ ದಿನಗಳಲ್ಲಿ ನಿಮ್ಮ ಆಡಳಿತವನ್ನು ನೋಡಿದ್ದೇವೆ. ನ್ಯಾಯವಾಗಿ ಪ್ರಾಮಾಣಿಕವಾಗಿ ನೀವು ಅನೇಕ ಸಲ ನಮ್ಮ ಬೇಡಿಕೆಗಳ ಬಗ್ಗೆ ನಿಮ್ಮ ಪ್ರತಿಷ್ಟೆಯನ್ನೇ ಬಿಟ್ಟು ನಮ್ಮ ಜೊತೆ ಚರ್ಚೆ ಮಾಡುತ್ತಿದ್ದೀರಿ, ಆದರೆ, ಇತ್ತೀಚಿಗೆ ಅನಿವಾರ್ಯವಾಗಿ ಪ್ರತಿಷ್ಠೆಯಲ್ಲಿ ನಿಲ್ಲತಕ್ಕಂತಹ ಪರಿಸ್ಥಿತಿಗೆ ಹೋಗಿದೆ. ಆದರೆ ನೀವೇ ಸ್ವತಃ ಈ ಆದೇಶವನ್ನು ಹಿಂತೆಗೆದುಕೊಳ್ಳವುದಿಲ್ಲ ಎಂದು ಸ್ಪಷ್ಟವಾದ ಮಾತು ಹೇಳಿದ್ದೀರಿ, ಆದರೆ ಅದು ಒಳ್ಳೆಯ ಸೂಚನೆ ಅಲ್ಲ ಎಂದು ನಾನು ತಮಗೆ ಹೇಳುತ್ತಿದ್ದೇನೆ. ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ ನಮ್ಮನ್ನು ನೀವು ಅನಿವಾರ್ಯವಾಗಿ ಚಳುವಳಿಗೆ ಇಳಿಸುತ್ತಾ ಇದ್ದೀರಿ. ಅದುದರಿಂದ ತಮಗೆ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಾ ಇದ್ದೇನೆ. ತಾವು ದಯಮಾಡಿ ಇದನ್ನು ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿ, ಬೇಕಾದರೆ ಮಾನ್ಯ ಅಧ್ಯಕ್ಷರ ಕೊಠಡಿಗೆ ನಮ್ಮನ್ನು ಕರೆಯಿರಿ, ನಾವು ಬರುತ್ತೇವೆ, 10 ನಿಮಿಷ ಸಭೆಯನ್ನು ಮುಂದೂಡಿ, ಪುನರ್ ಪರಿಶೀಲನೆ ಮಾಡುತ್ತೇವೆ ಎನ್ನುವ ಬಗ್ಗೆ ಮಾತನಾಡಿ. ಮಾತನಾಡಿದ ಮೇಲೆನಮಗೂ ನಿಮಗೂ ಮಾತಿನಲ್ಲಿ ಹೊಂದಾಣಿಕೆ ಆದರೆ ಸರಿ, ಇಲ್ಲ ಅಂದರೆ ವಿಧಿ ಇಲ್ಲದೆ ಧರಣಿ ಮಾಡಬೇಕಾಗುತ್ತದ್ದೆ, ಬೇರೆ ಪ್ರಶ್ನೆನೇ ಇಲ್ಲ ಎನ್ನತಕ್ಕಂತಹ ಮಾತನ್ನು ತಮಗೆ ನಾವು ತಿಳಿಸುತ್ತಾ ಇದ್ದೇವೆ. ನೀವು ಅನೇಕ ಸಲ ಪ್ರಾಮಾಣಿಕವಾಗಿ ನಿರ್ಧಾರ ಕೈಗೊಳುತ್ತಿರಿ, ಆದರೆ ನಿಮ್ಮ ಸುತ್ತಮುತ್ತಲಿರುವ ಜನ ಬೇಡಿ, ಬೇಡಿ ಎಂದು ಒಂದು ರೀತಿಯ ಒತ್ತಡ ತರುತ್ತಿದ್ದಾರೆ, ಆ ಒತ್ತಡಕ್ಕೆ ತಾವು ಒತ್ತಡದ ಶಿಶು ಆಗಬೇಡಿ.

ಶ್ರೀ ಜೆ. ಹೆಚ್. ಪಟೇಲ್ : ಒಂದು ಊರಿನಲ್ಲಿ ಒಬ್ಬ ಸನ್ಯಾಸಿ ಒಂದು ಮನೆಯ ಮುಂದೆ ಹೋಗಿ ಭವತಿ ಭಿಕ್ಷಾಂದೇಹಿ ಎಂದು ಕೇಳುತ್ತಾನೆ. ಆಗ ಆ ಮನೆಯ ಹೆಣ್ಣು ಮಗಳು ಹೊರಗಡೆ ಬರುತ್ತಾಳೆ, ಆ ಸನ್ಯಾಸಿ ಆ ಹೆಣ್ಣು ಮಗಳನ್ನು ನೋಡಿ, ನೋಡು ನೀನು ಈಗ ನನಗೆ ಊಟಕ್ಕೆ ನೀಡಿದರೆ ಸರಿ, ಇಲ್ಲ ಎಂದರೆ ಪಕ್ಕದ ಊರಿನಲ್ಲಿ ಏನು ಮಾಡಿದ್ದೆ ಅದನ್ನೇ ಇಲ್ಲೂ ಮಾಡಬೇಕಾಗುತ್ತದೆ ಎಂದು ಸನ್ಯಾಸಿ ಹೇಳಿದ. ಅದಕ್ಕೆ ಪಾಪ ಆ ಹೆಣ್ಣು ಮಗಳು ಹೆದರಿಕೊಂಡು ಊಟಕ್ಕೆ ನೀಡಿದಳು. ಊಟ ನೀಡಿದ ಮೇಲೆ ಸ್ವಾಮಿ, ಪಕ್ಕದ ಊರಿನಲ್ಲಿ ನೀವು ಏನು ಮಾಡಿದ್ರಿ ಎಂದು ಕೇಳುತ್ತಾಳೆ. ಅದಕ್ಕೆ ಆ ಸನ್ಯಾಸಿ ಏನು ಹೇಳುತ್ತಾನೆ ಎಂದರೆ, ಅಲ್ಲಿ ಯಾರೂ ನನಗೆ ಊಟಕ್ಕೆ ನೀಡಲಿಲ್ಲ ಆದ್ದರಿಂದ ಉಪವಾಸ

ಮಾಡಿದ್ದೆ ಅದೇ ರೀತಿ ಇಲ್ಲೂ ಕೂಡ ಅದನ್ನೇ ಮಾಡುತ್ತಿದ್ದೆ ಎಂದು ಹೇಳಿದ. ಆದಕಾರಣ ಜಂಟಿ ಸಮಿತಿಯವರು ಹೆದರಿಕೆ ಹಾಕಿದರೆ ಉಪವಾಸ ಮಾಡುತ್ತಾರೆ ಅಷ್ಟೇ. ಅದಕ್ಕೆ ನಾನಾದರೂ ಏನು ಮಾಡಲಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿಯಾಗಿ ಸದನದ ಸಮಿತಿಗೆ ಗೇಲಿ ಮಾಡಿದರೆ ಹೇಗೆ? ಅವರು ಮಾಡಿದ ರೆಕಮೆಂಡೇಷನಲ್ಲಿ ಏನೂ ಅರ್ಥ ಇಲ್ಲವಾ? ಅದರಲ್ಲಿ ಅರ್ಥ ಇಲ್ಲದಿದ್ದರೆ ನಿಮಗೆ ನಾವು ಕೈ ಜೋಡಿಸಿ ಕೇಳುತ್ತಿರಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದು ಜನತಾ ಪ್ರತಿನಿಧಿಗೆ ಮಾಡುತ್ತಿರುವ ಅವಮಾನ, ಇದು ಒಬ್ಬ ಮುಖ್ಯ ಮಂತ್ರಿಗಳ ಬಾಯಿಂದ ಬರಬಾರದಾಗಿತ್ತು. ಕ್ಷಮಿಸಿ. ಮುಖ್ಯ ಮಂತ್ರಿಗಳೇ ನೀವು ಎಲ್ಲವರನ್ನೂ ಹಗುರವಾಗಿ ತೆಗೆದುಕೊಳ್ಳುತ್ತಾ ಇದ್ದೀರಿ, ಇದು ಒಳ್ಳೆಯದು ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯ ಮಂತ್ರಿಗಳೇ, ನಾವು ನಿಮಗೆ ಫೋಲಿಡೆಡ್ ಹ್ಯಾಂಡ್ ಕೇಳಿದ್ದೇವೆ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ನಾನೂ ಸಹ ವಿತ್‌ಫೋಲ್‌ಡೆಡ್ ಹ್ಯಾಂಡೇ ಕೇಳಿದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ : ನಿಮ್ಮ ಬಾಯಿಯಿಂಧ ಇಂತಹ ಮಾತು ಬರಬಾರದಾಗಿತ್ತು. ಜಾಯಿಂಟ್ ಸೆಲೆಕ್ಟ್ ಕಮಿಟಿ ಬಗ್ಗೆ ನೀವು ಇಷ್ಟೊಂದು ಹಗುರವಾಗಿ ಮಾತನಾಡಬಾರದು. ಯಾರು ಉಪವಾಸ ಇರುತ್ತಾರೆ? ಈ ರಾಜ್ಯದ ಜನ ನಿಮ್ಮನ್ನು ಉಪವಾಸ ಹಾಕುತ್ತಾರೆ. ನಿಮ್ಮ ರಾಜ್ಯದ ಜನ ನಿಮ್ಮನ್ನು ರಸ್ತೆಯಲ್ಲಿ ಓಡಾಡದ ಹಾಗೆ ಮಾಡುತ್ತಾರೆ. ಇದೇ ನೀವು ಚಾಲೆಂಜ್ ತೆಗೆದುಕೊಳ್ಳುವುದಾದರೆ, ನಾವು ನಿಮ್ಮ ಮಾತಿಗೆ ಒಪ್ಪಿ ಕೊಂಡಿದ್ದೇವೆ ಮುಖ್ಯಮಂತ್ರಿಗಳೇ, ಸದನವನ್ನು ಮೂರು ದಿವಸ ಮುಂದೂಡಿ, ನೀವು ಹೇಳಿದ ಕಡೆ ನಾವು ಬರುತ್ತೇವೆ. ಜನರು ನೀವು ಮಾಡಿರುವುದು ಸರಿ ಇದೆ ಎಂದರೆ ಇನ್ನೂ ಪರ್ ಹೆಚ್.ಪಿ.ಗೆ ಇನ್ನು ಐದು ನೂರು ರೂಪಾಯಿ ಹಾಕಿ ಎಂದರೆ ಹಾಕಿ, ಅದಕ್ಕೆ ನಮ್ಮದು ಏನೂ ಅಭ್ಯಂತರ ಇಲ್ಲ ; ಜನ ಒಪ್ಪಿಕೊಳ್ಳುವುದಾದರೆ. ನಾವು ತಯಾರಿದ್ದೇವೆ, ಅದಕ್ಕೂ ನೀವು ಒಪ್ಪಿಕೊಳ್ಳದಿದ್ದರೆ ನಿಮ್ಮ ಮೊಂಡತನ ನೋಡಿ ಜನಹಿತ ನಿಮಗೆ ಬೇಕಾಗಿಲ್ಲ ಎಂದು ಹೇಳಿ ಇದನ್ನು ಪ್ರತಿಭಟನೆ ಮಾಡಿ ಅನಿವಾರ್ಯವಾಗಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಜೆ. ವಿ. ಶಿವರಾಮರೆಡ್ಡಿ : ನಾವು ಸದನ ಸಮಿತಿಯಲ್ಲಿ 12 ಅಂಶಗಳನ್ನು ಸಲಹೆ ಮಾಡಿದ್ದೇವು, ಅದರಲ್ಲಿ ನಾವು ಪ್ರತಿ ವರ್ಷ ಬೆಲೆಯನ್ನು ಏರಿಸಬೇಕು ಎಂದು ಎಲ್ಲೂ ಕೂಡ ನಾವು ಹೇಳಿಲ್ಲ. ನೀವು ಅಪ್ಪಣೆ ಕೊಟ್ಟರೆ, ಬೇಕಾದರೆ ಓದಿ ಹೇಳುತೇನೆ.

(ಗೊಂದಲ)

ಅಧ್ಯಕ್ಷರು : ಬೇಡ, ಓದಬೇಡಿ.

ಶ್ರೀ ಜೆ. ವಿ. ಶಿವರಾಮರೆಡ್ಡಿ : ಆದುದರಿಂದ ಆ ರೀತಿ ಸಮಿತಿ ಸಲಹೆ ಮಾಡಿದೆ ಎನ್ನತಕ್ಕಂತದ್ದು ಸರಿ ಇಲ್ಲ. ಆದರೆ ಅದನ್ನು ಯಾರು ಹೇಳಿದ್ದಾರೆ ಅದು ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಮಿತಿಯಲ್ಲಿ ನೀವು ಇದ್ದೀರಿ ನೀವು ಹೇಳಿದ್ದೀರೋ? ಯಡಿಯೂರಪ್ಪನವರು ಹೇಳಿದ್ದಾರಾ? ಮಾಯ್ಲಿಯವರು ಹೇಳಿದ್ದಾರೆ?

ಶ್ರೀ ಜೆ. ವಿ. ಶಿವರಾಮರೆಡ್ಡಿ : ಇಲ್ಲಾ ನಾವು ಯಾರೂ ಆ ರೀತಿ ಹೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ನಿಲುವಳಿ ಸೂಚನೆ ಏನಾಯಿತು ಹೇಳಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಿದ ಮೇಲೆ ಧರಣ ಅನಿವಾರ್ಯ.

ಶ್ರೀ ಜೆ. ವಿ. ಶಿವರಾಮರೆಡ್ಡಿ : ವಿದ್ಯುತ್ ಉತ್ಪಾದನೆ ಹೆಚ್ಚು ಮಾಡಬೇಕು ಎನ್ನುವ ಕಾರಣಕ್ಕಾಗಿ ವಿದ್ಯುತ್ ಬೆಲೆಯನ್ನು ಹೆಚ್ಚು ಮಾಡಿದ್ದೇವೆಂದು ಅವರು ಹೇಳಿದ್ದಾರೆ. ವಿದ್ಯುತ್ ಉತ್ಪಾದನೆ ಜಾಸ್ತಿ ಮಾಡಬೇಕು ಅದಕ್ಕಾಗಿ ಹಣಬೇಕು ಆದ್ದರಿಂದ ದರವನ್ನು ಹೆಚ್ಚು ಮಾಡಿದ್ದೇವೆಂದು ಮುಖ್ಯಮಂತ್ರಿಯವವು ಹೇಳಿದ್ದಾರೆ. ಹೋದ ವರ್ಷ ಇದೇ ರೀತಿ ವಿದ್ಯುತ್ ದರವನ್ನು ಹೆಚ್ಚು ಮಾಡತಕ್ಕ ಸಂದರ್ಭದಲ್ಲಿ ಅವರ ನಿರೀಕ್ಷೆ ಇದ್ದದ್ದು 600 ಕೋಟಿ ರೂ. ಆದಾಯ ಬರುತ್ತದೆಂದು. ಆದರೆ ದರವನ್ನು ಹೆಚ್ಚು ಮಾಡಿದ ಮೇಲೂ 600 ಕೋಟಿ ರೂ. ಆದಾಯ ಬರಲಿಲ್ಲ. 250 ಕೋಟಿ ರೂಪಾಯಿ ಮಾತ್ರ ಬಂದಿರತಕ್ಕದ್ದು ಈಗ ಅವರು ಮತ್ತೆ 500 ಕೋಟಿ ಹೆಚ್ಚು ಮಾಡಿದರೆ, ಕೆಇಬಿಗೆ ಆದಾಯ ಬರುತ್ತದೆ ಅದರಿಂದ ಕೆ.ಇ.ಬಿ. ಯನ್ನು ಉತ್ತಮಗೊಳಿಸಬಹುದು ಎಂಬುದರಲ್ಲಿ ಯಾವುದೇ ಅರ್ಥವಿಲ್ಲ. ಕೇವಲ ವಿದ್ಯುತ್ ದರವನ್ನು ಹೆಚ್ಚು ಮಾಡುವುದರಿಂದ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಬಹುದು ಎನ್ನತಕ್ಕ ವಾದದಲ್ಲಿ ಯಾವುದೇ ಸತ್ಯಾಂಶವಿಲ್ಲ. ವಿದ್ಯುತ್ ದರವನ್ನು ಹೆಚ್ಚುಮಾಡುವುದನ್ನು ಒಪ್ಪಿಕೊಳ್ಳಲು ನಾವು ಸಿದ್ಧರಿಲ್ಲ. ಆದರೆ ವಿದ್ಯುತ್ ಉತ್ಪಾದನೆ ಜಾಸ್ತಿಯಾಗಬೇಕು ಎಂದು ಮುಖ್ಯಮಂತ್ರಿಯವರೇ ಹೇಳಿದ್ದಾರೆ ಅದನ್ನು ಒಪ್ಪಿಕೊಳ್ಳುತ್ತೇವೆ.

ವಿದ್ಯುತ್ ಉತ್ಪಾದನೆ ಮಾಡಲು ಏನೇನು ಪೂರಕ ಕಾರ್ಯಕ್ರಮಗಳಿದೆ, ಟ್ರಾನ್ಸ್‌ಮಿಷನ್ ಸಿಸ್ಟಂ ಉತ್ತಮಪಡಿಸಲು ಇನ್ನಿತರೆ ಎಲ್ಲಾದಕ್ಕೂ ನಾವು ಬೆಂಬಲವನ್ನು ಸಂಪೂರ್ಣವಾಗಿ ಕೊಡುತ್ತೇವೆ. ಆದರೆ ವಿದ್ಯುತ್ ಉತ್ಪಾದನೆ ಹೆಚ್ಚು ಮಾಡುವುದು ಮತ್ತು ವಿದ್ಯುತ್ ವಿತರಣೆಯನ್ನು ಉತ್ತಮಗೊಳಿಸುವುದಕ್ಕೆ ಬೆಲೆಯನ್ನು ಏರಿಸುವುದೊಂದೇ ಕಾರಣವೆಂದು ಹೇಳತಕ್ಕದ್ದು ಸಮರ್ಥನೀಯವಲ್ಲ. ಅದನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು : ನಿಯಮ 60ರ ಅಡಿಯಲ್ಲಿ ಮಾನ್ಯ ವಿರೋಧ ಪಕ್ಷದ ಮುಖಂಡರೆಲ್ಲಾ ಮಾತನಾಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಭಿನಂದಿಸುತ್ತೇವೆ. ಆದರೆ ಅವರು ಆ ನೋಟಿಫಿಕೇಷನ್‌ನ್ನು ವಿತ್‌ಡ್ರಾ ಮಾಡಿಕೊಳ್ಳಲು ಆಗುವುದಿಲ್ಲವೆಂದು ಹಠ ಹಿಡಿದಿದ್ದಾರೆ. ಆದ್ದರಿಂದ ದಯಮಾಡಿ ಆ ನೋಟಿಫಿಕೇಷನ್‌ನ್ನು ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ಅವರಿಗೆ ತಾವು ಏನಾದರೂ ನಮ್ಮ ವತಿಯಿಂದ ವಿನಂತಿ ಮಾಡಿಕೊಂಡರೆ ಒಳ್ಳೆಯದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯ ಬಗ್ಗೆ ನಾವು ಪ್ರಾರಂಭಿಕ ಹಂತದಿಂದ ಕೆಲವು ವಿಚಾರಗಳನ್ನು ಹೇಳಿದ್ದೇವೆ. ತಾವೂ ಸಹ ಕನ್‌ವಿನ್ಸ್ ಆಗಿದ್ದಿರಿ. ಸರ್ಕಾರದವರು ಆಗಿದ್ದಾರೆ, ಬೇಕಾದರೆ ಇನ್ನೂ ಕನವಿನ್ಸ್ ಮಾಡಲು ಪ್ರಯತ್ನ ಮಾಡುತ್ತೇವೆ. ಇವರು ಇಲ್ಲಿ ಒಪ್ಪದಿದ್ದರೆ ಜನತಾ ನ್ಯಾಯಾಲಯದಲ್ಲಿ ಜನರ ಹತ್ತಿರ ಒಪ್ಪುತ್ತಾರೆ. ಅದು ಬೇರೆ ವಿಚಾರ.

(ಗೊಂದಲ)

ನೀವು ಮೊಂಡುತನ ಮಾಡಿದರೆ ನಾಳೆ ಜನರು ನಿಮ್ಮನ್ನು ರಸ್ತೆಯಲ್ಲಿ ಓಡಾಡಲು ಬಿಡುವುದಿಲ್ಲ. ನಾವು ಜನತಾ ಪ್ರತಿನಿಧಿಗಳು ಇಲ್ಲಿದ್ದೇವೆ.

(ಗೊಂದಲ)

ಈ ಸದನವನ್ನು ಮೂರು ದಿವಸ ಮುಂದೂಡಿ, ಜನರ ಹತ್ತಿರ ಹೋಗೋಣ, ಜನರ ಅಭಿಪ್ರಾಯ ಕೊಟ್ಟಿದ್ದನ್ನು ಒಪ್ಪಿಕೊಳ್ಳಲು ನಾವು ತಯಾರಿಗಿದ್ದೇವೆ. ಮಾನ್ಯ ಅಧ್ಯಕ್ಷರೇ ತಾವು ದಯಮಾಡಿ ಮೂರು ದಿವಸ ಸದನವನ್ನು ಮುಂದೂಡಿ, ಸಭಾನಾಯಕರು ಅದನ್ನು ಒಪ್ಪಿಕೊಳ್ಳುತ್ತಾರೆ. ಜನರ ಅಭಿಪ್ರಾಯವನ್ನು ಕೇಳೋಣ. 300ರೂ. ಅಲ್ಲ 500 ರೂ.

ಬೇಕಾದರೂ ಪರ್ ಹೆಚ್.ಪಿ.ಗೆ. ಹೈಟೆನ್‌ಷನ್‌ಗೆ, ಜಾಸ್ತಿ ಮಾಡಿ ಎಂದು ಜನರು ಹೇಳಿದರೆ ತಾವು ಮಾಡಿ. ತಾವು ಆ ಚಾಲೆಂಜ್ ಸ್ವೀಕಾರ ಮಾಡಿ.

(ಎಲ್ಲಾ ವಿರೋಧ ಪಕ್ಷಗಳ ಸದಸ್ಯರುಗಳು ಧರಣಿ ಕುಳಿತರು)

ಅಧ್ಯಕ್ಷರು : ನಿಯಮ 60ರ ಅಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಎಲ್ಲಾ ವಿರೋಧ ಪಕ್ಷಗಳ ಮುಖಂಡರು ಕೊಟ್ಟಿರತಕ್ಕ ನಿಲುವಳಿ ಸೂಚನೆ ಏನಿದೆ ಇದರ ಮೇಲೆ ಪ್ರಾಸ್ತಾವಿಕ ಮನವಿಯನ್ನು ಸಲ್ಲಿಸತಕ್ಕ ವಾದವನ್ನು ಪೂರ್ಣವಾಗಿ ಕೇಳಿದ್ದೇನೆ. ಸರ್ಕಾರದ ನಿಲುವನ್ನು ಸಹ ಕೇಳಿದ್ದೇನೆ. ಈ ನಿಲುವಳಿ ಸೂಚನೆಗೆ ನಾನು ನನ್ನ ಅನುಮತಿಯನ್ನು ತಡೆ ಹಿಡಿದಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಮಗೆ ನಾವು ಮೊದಲೇ ಮನವರಿಕೆ ಮಾಡಿಕೊಟ್ಟಿದ್ದೇವೆ. ರಾಜ್ಯದ ರೈತರ ಹಿತದೃಷ್ಟಿಯಿಂದ ನಾವು ಕೇಳಬೇಕಾಗಿದೆ. ಅವರು ಯಾರಿಗೂ ಬಿಟ್ಟಿಲ್ಲ ಎಲ್ಲಾ ವರ್ಗದವರ ಮೇಲೂ ಬೆಲೆ ಜಾಸ್ತಿ ಮಾಡಿದ್ದಾರೆ. ನಾವು ಪದೇ ಪದೆ ರೈತರು, ಬಡವರು ಎನ್ನತಕ್ಕ ಶಬ್ದವನ್ನು ಉಪಯೋಗ ಮಾಡಿದರೆ ಅವರಿಗೆ ನೀವೇ ಗುತ್ತಿಗೆದಾರರೇನೋ ನಾವುಗಳು ಅವರಿಗಾಗಿ ಇಲ್ಲವೇ ಎನ್ನತಕ್ಕ ಭಾವನೆಯನ್ನು ಅವರು ವ್ಯಕ್ತ ಮಾಡುತ್ತಿದ್ದಾರೆ. ಇವತ್ತು ಅವರೇನು ನೋಟಿಫಿಕೇಷನ್ ಹೊರಡಿಸಿ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ ಅದನ್ನು ನೋಡಿದರೆ ಯಾರೂ ಸಹ ಅದನ್ನು ಒಪ್ಪಿಕೊಳ್ಳುವುದಿಲ್ಲ. ಅವರು ಕೆ.ಇ.ಬಿ. ಯ ಉನ್ನತಿಗೋಸ್ಕರ, ಇತರೆ ಹಿತಕೋಸ್ಕರವೆಂದು ಇಷ್ಟೇ ಹೇಳಿಕೊಳ್ಳಬಹುದು. ನಾವು ಸರ್ಕಾರದ ನಿಲುವೇನಿದೆ ಅದನ್ನು ಖಂಡಿಸಿ ನಾವು ಧರಣಿ ಮಾಡುತ್ತಿದ್ದೇವೆಯೇ ಹೊರತು ತಮ್ಮ ರೂಲಿಂಗ್ ಮೇಲೆ ಇತರೆ ವಿಷಯದ ಮೇಲೆ ನಾವು ಧರಣಿ ಮಾಡುತ್ತಿಲ್ಲ. ಮತ್ತೊಮ್ಮೆ ಅವರಲ್ಲಿ ಕೈಜೋಡಿಸಿ ಕೇಳಿಕೊಳ್ಳುವುದೇನೆಂದರೆ, ತಕ್ಷಣ ಈ ನೋಟಿಫಿಕೇಷನ್‌ನ್ನು ವಾಪಸ್ ಪಡೆದುಕೊಳ್ಳಬೇಕು ಮತ್ತು ಹೋದ ಸಲ ಯಾವ ರೀತಿ ಜಂಟಿ ಸದನದ ಸಮಿತಿ ಮಾಡಿ ಚರ್ಚೆ ಮಾಡಿ ಎಷ್ಟರ ಮಟ್ಟಿಗೆ ಅವರು ಬೆಲೆ ಕಡಿಮೆ ಮಾಡಲು ಒಪ್ಪಿಕೊಳ್ಳಬಹುದು, ಎಷ್ಟರಮಟ್ಟಿಗೆ ನಾವು ಸಹಾಯಕರಾಗಬಹುದು ಅದನ್ನು ನೋಡೋಣ. ಅದನ್ನು ಬಿಟ್ಟು ಹಠವನ್ನಿಟ್ಟುಕೊಂಡು ನಾನು 250 ಪರ್‌ಸೆಂಟ್ ಬೆಲೆ ಏರಿಸಿದ್ದೇ ಸರಿ, ಬಡವರ ಮೇಲೆ ತೆರಿಗೆ ಹಾಕಿದ್ದೇ ಸರಿ, ಎನ್ನತಕ್ಕ ನಿಲುವು ಅವರದಾಗಿದ್ದರೆ ನಾವು ಅನಿವಾರ್ಯವಾಗಿ ಅವರ ನಿಲುವನ್ನು ಖಂಡಿಸಿ ಧರಣಿಯನ್ನು ಮುಂದುವರೆಸಬೇಕಾಗುತ್ತದೆ. ತಾವು ಇದರ ಬಗ್ಗೆ ತಪ್ಪು ತಿಳಿದುಕೊಳ್ಳಬಾರದೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಅದೇ ಸಮಯದಲ್ಲಿ ಕಡತಕ್ಕೆ, ಹೊರಗಿನ ಜಗತ್ತಿಗೆ ಸತ್ಯದ ಪರಿಚಯವನ್ನು ಮಾಡಿಸಿಕೊಡುವ ದೃಷ್ಟಿಯಿಂದ ಅನುಮತಿಯನ್ನು ನಾನು ತಡೆಹಿಡಿದಿದ್ದೇನೆ. ಅಧಿವೇಶನದ ಮೊದಲನೆಯ ದಿವಸದಲ್ಲಿ ನಾವು ಇದ್ದೇವೆ, ಇನ್ನೂ 24-25 ದಿವಸಗಳ ಕಾಲ ಇಲ್ಲಿ ಕಲಾಪವನ್ನು ನಡೆಸಬೇಕಾಗಿದೆ. ಆಗ ತಮಗೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶ ಇರುತ್ತದೆ. ಆದ್ದರಿಂದ ಕಲಾಪವನ್ನು ಮುಂದೂಡಿ ಇದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವ ಅಗತ್ಯವಿಲ್ಲ ಎನ್ನತಕ್ಕ ದೃಷ್ಟಿಯಿಂದ ನಾನು ನನ್ನ ಅನುಮತಿಯನ್ನು ತಡೆಹಿಡಿದಿದ್ದೇನೆ. ಅದನ್ನು ಬಿಟ್ಟು ಬೇರೆ ಅರ್ಥ ಬರುವುದು ಬೇಡ. ನಿಮ್ಮ ಮತ್ತು ಸರ್ಕಾರದ ಮಧ್ಯ ವಿಚಾರವಿದೆ. ತಾವು ಯಾವ ರೀತಿಯಾದ ಒಡಂಬಡಿಕೆಯಿಂದ ಅದನ್ನು ನಿವಾರಿಸಿಕೊಳ್ಳುತ್ತೀರಿ ಎಂಬುದಕ್ಕೆ ತಮಗೇ ಬಿಡುತ್ತೇನೆ. ನನ್ನ ಸಹಾಯ ತಮ್ಮಿಬ್ಬರಿಗೂ ಸದಾಕಾಲ ಮಧ್ಯಸ್ತಿಕೆ ವಹಿಸಲು ನಾನು ಸಿದ್ಧನಾಗಿರುತ್ತೇನೆ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. ನಾವಿನ್ನು ಅಧಿವೇಶನದ ಮೊದಲನೆಯ ದಿವಸದ ಕಾರ್ಯಕಲಾಪದಲ್ಲಿದ್ದೇವೆ, ಆದ್ದರಿಂದ ಈ ಬಿಕ್ಕಟ್ಟನ್ನು ನಿವಾರಿಸೋಣ, ಇಲ್ಲದಿದ್ದರೆ ಚೆನ್ನಾಗಿ ಕಾಣುವುದಿಲ್ಲ. ಇನ್ನೂ ಸಾಕಷ್ಟು ಕಾರ್ಯಕ್ರಮಗಳನ್ನು ನಾವು ಇಟ್ಟುಕೊಂಡಿದ್ದೇವೆ.

ಶ್ರೀ ಜೆ. ಹೆಚ್. ಪಟೇಲ್ : ಅಧ್ಯಕ್ಷರೆ, ಅವರು ಎಷ್ಟು ಪ್ರೀತಿಯಿಂದ ನನ್ನಮೇಲೆ ಹೇಳಿದ್ದಾರೋ ಅಷ್ಟೇ ಪ್ರೀತಿಯಿಂದ ಅಷ್ಟೇ ಮಮತೆಯಿಂದ ಇದು ಸಾಧ್ಯವಿಲ್ಲವೆಂದು ಹೇಳಬೇಕಾಗುತ್ತದೆ. I cannot oblige you.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಿದ್ದರೆ ನಿಮ್ಮ ದಾರಿ ನಿಮಗೆ ನಮ್ಮ ದಾರಿ ನಮಗೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಅಮರೇಗೌಡ ಪಟೀಲರು ವಿರೋಧ ಪಕ್ಷದವರು ಧರಣಿಗೆ ಹೋಗುವಾಗ ಹೋಗಿ ಎಂದು ಕುಳಿತಲ್ಲಿಂದಲೇ ಹೇಳಿದರು. ನಾನು ಎಲ್ಲವನ್ನೂ ಗಮನಿಸುತ್ತಿರುತ್ತೇನೆ, ಯಾರ ಧ್ವನಿಯೆಂಬುದೂ ಸಹ ನನಗೆ ಗೊತ್ತಾಗುತ್ತದೆ. ಅವರುಗಳು ಸಹ ಹಿರಿಯ ಸದಸ್ಯರುಗಳಿದ್ದಾರೆ. ಆ ರೀತಿ ಮಾತನಾಡಬಾರದು. ಇಷ್ಟೊಂದು ಸಂಖ್ಯೆಯಲ್ಲಿ ವಿರೋಧ ಪಕ್ಷದವರಿದ್ದಾಗ ಅವರು ಯಾವುದೋ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನೀವು ಹೋಗಿ ಎಂದು ಕುಳಿತಲ್ಲಿನಿಂದ ಹೇಳುವುದು ಸರಿಯಲ್ಲ. ಕೆಲವು ವಿಷಯಗಳನ್ನು ನಾವು ಗಂಭೀರವಾಗಿ ನೋಡಬೇಕಾಗುತ್ತದೆ. ಇನ್ನೊಮ್ಮೆ ದಯಮಾಡಿ ನೋಡಿ ಎರಡೂ ಕಡೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. If you can resolve the house. this crisis and take up the business, I will he thankful to

6-10 ಪಿ.. ಎಂ.

(ಧರಣಿ ನಿರತರಾಗಿದ್ದ ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಬಾಯಿಯಿಂದ ತಮ್ಮ ಸ್ಥಾನಕ್ಕೆ ಹಿಂದಿರುಗಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಮ್ಮಿಂದ ಯಾವ ತೊಂದರೆಯೂ ಕೂಡ ಇಲ್ಲ. ಏಕೆಂದರೆ ಅವರು ನೋಟಿಫಿಕೇಷನ್ ಅನ್ನು ಮೊನ್ನೆ ತಾನೇ ಇಷ್ಯೂ ಮಾಡಿದ್ದಾರೆ. ಈ ಅಧಿಸೂಚನೆಯನ್ನು ವಿತ್‌ಡ್ರಾ ಮಾಡುವುದರಿಂದ ಅಥವಾ ತಡೆ ಹಿಡಿಯುವುದರಿಂದ ಅವರಿಗೆ ಭಾರೀ ಲುಕ್ಸಾನು ಆಗುತ್ತದೆ ಎನ್ನುವ ಪ್ರಶ್ನೆ ಇಲ್ಲಿಲ್ಲ. ಅಥವಾ ಇದರಿಂದ ಆರ್ಥಿಕ ಮುಗ್ಗಟ್ಟು ಬರುತ್ತದೆ ಎಂದೇನೂ ಕೂಡ ಇಲ್ಲ. ಹೇಗೂ ನಾವು ಸದನ ಸೇರಿದ್ದೇವು. ಬೇಕಾದರೆ ನೀವು ಈ ಸದನ ಮುಗಿಯುವುದರೊಳಗಾಗಿ ಒಂದು ವರದಿ ಕೊಡಿ ಎಂದು ಕೋರಿ ಎಂದು ಕೋರಿ ಸದನ ಸಮಿತಿ ರಚಿಸಬಹುದು. ಅಲ್ಲಿಯವರೆಗೆ ಈ ಅಧಿಸೂಚನೆ ತಡೆಹಿಡಿಯಬಹುದು. ಸದನ ಸಮಿತಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿಕ್ಕೆ ಬರುತ್ತದೆ. ಕಾಲ ಈಗಲೂ ಕೂಡ ಮಿಂಚಿಲ್ಲ. ಆದರೂ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಹಠ ಹಿಡಿದು ಕುಳಿತರೆ ಇದಕ್ಕೆ ನಾವೇನು ಹೇಳಬೇಕು? ಈ ಸಮಸ್ಯೆಯನ್ನು ಬಗೆ ಹರಿಸಬೇಕೆಂಬ ದೃಷ್ಟಿಯಿಂದಲೇ ನಾವಿಲ್ಲಿ ಮನವಿ ಮಾಡಿದ್ದೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಬಾವಿಗೆ ವಾಪಸ್ ಬಂದರು)

(ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ನಾನೇನು ಹೇಳುತ್ತೇನೆ ಎಂದರೆ, ಇಂತಹ ಒಂದು ಸನ್ನಿವೇಶ ಸದನದಲ್ಲಿ ಉದ್ಭವವಾಗಿರತಕ್ಕದ್ದು ಇದೇ ಮೊದಲನೇ ಸಲ ಏನಲ್ಲ. ತಾವೆಲ್ಲರೂ ಸಾಕಷ್ಟು ಹಿರಿಯರಿದ್ದೀರಿ, ನನಗಿಂತಲೂ ಹೆಚ್ಚು ಅನುಭವ ಹೊಂದಿರುವವರು ಈ ಸದನದಲ್ಲಿದ್ದೀರಿ. ಪ್ರಾಸ್ತಾವಿಕ ಮನವಿಯನ್ನಷ್ಟೇ ತಾವು ಸಲ್ಲಿಸಿದ್ದಿರಿ. ನಾನು ಅದಕ್ಕೆ ಅನುಮತಿಯನ್ನು ತಡೆಹಿಡಿದಿದ್ದೇನೆ. ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ನಮಗೆ ಈ ಅಧಿವೇಶನದ ಅಂತ್ಯದೊಳಗಾಗಿ ಅನೇಕ ಅವಕಾಶಗಳು ಸಿಗುತ್ತವೆ. ಏಕೆ ಇಷ್ಟು ತೀವ್ರ ಮಟ್ಟಕ್ಕೆ ಈಗಲೇ ಹೋಗಬೇಕು? ಏನಾದರೂ ಪುನರ್‌ಪರಿಶೀಲನೆ ಮಾಡಿ ನಿಮ್ಮ ತೀರ್ಮಾನವನ್ನು ಅವರೂ ನೀವೂ ಯಾವ ರೂಪದಲ್ಲಿ ಮತ್ತೆ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಮತ್ತೆ ಇನ್ನೊಂದು ಸಲ ನೀವೂ ಅವರೂ ಕುಳಿತು ಚರ್ಚೆ ಮಾಡಿದರೆ ಏನಾದರೂ ಪರಿಹಾರ ಕಾಣಬಹುದು. ಇದು ಕ್ರೈಸಿಸ್ ಏಕೆ ಆಗಬೇಕು ಎಂಬುದಷ್ಟೇ ನನ್ನ ಅಭಿಪ್ರಾಯ.

(ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ಈ ಸನ್ನಿವೇಶದಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರಂತಹ ಹಿರಿಯ ಸದಸ್ಯರು ಅಭಿಪ್ರಾಯವನ್ನು ನಾನು ಕೇಳಬಯಸುತ್ತೇನೆ.

(ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ಮಾನ್ಯ ಖರ್ಗೆಯವರೇ ತಾವು ಎಕ್ಸ್‌ಟ್ರಾ ಕೇರ್ ತೆಗೆದುಕೊಳ್ಳುತ್ತಿದ್ದೀರಿ. ನನಗೆ ಅಂತಹ ಇನ್‌ಟೆನ್‌ಷನ್ಸ್ ಏನೂ ನನಗೆ ಇಲ್ಲ. ಇದು ಈ ಸದನದ ಪದ್ಧತಿ. ನಾನು ಅಲ್ಲಿ ಕುಳಿತು ಕೆಲಸ ಮಾಡುವ ವೇಳೆಗೂ ಕೂಡ ನೋಡಿದಂತೆ ಇಂತಹ ಸನ್ನಿವೇಶ ಉಂಟಾದಾಗ ಸದನದಲ್ಲಿ ಅತ್ಯಂತ ಹಿರಿಯರು ಯಾರು ಇರುತ್ತಾರೋ ಅವರ ಸಲಹೆಗಳನ್ನು ಪಡೆದುಕೊಂಡು, ಅವರ ಸಹಾಯವನ್ನು ಪಡೆದು ಇಂತಹ ಒಂದು ಬಿಕ್ಕಟ್ಟು ಉಂಟಾದಾಗ ಅದನ್ನು ನಿವಾರಣೆ ಮಾಡತಕ್ಕದ್ದು ಈ ಸದನದಲ್ಲಿ ಬಂದಿರತಕ್ಕ ಸಂಪ್ರದಾಯ. ಆದ್ದರಿಂದ ನಾನು ಮಾನ್ಯ ಮೊಯಿಲಿಯವರನ್ನು ನನಗೆ ನೆರವು ನೀಡಲು ಕೋರುತ್ತಿದ್ದೇನೆ. ಇದರಿಂದ ನಾವೇನಾದರೂ ಪರಿಹಾರ ಕಾಣಬಹುದೇ? ಎಂಬುದನ್ನು ನೋಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ನಡೆದಂತಹ ಚರ್ಚೆಯಲ್ಲಿ ನಾನು ಸದನದಲ್ಲಿದ್ದರೂ ಕೂಡ ಭಾಗವಹಿಸಲಿಕ್ಕೆ ಆಗಲಿಲ್ಲ. ಏಕೆಂದರೆ ಈ ಬಗ್ಗೆ ನಿಮ್ಮ ನಾಯಕರು ಮತ್ತು ಅನೇಕ ಸದಸ್ಯರೂ ಕೂಡ ಮಾತನಾಡಿದರು. ಈಗ ತಾವು ಹೇಳಿದ ಪ್ರಕಾರ ಇವತ್ತು ಯಾವುದೂ ಕೂಡ ಅಂತಿಮ ಏನಲ್ಲ. ಸರ್ಕಾರ ಯಾವಾಗಲೂ ಕೂಡ ಈ ವಿಚಾರದಲ್ಲಿ ಆಲೋಚನೆ ಮಾಡಬೇಕು. ಏಕೆಂದರೆ ಒಂದು ವರ್ಷಕ್ಕೊಮ್ಮೆ ದರ ಏರಿಕೆ ಮಾಡಬೇಕೆಂಬ ಆಲೋಚನೆಯಿಂದ ಸರ್ಕಾರ ಬಹುಶಃ ಟಾರೀಫ್ ಅನ್ನು ಬದಲಾವಣೆ ಮಾಡಿರಬಹುದು. ಅದಕ್ಕೆ ಕಾರಣ ಕೂಡ ಇರಬಹುದು. ಆದರೆ ಅದನ್ನು ಮಾಡುವಾಗ ಕೂಡ ಎಲ್ಲಾ ಸಮಯದಲ್ಲೂ ಕೂಡ ಒಂದು ಟಾರೀಫ್ ಕಮಿಟಿ ಆಗುತ್ತದೆ. ಟಾರೀಫ್ ಕಮಿಟಿಯವರು ವರದಿ ಮಾಡಿದ ಮೇಲೆ ಬೋರ್ಡ್ ಅದನ್ನು ಸರ್ಕಾರಕ್ಕೆ ನಿವೇದನೆ ಮಾಡಿಕೊಂಡು ಅದರ ಆಧಾರದ ಮೇಲೆ ಯಾವಾಗಲೂ ಕೂಡ ನಿರ್ಣಯವಾಗುತ್ತದೆ. ನಾವು ತಿಳಿದುಕೊಂಡಂತೆ ಇವತ್ತು ಈ ಸದನದಲ್ಲಿ ನಡೆದಂತಹ ನಡವಳಿಕೆ ಪ್ರಕಾರ ಯಾವುದೇ ರೀತಿಯ ಟಾರೀಫ್ ಕಮಿಟಿ ಆಧಾರದ ಮೇಲೆ ತಾವು ಬೆಲೆ ಹೆಚ್ಚಳ ಮಾಡಿಲ್ಲ. ಟಾರೀಫ್ ಕಮಿಟಿ ತಾವು ಎಲ್ಲಿ ಮಾಡಿದ್ದೀರಿ? ಟಾರೀಫ್ ಕಮಿಟಿ ಏನು ವರದಿ ಕೊಟ್ಟಿದೆ? ತಾವು ಟಾರೀಫ್ ಕಮಿಟಿಯನ್ನೇ ಮಾಡಿಲ್ಲ. ಅದು ಯಾವಾಗಲೂ ದರ ಏರಿಸುವ ಶಾಸ್ತ್ರೀಯ ನೀತಿ. ಒಂದೇ ಸಮನೆ ಬೋರ್ಡ್‌ನವರು ಆರ್‌ಬಿಟ್ರರಿಯಾಗಿ ಅದನ್ನು ಮಾಡತಕ್ಕದ್ದು

ಸರಿಯಲ್ಲ. ನಾವೂ ಕೂಡ ಆಡಳಿತದಲ್ಲಿದ್ದೆವು. ಆ ಟಾರೀಫ್ ಕಮಿಟಿಯನ್ನೂ ಕೂಡ ನಾವು ಸೇರಿಸುತ್ತೇವೆ. ಸರ್ಕಾರ ಕ್ಯಾಬಿನೆಟ್ ಅಥವಾ ಇತರ ಬೇರೆ ಬೇರೆ ಹಂತಗಳಲ್ಲಿ ಅದನ್ನು ಪರಿಶೀಲನೆ ಮಾಡಬೇಕು. ಒಟ್ಟು ಆದಾಯ ಬರಬೇಕು ಎಂಬುದೇನೋ ಸರಿ. ಆ ಒಟ್ಟು ಆದಾಯ ಬರಬೇಕಾದರೆ ಎಲ್ಲಿ ಎಷ್ಟು ದರ ವಿಧಿಸಬೇಕೆಂಬುದನ್ನೂ ಕೂಡ ಒಂದು ವೇಳೆ ಟಾರೀಫ್ ಕಮಿಟಿ ವರದಿ ಕೊಟ್ಟಿದ್ದರೆ ಬಹುಶಃ ನಾವು, ವಿರೋಧ ಪಕ್ಷದ ನಾಯಕರಿದ್ದಾರೆ, ಫ್ಲೋರ್ ಲೀಡರ್ಸ್ ಇದ್ದಾರೆ, ಅವರಿಗೂ ಕೂಡ ಸ್ವಲ್ಪ ಟಾರೀಫ್ ಕಮಿಟಿ ಯಾವ ಆಧಾರದ ಮೇಲೆ ಈ ನಿರ್ಣಯಕ್ಕೆ ಬಂದಿತು ಎಂಬ ಬಗ್ಗೆ ನಮ್ಮನ್ನು ಸರ್ಕಾರ ಕನ್‌ವಿನ್ಸ್ ಮಾಡಿದರೆ ನಾವು ಅದಕ್ಕೆ ಒಪ್ಪಬಹುದು. ಟಾರೀಫ್ ಕಮಿಟಿ ಎಂಬುದೊಂದು ಇರಲೇಬೇಕು. ಆ ಕಮಿಟಿಯಲ್ಲಿ ಸರ್ಕಾರದಲ್ಲಿ ಇದ್ದವರು ಇರುತ್ತಾರೆ, ರಿಟೈರ್‌ಲ್ಲಿದವರೂ ಇರುತ್ತಾರೆ, ಹೊರಗಿನ ತಜ್ಞರೂ ಕೂಡ ಅದರಲ್ಲಿ ಇರುತ್ತಾರೆ. ಕೆ.ಇ.ಬಿ. ಮಾತ್ರ ಒಂದು ತಜ್ಞರ ಸಮಿತಿಯಾಗುವುದಿಲ್ಲ. ವರ್ಷಕ್ಕೆ ಶೇಕಡ 10ರಷ್ಟು ಮಾಡಬಹುದು. ಇನ್‌ಫ್ಲೇಷನ್ ಅಥವಾ ಬೇರೆ ಏನಾದರೂ ಒಂದು ಎಕ್ಸ್‌ಟ್ರಾಡಿನರಿ ಸರ್ಕಮ್‌ಸ್ಟೆನ್ಸಸ್‌ನಲ್ಲಿ ಹೆಚ್ಚು ಖರ್ಚು ಮಾಡಲಿಕ್ಕೆ ಬಂದರೆ ಅದೂ ಒಂದು ಫ್ಯಾಕ್ಟರ್ ತೆಗೆದುಕೊಂಡು ಯಾವಾಗಲೂ ಕೂಡ ದರ ಫಿಕ್ಸ್ ಮಾಡತಕ್ಕದ್ದು ಇರುವ ನಿಯಮ. ಆದರೆ ಇಲ್ಲಿ ಏನಾಗಿದೆ ಅಂದರೆ, ಸಾರ್ವಜನಿಕರಿಂದ ಹಾಗೂ ವಿರೋಧ ಪಕ್ಷಗಳಿಂದ ಏಕೆ ಆತಂಕ ವ್ಯಕ್ತವಾಗುತ್ತಿದೆ ಎಂದರೆ ಇದ್ಯಾವುದೇ ಮಾನದಂಡವನ್ನು ಇಡದೇ ತಾವು ಒಂದೇ ಸಮನೆ ದರ ಏರಿಸಿದ್ದೀರಿ. ತಾವು ಈ ಬಗ್ಗೆ ಕ್ಯಾಬಿನೆಟ್‌ನಲ್ಲೇ ನಿರ್ಣಯ ತೆಗೆದುಕೊಂಡಿರಬಹುದು. ಕೆ.ಇ.ಬಿ. ಶಿಫಾರಸ್ಸು ಮೇರೆಗೆ ತಾವು ನಿರ್ಣಯ ತೆಗೆದುಕೊಂಡಿರಬಹುದು. ಆದರೆ ಅದು ಯಾವಾಗಲೂ ಕೂಡ ಸರ್ವಸಮ್ಮತ ಆಗುವುದಿಲ್ಲ. ಅಥವಾ ಅದೊಂದು ಸರ್ಕಾರದಿಂದ ಸ್ವೀಕಾರಾರ್ಹವಾದ ನಿರ್ಣಯವಾಗುವುದಿಲ್ಲ. ಆಗ ಸಂಘರ್ಷಣೆಗಳು ಪ್ರಾರಂಭವಾಗುತ್ತವೆ. ಅದನ್ನು ಯಾರು ಇವತ್ತು ಪ್ರಸ್ತಾಪ ಮಾಡಬೇಕಾಗುತ್ತದೆ? ಸಾಮಾನ್ಯವಾಗಿ ವಿರೋಧ ಪಕ್ಷಗಳು ಆ ವಿಷಯವನ್ನು ಪ್ರಸ್ತಾಪಿಸಲೇ ಬೇಕಾಗುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಚರ್ಚೆ ನಡೆಸಲು ಯಾವಾಗಲೂ ಮುಕ್ತವಾಗಿರಬೇಕು. ಇವತ್ತು ಅಧಿವೇಶನದ ಪ್ರಾರಂಭದ ದಿವಸ. ಅಧಿವೇಶನದ ಪ್ರಾರಂಭವದ ದಿವಸವೇ ನಾವು ಇದಕ್ಕೆ ಏನಾದರೂ ಒಂದು ಪರಿಹಾರ ಹುಡುಕದಿದ್ದರೆ ನಾಳೆಯೂ ಕೂಡ ಧರಣಿ ಮುಂದುವರೆಯಬಹುದು. ಅದು ಅವರ ವಿವೇಚನೆಗೆ ಬಿಟ್ಟದ್ದು. ಇದರಿಂದ ಮುಂದೆ ನಡೆಯತಕ್ಕಂತಹ ಅನೇಕ ಗಂಭೀರವಾಗಿರತಕ್ಕಂತಹ ವಿಚಾರಗಳು, ಸಾರ್ವಜನಿಕ ಮಹತ್ವದ ವಿಷಯಗಳ ಚರ್ಚೆಗೆ ಸಾಕಷ್ಟು ಅಡೆತಡೆ ಉಂಟಾಗುತ್ತದೆ. ಒಂದೇ ಸಲ ನಾನು ಎಲ್ಲವನ್ನೂ ಸಾಕಷ್ಟು ಅಡೆತಡೆ

ಉಂಟಾಗುತ್ತದೆ. ಒಂದೇ ಸಲ ನಾನು ಎಲ್ಲವನ್ನೂ ಮಾತನಾಡಿ ಬಿಟ್ಟಿದ್ದೇನೆ, ಆದ್ದರಿಂದ ಇದೇ ನಮ್ಮ ನಿರ್ಣಯ ಎಂದು ಹೇಳುವುದು ಸರಿಯಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಬಹಳ ಹಿರಿಯರು, ಆಡಳಿತದಲ್ಲಿ ಸಂಪೂರ್ಣವಾದಂತಹ ಅನುಭವ ಇದ್ದವರು. ತಾವು ಸ್ವಲ್ಪ ಇದರಲ್ಲಿ ತೆರೆದ ಮನಸ್ಸಿನವರಾಗಿ. ನಾಳೆ, ನಾಡಿದ್ದು ಅಥವಾ ಆಚೆ ನಾಡಿದ್ದು ಮಾತನಾಡ್ಕೋಣ ಎಂದು ಮಾನ್ಯ ಮುಖ್ಯಮಂತ್ರಿಗಳು ಫ್ಲೋರ್‌ಲೀಡರ್ಸ್‌ಗೆ ಕೋರಬಹುದು. ಆದರೆ ನಾನು ಮಾತನಾಡುವುದೇ ಇಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬಾರದು. ನೀವು ನಮ್ಮನ್ನು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಆರ್‌ಬಿಟ್ರರಿ ನಿರ್ಣಯವನ್ನು ಆರ್‌ಬಿಟ್ರರಿಯಾಗಿ ತಾವು ಜಸ್ಟಿಫೈ ಮಾಡುತ್ತಾ ಹೋದರೆ ಬಹುಶಃ ಅದಕ್ಕೆ ಒಂದು ಕೊನೆ ಎಂಬುದು ಇರುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, ನಾನು ಆ ತರಹ ಯಾವುದೇ ಹಠ ಅಥವಾ ಅಹಂಕಾರದಿಂದ ನಾನು ಆ ಮಾತನ್ನು ಹೇಳಲಿಲ್ಲ. ನಾನು ವಾಸ್ತವಿಕ ಸ್ಥಿತಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ತಮ್ಮೆಲ್ಲರಿಗೂ ವಿವರಿಸಿ ದಯವಿಟ್ಟು ನಮ್ಮೊಂದಿಗೆ ಸಹಕರಿಸಿ ಎಂದು ಮನವಿ ಮಾಡಿಕೊಂಡೆ. ಈ ವರ್ಷದ ಸ್ಥಿತಿಗತಿ ಆ ರೀತಿ ಇದೆ. ದಯವಿಟ್ಟು ಸಹಕರಿಸಿ. ಎಲ್ಲಾ ರೋಗಗಳಿಗೂ ದರ ಏರಿಕೆಯೇ ಮದ್ದು ಎಂದು ನಾನು ಹೇಳುವುದಿಲ್ಲ. This is a first step Inevitable step. ಅದಕ್ಕೆ ತಮ್ಮ ಸಹಕಾರ ಕೇಳಿದೆ. ಅದಕ್ಕೆ ತಾವು ಸಹಕಾರ ಕೊಡುವುದಿಲ್ಲ ಎಂದರೆ ನಾನೇನು ಮಾಡಲಿ?

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಸಹಕಾರ ಯಾವಾಗಲೂ ಕೊಟ್ಟಿದ್ದೇವೆ. ಮಾನ್ಯ ಅಧ್ಯಕ್ಷರು ಕಳೆದ ಬಾರಿ ಇದೇ ವಿಷಯದ ಬಗ್ಗೆ ಜಂಟಿ ಸದನ ಸಮಿತಿ ರಚಿಸಿದ್ದರು. ನಾವು ಆಗ ಒಂದು ರೀಸನಬಲ್ ರಿಪೋರ್ಟ್‌ವೊಂದನ್ನು ಸರ್ಕಾರಕ್ಕೆ ನೀಡಿದೆವು. ಏಕಮುಖವಾದ ವರದಿಯನ್ನು ನಾವು ಆಗ ಕೊಡಲಿಲ್ಲ. ತಮ್ಮ ಸರ್ಕಾರದ ಮತ್ತು ಕೆ.ಇ.ಬಿ.ಯ ಎಲ್ಲಾ ಸಂಕಷ್ಟಗಳನ್ನು ಪೂರ್ಣವಾಗಿ ಅರಿತು ನಾವು ವರದಿ ಕೊಟ್ಟಿದ್ದೆವು. ಅದುದರಿಂದ ಜಂಟಿ ಸದನದ ಸಮಿತಿ ಮಾಡಿದಲ್ಲಿ ಈ ಕಡೆಯವರು ಅನ್‌ರೀಸನಬಲ್ ರೇಟ್ ಹಾಕುತ್ತಾರೆ, ತರ್ಕಬದ್ಧವಾದ ರೇಟ್ ಶಿಫಾರಸ್ಸು ಮಾಡುವುದಿಲ್ಲ ಎಂಬ ಭಯ ಬೇಡ. ತಾವು ದರ ಏರಿಕೆ ಬಗ್ಗೆ ಕನ್‌ವಿನ್ಸ್ ಆಗಿರಬಹುದು. ಸಚಿವ ಸಂಪುಟವೂ ಕೂಡ ಕೆ.ಇ.ಬಿ. ಯವರ ವರದಿಯ ಆಧಾರದ ಮೇಲೆ ದರ ಏರಿಸಲು ಕನ್‌ವಿನ್ಸ್‌ಆಗಿರಬಹುದು. ಆದರೆ ಇಲ್ಲಿ ಜನ ಅಂತ ಏನಿದ್ದಾರೆ, ವಿರೋಧ ಪಕ್ಷಗಳು ಅಂತ ಏನಿವೆ ಅವನ್ನೂ ತಾವು ಗಣನೆಗೆ

ತೆಗೆದುಕೊಳ್ಳಬೇಕು. ಇಂತಹ ಒಂದು ಬಹಳ ಸೂಕ್ಷ್ಮವಾದಂತಹ, ಜನಗಳ ದಿನನಿತ್ಯದ ಒಂದು ವಾಹಿವಾಟಿಗೆ ಸಂಬಂಧಪಟ್ಟಂತಹ ವಿಚಾರದಲ್ಲಿ, ಅವರೊಂದು ವಿಶೇಷವಾದ ರೀತಿಯ ಆತಂಕವನ್ನು ಹೊಂದಿರುವಾಗ, ಆ ಆತಂಕವನ್ನು ಪರಿಹಾರ ಮಾಡತಕ್ಕಂತಹ ಒಂದು ಹೃದಯ ಶ್ರೀಮಂತಿಕೆ ತಮ್ಮ ಹತ್ತಿರ ಇದೆ. ತಮ್ಮಲ್ಲಿ ಆ ಕಳಕಳಿ ಇರಬೇಕಾದುದು ಸಹಜ. ಆ ಕಳಕಳಿಯನ್ನು ತಾವು ಯಾವ ರೀತಿ ತೋರಿಸುತ್ತೀರಿ? ಅದನ್ನು ನೀವು ಈ ಸದನದಲ್ಲಿ ತರಿಸಬೇಕಾಗುತ್ತದೆ. ಆದ್ದರಿಂದ ನಾನು ಕನ್‌ವೀನ್ಸ್ ಆಗಿದ್ದೇನೆ, ನನ್ನ ಸಹೋದ್ಯೋಗಿಗಳೂ ಕನ್‌ವೀನ್ಸ್ ಆಗಿದ್ದಾರೆ ಎಂದು ತಾವು ಹೇಳಿ ಬಿಟ್ಟರೆ ಸಾಲದು. ನಾವೂ ಕೂಡ ನಿಮ್ಮ ಸಹೋದ್ಯೋಗಿಗಳೇ ಆಗಿದ್ದೇವೆ.

ನಮ್ಮ ಸಹಕಾರವನ್ನು ಸರ್ಕಾರಕ್ಕೆ ಕೊಡುತ್ತೇವೆ. ಕೆ.ಇ.ಬಿ. ಯಿಂದ ವಿದ್ಯುತ್ ಸರಬರಾಜು ಮಾಡಲಿಕ್ಕೆ ಹಾಗೂ ಬೇರೆ ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಹಣ ಬೇಕೇ ಬೇಕೆಂದು ನಮಗೂ ಗೊತ್ತಿದೆ. ಹಣ ಇಲ್ಲದೆ ಕೆ.ಇ.ಬಿ. ನಡೆಯುವುದಿಲ್ಲ ಆದುದರಿಂದ ಈ ದೃಷ್ಟಿಯಿಂದ ವಿರೋಧ ಪಕ್ಷದವರಾದ ಈ ಕಡೆಯವರನ್ನು ಸ್ವಲ್ಪ ವಿಶ್ವಾಸಕ್ಕೆ ತೆಗೆದುಕೊಳ್ಳಿ, ಇವತ್ತಲ್ಲ, ನಾಳೆ ಅಥವಾ ನಾಳೆ ಅಲ್ಲ. ನಾಡಿದ್ದು ಇವರೆನ್ನೆಲ್ಲಾ ಸೇರಿಸಿ ಒಂದುಸಭೆ ನಡೆಸಿ ನಮಗೆ ಈ ರೀತಿ ತೊಂದರೆ ಇದೆ ಎಂದು ಹೇಳಿ, ನಾವು ಕೂಡ ಸಹಕಾರ ಕೊಡುತ್ತೇವೆ. Cabinet colleagues alone are not experts. ಕೆ. ಇ.ಬಿ. ನಡೆಯಬೇಕು ಎಂದು ನಮಗೂ ಕೂಡ ಆತಂಕ ಇದೆ. ರೈತರಿಗೆ ವಿದ್ಯುತ್ ಬೇಕು ಕೈಗಾರಿಗೆಳಿಗೆ ಬೇಕೇ ಬೇಕು ಆದ್ದರಿಂದ ಕೆ.ಇ.ಬಿ. ನಡೆಯಲೇಬೇಕು. ಕೆ.ಇ.ಬಿ.ಯ ಚಟುವಟಿಕೆಗಳಿಗೆ ಆತಂಕ ಬರದ ರೀತಿಯಲ್ಲಿ ಸಹಜವಾಗಿ ಹಾಗೂ ನ್ಯಾಯಯುತವಾಗಿ ವರ್ಷ ವರ್ಷ ಬೆಲೆ ಏರಿಸಿದರೆ ಯಾರೂ ಅದಕ್ಕೆ ಅಡ್ಡಿ ಮಾಡಲು ಸಾಧ್ಯವಿಲ್ಲ. ವಿದ್ಯುತ್ ದರ ಏರಿಸಬಾರದೆಂದು ನಮ್ಮ ಕಡೆಯವರು ಮೊಂಡು ಹಠ ಏನೂ ಮಾಡುತ್ತಿಲ್ಲ ಆದರೆ ಎಷ್ಟು ಏರಿಸಬೇಕು? ಎಲ್ಲಿ ಏರಿಸಬೇಕು ಎಂಬುದನ್ನು ಯೋಚಿಸಬೇಕು. ಈಗಿರತಕ್ಕ ಹಣದುಬ್ಬರ, ಬೇರೆ ಬೇರೆ ಫ್ಯಾಕ್ಟರ್ಸ್‌ಗಳನ್ನು ಲೆಕ್ಕ ಹಾಕಿಕೊಂಡು ಟ್ಯಾರಿಫ್ ಕಮಿಟಿಯವರು ಒಂದು ನಿರ್ಧಾರಕ್ಕೆ ಬರುತ್ತದೆ. ಈ ಟ್ಯಾರಿಫ್ ಕಮಿಟಿಯವರು ಒಂದು ನಿರ್ಧಾರಕ್ಕೆ ಬರುತ್ತದೆ. ಈ ಟ್ಯಾರಿಫ್‌ಕಮಿಟಿ ಇಲ್ಲದಂಥ ಕಾಲದಲ್ಲಿ ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪನವರು ಆಗ ವಿದ್ಯುತ್ ಸಚಿವರಾಗಿದ್ದರು. ಅವರು ಟ್ಯಾರಿಫ್ ಕಮಿಟಿಯನ್ನು ಪ್ರಾರಂಭ ಮಾಡಿದಂಥ ಕಾಲದಲ್ಲಿ ಬರೀ ತಜ್ಞರಷ್ಟೇ ಅಲ್ಲದೆ ವಿಧಾನಸಬೆ ಹಾಗೂ ವಿಧಾನಪರಿಷತ್ತಿನ ಸದಸ್ಯರುಗಳನ್ನು ಸದಸ್ಯರನ್ನಾಗಿ ಮಾಡಿದರು. ನಾನೂ ಕೂಡ ಅದರ ಒಬ್ಬ ಸದಸ್ಯನಾಗಿದ್ದೆ ಈ ರೀತಿ ಟ್ಯಾರಿಫ್ ಕಮಿಟಿಯನ್ನು ಮಾಡಿದಂಥ ಪ್ರಸಂಗ ಕೂಡ ಕರ್ನಾಟಕ ರಾಜ್ಯದ ಇತಿಹಾಸದಲ್ಲಿದೆ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದಕ್ಕಿಂತ ಮೊದಲೇ ಛೇಂಬರ್ಸ್ ಆಫ್ ಕಾಮರ್ಸ್, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಯವರು ಮತ್ತು ವ್ಯವಸಾಯ ಇಲಾಖೆಯ ಪ್ರತಿನಿಧಿಗಳನ್ನು ಕರೆಯಿಸಿ ಈಗಾಗಲೇ ಒಂದು ತಿಂಗಳ ಕೆಳಗೆ ಅವರಿಗೆ ಇರತಕ್ಕ ಸ್ಥಿತಿ ಪರಿಸ್ಥಿತಿಗಳ ಬಗ್ಗೆ ಕೇಳಿದ್ದೇವೆ ಆಗ ಕೆಲವರು ತಕರಾರು ಮಾಡಿದರು. ಇನ್ನು ಕೆಲವರು ಬಹಳ ಸೀರಿಯಸ್ ಅಬ್ಜೆಕ್ಷನ್ ಮಾಡಿದರು. ಆದರೆ ನಾನು ಹೇಳಿದೆ ನೀವು ಹಠ ಬಿಡದಿದ್ದರೆ ಕೆ.ಇ.ಬಿಯನ್ನು ಮುಚ್ಚಬೇಕಾಗುತ್ತದೆಂದು. ಈ ವಿಷಯ ಮೊಯ್ಲಿಯವರಿಗೂ ಗೊತ್ತಿದೆ. Mr. Moily knows the position as much as much as I know . Why don't you accept the reality?

ಈಗ ನಾನು ವಾದ ಮಾಡುವುದಕ್ಕೆ ಎಂದು ಹೇಳುತ್ತಿಲ್ಲ, I appeal to you. I appeal to Mr. Kharge. I appeal to Mr. Yediyurappa and all. Please co-operate with us. Let us do something in the interests of the State. ಇದರಲ್ಲಿ ಯಾವುದೇ ರೀತಿಯ ಪ್ರತಿಷ್ಠೆ ಇಲ್ಲ, ಅದಕ್ಕೆ ನೀವು ದಯಮಾಡಿ ಸಹಕರಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಕಣ್ಣು ಮುಚ್ಚಿಕೊಂಡು ಸಹಕರಿಸುವುದಕ್ಕೆ ಆಗುವುದಿಲ್ಲ. ಸ್ವಲ್ಪ ಕಣ್ಣು ತೆರೆಯಿರಿ. ಈ ಕಡೆಯಲ್ಲಿ ಕಣ್ಣು ಮುಚ್ಚಿ ಕುಳಿತುಕೊಂಡಿದ್ದೇವೆ ಎಂದು ತಿಳಿದುಕೊಳ್ಳಬೇಡಿ. ಅಥವಾ ನಿಮ್ಮ ಕಣ್ಣು ತೆರಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. Reality cannot be a myth. Reality is a reality. It is opposite to Myth ಈಗ ನಮ್ಮ ವಾದ ಏನು ಎಂದರೆ you have not based this tariff revision on the basis of reality, but on the myth. What is that Myth? ಎರಡು ಕೂಡ Suppose we are in a position to explore or we are in a position to convince you, to explore that kind of a myth upon which the tariff is fixed ಈಗ ತಾವು ಎಲ್ಲಾ ಬಾಗಿಲುಗಳನ್ನು ಮುಚ್ಚಿದ್ದೀರಿ We can meet together at a point and decide about it.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ತಾವು ಇವತ್ತು ಕೊನೆಗಳಿಗೆಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳನ್ನು ಗಮನಿಸುತ್ತಿದ್ದೀರಿ, ನಾವು ಏನು ಸಲಹೆ ಕೊಟ್ಟೆವು. ನಾವು ಏನು ಯವುದೇ ಒಂದು ಕಾರಣದಿಂದ ಇಲ್ಲಿ ಇದನ್ನು ಅರ್ಥ ಮಾಡಿಕೊಳ್ಳದೆ, ಇದನ್ನು ವಿರೋಧ ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿಗಳ ಮನಸ್ಸಿನಲ್ಲಿ ಇದ್ದರೆ, ಅದಕ್ಕೋಸ್ಕರ ಅವರೇ ಕೊಟ್ಟಂತಹ ಸಲಹೆಯಂತೆ ನಾವು ನಿಮ್ಮನ್ನು ಮನವಿ ಮಾಡಿಕೊಳ್ಳುತ್ತಿದ್ದೇವೆ. ಸಭಾ

ನಾಯಕರು ಒಪ್ಪಿಕೊಳ್ಳುವುದಾದರೆ ನಮ್ಮದೇನೂ ಇದಕ್ಕೆ ಯಾವುದೇ ಕಪಿ ಮುಷ್ಠಿಯಿಂದ ನಾವು ಹೇಳಿದಂತೆ ನಡೆಯಬೇಕು ಅನ್ನುವ ಅಪೇಕ್ಷೆ ನಮಗಿಲ್ಲ. ರಾಜ್ಯದ ಜನ ನೆಮ್ಮದಿಯಿಂದ ಬದುಕಬೇಕು ಎನ್ನುವುದು ನಮ್ಮ ಉದ್ದೇಶ. ಈಗಾಗಲೇ ರೋಗಿ ಆತ ಓವರಡೋಸ್ ಕೊಟ್ಟರೆ ಮುಗಿದೇ ಹೋಗುತ್ತಾನೆ ಎನ್ನತಕ್ಕಂಥದ್ದು ನಮ್ಮ ಕಾಳಜಿ. ಪ್ರತಿಪಕ್ಷದಲ್ಲಿರತಕ್ಕಂಥ ನಮ್ಮ ಕರ್ತವ್ಯ ಜನರ ಪರವಾಗಿ ನಮ್ಮ ಕರ್ತವ್ಯ ನಾವು ಮಾಡುತ್ತಿದ್ದೇವೆ. ನಾನು ತಮ್ಮ ಮೂಲಕ ಸಭಾನಾಯಕರಿಗೆ ಸಲಹೆ ಕೊಡುತ್ತಿದ್ದೇನೆ. ಈ ನಿಮಿಷಕ್ಕೆ ರಾಜ್ಯದ ಜನರ ಹಿತದೃಷ್ಟಿಯಿಂದ ಚರ್ಚೆ ಮಾಡುತ್ತಿದ್ದೇವೆ. ನೀವೇ ಹೇಳಿದೀರಿ, ರಾಜ್ಯದ ಜನತೆಗೆ ಈ ಏರಿಕೆ ಮಾಡುವುದು ಒಪ್ಪಿಗೆ ಇದೆ. 300 ಅಲ್ಲ ಅವರು 500 ಕ್ಕೂ ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದಾರೆ ಇವರು ಇಲ್ಲಿ ಮಾತನಾಡುತ್ತಿದ್ದಾರೆ ಎಂದು ಅಧ್ಯಕ್ಷರೆ, ತಾವು ಒಪ್ಪಿಕೊಳ್ಳುವುದಾದರೆ ಈ ಸದನವನ್ನು ಮೂರು ದಿವಸ ಮೂಂದೂಡಿ. ನೀವು ಒಪ್ಪುವಂತಹ ಸ್ಥಳಗಳಿಗೆ, ನೀವು ಆರಿಸುವಂತಹ ಸ್ಥಳಗಳಿಗೆ ಹೋಗೋಣ. ಜನರ ದೃಷ್ಟಿಯಲ್ಲಿ ಇದೊಂದು ಐತಿಹಾಸಿಕ ತೀರ್ಮಾನ ಆಗಬಹುದು. ನಾವು ಪ್ರತಿಪಕ್ಷದಲ್ಲಿರತಕ್ಕ ನಾವು ಆಡಳಿತ ಪಕ್ಷದವರಿಗಿಂತ 8-10 ಜನ ಕಡಿಮೆ ಇರಬಹುದು. ಆದರೆ ನಾವು ಎಲ್ಲಾ ಜನಾಭಿಪ್ರಾಯವನ್ನು ತಿಳಿದು ಕೊಂಡಿದ್ದೇವೆ. ನಮ್ಮ ಮಾತಿನಲ್ಲಿ ನಂಬಿಕೆ ಇಲ್ಲ ಅಂದರೆ ಸದನದವನ್ನು ಮೂರು ದಿವಸ ಮುಂದೂಡಿ ನೀವು ಹೇಳಿದಂಥ ಸ್ಥಳಗಳಿಗೆ ನಾವು ಬರುತ್ತೇವೆ. ಎಲ್ಲಾ ರೀತಿಯ ಗ್ರಾಹಕರೊಡನೆ ಚರ್ಚೆ ಮಾಡೋಣ. ಅವರ ಅಭಿಪ್ರಾಯದ ಪ್ರಕಾರ ನೀವು ಮಾಡಿರುವುದು ಸರಿ ಎನಿಸಿದರೆ, ಅವರು ಇದಕ್ಕೆ ಒಪ್ಪಿಗೆ ಕೊಟ್ಟರೆ, ನಮ್ಮದೇನೂ ಅಭ್ಯಂತರವಿಲ್ಲ. ಅದನ್ನು ಒಪ್ಪಿಕೊಂಡು ನಾವು ಇಲ್ಲಿ ತಟಸ್ಥವಾಗಿ ಕುಳಿತುಕೊಳ್ಳುತ್ತೇವೆ. ಜನರೇ ನಮ್ಮ ಮಾಲೀಕರು ಸರ್ಕಾರ ಅವರಿಂದಲೇ ನಡೆಯುವುದು. ಸರ್ಕಾರಕ್ಕೆ ತೆರಿಗೆ ಕೊಡುವವರು ಅವರೇ, ಅವರು ಹೇಳುವಂತೆ ಕೇಳಲು ನೀವು ಸಿದ್ಧರಾದರೆ ನಿಮಗೆ ಪ್ರಜಾತಂತ್ರದ ಬಗ್ಗೆ ವಿಶ್ವಾಸ ಇದೆ, ಪ್ರತಿಪಕ್ಷದ ಬಗ್ಗೆ ವಿಶ್ವಾಸ ಇದೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಅದಿಲ್ಲ ಎಂದರೆ ಮೊಯಿಲಿಯವರು ಹೇಳಿದ ಹಾಗೆ ನಿಮ್ಮನ್ನು ಕಾಡಿಬೇಡಿ ಇವತ್ತಲ್ಲ ನಾಳೆ ನಿಮ್ಮ ಅಭಿಪ್ರಾಯವನ್ನು ಕೊಟ್ಟು ಬಿಡಿ ಎಂದು ಕೇಳಲಿಲ್ಲ. ನಮ್ಮ ಕರ್ತವ್ಯ ನಾವು ಮಾಡಿದ್ದೇವೆ. ಜನತೆಗೂ ಗೊತ್ತಾಗಲಿ, ಇದೊಂದು ಮೊಂಡ ಸರ್ಕಾರ, ಹಠದ ಸರ್ಕಾರ ಜನಹಿತ ಈ ಸರ್ಕಾರಕ್ಕೆ ಬೇಕಾಗಿಲ್ಲ. ಅದನ್ನು ಇಲಾಖೆಯು ಸರಿಪಡಿಸಲಿಕ್ಕೆ ತಯಾರು ಇಲ್ಲ, ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ತಯಾರಿಲ್ಲ. ಸೋರುವಿಕೆಯನ್ನು ತಪ್ಪಿಸಲಿಕ್ಕೆ ರೆಡಿ ಇಲ್ಲ, ಈ ಸರ್ಕಾರದಲ್ಲಿ ಲೂಟಿ ನಡೆಯುತ್ತಿದೆ. ಅದರ ಪರಿಣಾಮವನ್ನು ಜನರು ಅನುಭವಿಸಬೇಕು. ಅಂದರೆ ಪ್ರತಿಪಕ್ಷದಲ್ಲಿದ್ದುಕೊಂಡು ಇದನ್ನೆಲ್ಲಾ ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ

ಸಾಧ್ಯ ಇಲ್ಲ, ಆದುದರಿಂದ ಧರಣಿ ಕುಳಿತುಕೊಳ್ಳುತ್ತೇವೆ. ಏನಾಗುತ್ತದೆ ಅದು ಆಗಲಿ, ಜನರೇ ತೀರ್ಮಾನ ಮಾಡಲಿ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಯಾವುದೇ ಸರ್ಕಾರಕ್ಕೆ ಪ್ರತಿಷ್ಠೆಯಾಗಿಲೀ, ಅಹಂಕಾರವನ್ನಾಗಲಿ ತೋರತಕ್ಕಂಥ ಉದ್ದೇಶ ಇಲ್ಲ, ನನ್ನ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯನ್ನು ಮಾಡಿದ್ದೇವೆ. ಅದರಲ್ಲಿ ಕೆ.ಇ.ಬಿ.ಯ ಬಗ್ಗೆ ಅಧ್ಯಯನ ಮಾಡಿ ಅದಕ್ಕೆ ಏನು ಚಿಕಿತ್ಸೆ ಕೊಡಬೇಕು ಅದನ್ನು ಕೊಟ್ಟು ಅದನ್ನು ಜೀವಂತಗೊಳಿಸುವ ಬಗ್ಗೆ ವಿಚಾರ ಮಾಡಬೇಕು. ಕಳೆದ ಸಾರಿ ನಾವು ವಿದ್ಯುತ್ ದರ ಹೆಚ್ಚು ಮಾಡಿದರೂ ಕೂಡ 400-500 ಕೋಟಿಗಳವರೆಗೆ ಸರ್ಕಾರದಿಂದ ಸಬ್ಸಿಡಿ ಕೊಡಬೇಕಾಗಿ ಬಂತು. ಪ್ರತಿ ತಿಂಗಳೂ ಕೂಡ ಸುಮಾರು 85 ಕೋಟಿ ಕಲ್ಲಿದ್ದಲನ್ನು ಕೊಂಡುಕೊಳ್ಳುವುದಕ್ಕೆ ಕೆ.ಪಿ.ಸಿ.ಗೆ ಕೊಡಬೇಕಾಗಿದೆ. ಕೆ.ಇ.ಬಿ.ಯಿಂದ ಸುಮಾರು 40-50 ಕೋಟಿ ಕೊಟ್ಟರೂ ಕೂಡ ಇವತ್ತು ಸರ್ಕಾರದಿಂದ ಇನ್ನೂ 25-30 ಕೋಟಿ ಕಲ್ಲಿದ್ದಿಲಿಗಾಗಿ ಕೊಡಬೇಕಾಗಿದೆ. ನಾನು ಪ್ರತಿವರ್ಷ ಒಂದು ಕಡೆ ಸಬ್ಸಿಡಿ ಕೊಡತಕ್ಕದ್ದನ್ನು ಕೊಟ್ಟುಕೊಂಡು ಹೋಗುತ್ತಿದ್ದೇವೆ. ಇನ್ನು ಎಲ್ಲಿಯವರೆಗೆ ಕೆ.ಇ.ಬಿ.ಯವರಿಗೆ ಸಬ್ಸಿಡಿಯನ್ನು ಕೊಡುತ್ತಾ ಹೋಗಬೇಕಾಗುತ್ತದೆ ಎನ್ನುವ ಒಂದು ಪ್ರಶ್ನೆ ಬರುತ್ತದೆ. ಇನ್ನೊಂದು ಕೆ.ಇ.ಬಿ.ಗೆ ಆಗಿರತಕ್ಕ ಸೋರುವಿಕೆ ಇರಬಹುದು, ಕಳ್ಳತನ ಇರಬಹುದು ಇದನ್ನು ಸರಿಪಡಿಸಲಿಕ್ಕೆ ನಾವು ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಈ ಮಧ್ಯೆ ವಾಸ್ತವವಾಗಿ ಕೆ.ಇ.ಬಿಯನ್ನು ಸರಿ ಪಡಿಸಬೇಕಾದರೆ ಎಷ್ಟು ಭಾರವನ್ನು ಜನರಿಗೆ ಹಾಕಲಿಕ್ಕೆ ಸಾಧ್ಯ ಆಗುತ್ತದೆ ಎನ್ನತಕ್ಕದ್ದನ್ನು ಅಧ್ಯಯನ ಮಾಡಿ, ಕೆ.ಇ.ಬಿಯವರ, ಬೇರೆ ತಜ್ಞರ ಕೈಗಾರಿಕೋದ್ಯಮಿಗಳ ರೈತರ ಇನ್ನು ಅನೇಕರ ಪ್ರತಿನಿಧಿಗಳನ್ನು ಕರೆದು ಅವರ ಜೊತೆ ಚರ್ಚೆ ಮಾಡಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಆ್ಯವರೇಜ್ 13 ಪರ್ಸೆಂಟ್ ಹಾಕಿದರೂ ಕೂಡ ಸರ್ಕಾರ ಪ್ರತಿ ತಿಂಗಳೂ 30 ಕೋಟಿ ರೂ. ಸಬ್ಸಿಡಿಯನ್ನು ಕೆ.ಇ.ಬಿ.ಗೆ ಕಲ್ಲಿದ್ದಲು ಕೊಂಡುಕೊಳ್ಳಲಿಕ್ಕೆ ಕೊಡಲೇ ಬೇಕಾಗಿದೆ. ಇವತ್ತು ವಾಸ್ತಾವವಾದ ಸ್ಥಿತಿಯನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಜನರ ಹಿತದೃಷ್ಟಿಯಿಂದ ಕೆ.ಇ.ಬಿಯವರ ಹಿತದೃಷ್ಟಿಯಿಂದ ಕೂಡ ಇದಕ್ಕೆ ಸಹಕರಿಸಿ. ಜನರಿಗೆ ರೈತರಿಗೆ ಪಂಪ್‌ಸೆಟ್‌ಗಳಿಗೆ, ಕೈಗಾರಿಕೆಗಳಿಗೆ ನಿರಂತರವಾಗಿ ವಿದ್ಯುತ್ತನ್ನು ಕೊಡಬೇಕು ಎನ್ನತಕ್ಕ ಕಾರಣಗಳಿಗೋಸ್ಕರ ಈ ರೀತಿ ವಿದ್ಯುತ್ ದರವನ್ನು ಹೆಚ್ಚಳ ಮಾಡಿದ್ದೇವೆ. ನೀವು ವಾಸ್ತವಿಕತೆಯನ್ನು ಅರ್ಥ ಮಾಡಿಕೊಂಡು ಸರ್ಕಾರದ ಜೊತೆ ಸಹಕರಿಸಬೇಕು. ಇದು ರೈತರಿಗೆ ಭಾರ ಆಗಬಹುದು. ಆದರೆ ನಾವು ಅನೇಕ ಕಡೆ ರೈತರ ಹತ್ತಿರ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಜನರನ್ನು ಭೇಟಿ ಮಾಡಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಸಾರ್ವಜನಿಕ ಸಭೆಗಳಲ್ಲೂ ಕೂಡ ನಾವು ಇದರ ಬಗ್ಗೆ

ಪ್ರಸ್ತಾಪ ಮಾಡಿದ್ದೇವೆ. ಒಂದು ಹೆಚ್.ಬಿ.ಗೆ 300 ರೂಪಾಯಿ ಹೆಚ್ಚಿಗೆ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಜನರಿಗೆ ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಜನರು ಮಾತ್ರ 300 ರೂಪಾಯಿ ಕೊಡಲ್ಲ ಎಂದು ಹೇಳಲಿಲ್ಲ ಆದರೆ ವಿದ್ಯುತ್ತನ್ನು ಮಾತ್ರ ಸರಿಯಾಗಿ ಕೊಡಿ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸದನ ನಡೆಯುತ್ತದೆ ಎಂದು ನಿಮಗೆ ಗೊತ್ತಿತ್ತಲ್ಲ, ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು.

ಶ್ರೀ ಸಿದ್ಧರಾಮಯ್ಯ : ಇದಕ್ಕಿಂತ ಹಿಂದೆಯೇ ಈ ನಿರ್ಧಾರ ತೆಗೆದುಕೊಂಡಿದ್ದು, ಈಗಾಗಲೇ 1-7-97 ರಿಂದ ಈ ಆಕ್ಟ್ ಜಾರಿಯಲ್ಲಿದೆ. ರಾಜ್ಯದ ಹಿತದೃಷ್ಟಿಯಿಂದ, ಜನತೆಯ ಹಿತ ದೃಷ್ಟಿಯಿಂದ ಕರ್ನಾಟಕ ವಿದ್ಯುತ್ ಮಂಡಳಿಯ ಹಿತದೃಷ್ಟಿಯಿಂದ ಇದನ್ನು ಮಾಡಿದ್ದೇವೆಯೇ ಹೊರತು ಭಾರ ಹಾಕಬೇಕೆಂಬ ಉದ್ದೇಶದಿಂದಲ್ಲ. ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಕೆ.ಇ.ಬಿ. ಮತ್ತು ಜನರ ಹಿತದೃಷ್ಟಿಯಿಂದ ಒಳ್ಳೆಯದಲ್ಲ.

ಶ್ರೀ ವಾಟಾಳ್ ನಾಗರಾಜ : ಸರಿ ಸ್ವಾಮಿ, ನಿಮ್ಮ ದಾರಿ ನಿಮಗೆ, ನಮ್ಮ ದಾರಿ ನಮಗೆ.

ಅಧ್ಯಕ್ಷರು : ಇವತ್ತು ಏನೋ ಸಮಯ ಸರಿಯಾಗಿ ಇದ್ದ ಹಾಗೆ ಇಲ್ಲ, ಇವತ್ತು ಸಭೆಯನ್ನು ಮುಂದೂಡೋಣ. ಈಗ ಸಭೆಯು ಮುಕ್ತಾಯಗೊಂಡು ನಾಳೆ ಬೆಳಿಗ್ಗೆ 10-00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 30ನೇ ಜುಲೈ ಮಾಹೆ 1997ರ ಬುಧವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.